(ಸದನವು ಮಧ್ಯಾಹ್ನ 2.00 ಘಂಟೆಗೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3.00 ಘಂಟೆಗೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಸದನವು ಮಧ್ಯಾಹ್ನ 3 ಗಂಟೆ 51 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

5.ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವ ಜರೂರು ವಿಷಯದ ಚರ್ಚೆ

ವಿಷಯ:- ರಾಜ್ಯದಲ್ಲಿ ತೀವ್ರ ಬರಗಾಲ ಉಂಟಾಗಿದ್ದು ಕುಡಿಯುವ ನೀರಿನ ಸಮಸ್ಯೆಯಾಗಿರುವ ಬಗ್ಗೆ.

ಉಪಾಧ್ಯಕ್ಷರು: ಕಿಮ್ಮನೆ ರತ್ನಾಕರ್‌ರವರು ಮಾತನಾಡಿ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಬರಗಾಲದಲ್ಲಿ ನೀರಿನ ಕೊರತೆ ನಮಗೆ ಇದ್ದು ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದು ಈ ಹಿಂದೆ ಬರಗಾಲ ಪ್ರದೇಶಗಳೆಂದು ಘೋಷಣೆ ಮಾಡಿದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ನಾವೀಗ ಜನವರಿ ಯಿಂದ ಫೆಬ್ರವರಿ ತಿಂಗಳಿಗೆ ಬಂದಿದ್ದೇವೆ. ಮಲೆನಾಡಿನಲ್ಲಿಯೂ ಕೂಡ ಈ ಸಮಸ್ಯೆ ಉದ್ಭವವಾಗಿದೆ. ನಮ್ಮಲ್ಲಿ ಕುಡಿಯುವ ನೀರಿನ ಬಗ್ಗೆ ಏನು ಸಮಸ್ಯೆಯಿದೆ ಅದನ್ನು ಬಗೆಹರಿಸುವ ಪ್ರಯತ್ನದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಕೂಡ ಸರ್ಕಾರ ವಿಫಲವಾಗಿದೆ. ಪ್ರತಿ ಸಾರಿಯೂ ನಾವು Task-force ನಲ್ಲಿ 2ರಿಂದ 3 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದೇವೆ. ಆದರೆ, ಪ್ರತಿ ಹಂತದಲ್ಲಿಯೂ ಕೂಡ ನಮಗೆ 7 ರಿಂದ 8 ಲಕ್ಷ ರೂಪಾಯಿ ಮೇಲ್ಪಟ್ಟು ಹಣ ಬಂದಿಲ್ಲ. Task-force ನಿಂದ ನಮಗೆ ಹೆಚ್ಚು ಕಡಿಮೆ ಪ್ರತಿ ಹಂತದಲ್ಲಿ ಸುಮಾರು 8 ಲಕ್ಷ ರೂಪಾಯಿ ಹಣ ಬಂದಿರಬಹುದಷ್ಟೆ.

ನಮ್ಮದು ಮಲೆನಾಡು ನಮಗೆ ಈಗಲೇ ಕುಡಿಯುವುದಕ್ಕೆ ನೀರು ಇಲ್ಲ. ಕುಡಿಯುವುದಕ್ಕೆ ನೀರು ಕೊಡುವ ಸಲುವಾಗಿ ನಮಗೆ ಹಣ ಕೊಡಬೇಕೆಂದು ಅನೇಕ ಸಾರಿ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ನನ್ನ ಪ್ರದೇಶದಲ್ಲಿ ಸುಮಾರು 400 ರಿಂದ 500 ಜನ ನಮಗೆ ಬಾವಿ ಬೇಕೆಂದು ಅರ್ಜಿ ಕೊಟ್ಟಿದ್ದಾರೆ. ಸರ್ಕಾರದ ಬಹಳ ದೊಡ್ಡ ವೈಫಲ್ಯಗಳೇನೆಂದರೆ, ಕರ್ನಾಟಕದಲ್ಲಿ ಅನೇಕ ರೀತಿಯ ಸಮಸ್ಯೆಗಳು ವಿವಿಧ ವಿಭಾಗಗಳಿವೆ. ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದರಲ್ಲಿ ಸರ್ಕಾರ ವಿಫಲವಾಗಿದೆ. ಮಲೆನಾಡಿನ ಸಮಸ್ಯೆಗಳೇ ಬೇರೆ, ಬಯಲು ಸೀಮೆಯ ಸಮಸ್ಯೆಗಳೇ ಬೇರೆ. ಅದಕ್ಕೆ ಬೇರೆ ರೀತಿಯ ಹಣದ ಮೂಲಗಳನ್ನು ಒದಗಿಸತಕ್ಕಂಥ ಪ್ರಯತ್ನ ಮಾಡಬೇಕು. ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಏನಾಗಿದೆ ಎಂದರೆ, ನನ್ನ ಕ್ಷೇತ್ರದಲ್ಲಿ ಅತಿವೃಷ್ಟಿಯೂ ಇದೆ ಅನಾವೃಷ್ಟಿಯೂ ಇದೆ. ನನ್ನ ತೀರ್ಥಹಳ್ಳಿಯ ಭಾಗದಲ್ಲಿ ಅತಿವೃಷ್ಟಿಯಿಂದ ಬಹಳಷ್ಟು ಅನಾಹುತಗಳಾಗಿವೆ. ಅದೇರೀತಿಯಾಗಿ ಮಂಡಗದ್ದೆ ಮತ್ತು ಹುಂಬುಚ ಹೋಬಳಿ ಮಳೆಯಾಗದೆ ಅನಾವೃಷ್ಟಿಯಾಗಿದೆ. ಅಲ್ಲಿಯೂ ಕೂಡ ಅದೇ ಸಮಸ್ಯೆಯಿದೆ. ಕಳೆದ ನಾಲ್ಕು ವರ್ಷಗಳಲ್ಲಿ 500 ಜನ ನನಗೆ ಬಾವಿ ಬೇಕೆಂದು ಅರ್ಜಿ ಕೊಟ್ಟಿದ್ದಾರೆ. ನನಗೆ 40 ಬಾವಿ ಕೊಡುವುದಕ್ಕೆ ಆಗಿಲ್ಲ. ನಾವು ಏನು ಉತ್ತರ ಹೇಳಬೇಕು? Mini Water Supply Scheme ಏನೀದೆ ಅದು ಬಯಲು ಸೀಮೆಯ ಭಾಗದಲ್ಲಿ ಯಶಸ್ಸು ಅದಷ್ಟು ನಮ್ಮಲ್ಲಿ ಆಗುವುದಿಲ್ಲ. ತಮಗೂ ಅದರ ಅರಿವಿದೆ. ಒಂದು Mini Water Supply Scheme ನಿಂದ 50 ರಿಂದ 100 ಮನೆಗಳಿಗೆ ನೀರು ಕೊಡಬಹುದು. ಅದಕ್ಕಿಂತ ಜಾಸ್ತಿ ಕೊಡುವುದಕ್ಕಾಗಲ್ಲ. ಏಕೆಂದರೆ, ನಮ್ಮ ಭಾಗದಲ್ಲಿ 15 ರಿಂದ 20 ಲಕ್ಷ ರೂಪಾಯಿ ಹಣ ಹಾಕಿದರೂ ಕೂಡ ಅಲ್ಲಿ ಮನೆಗಳು ದೂರ ಇರುವುದರಿಂದ ಕೊಡುವುದಕ್ಕಾಗುವುದಿಲ್ಲ. 3–4 ಮನೆ ಇರುವ ಹಳ್ಳಿಗಳು ಇರುವುದರಿಂದ ಈ ಹಣದಿಂದ ಆಗುವುದಿಲ್ಲ. ನಮ್ಮಲ್ಲಿ ಏನಾಗುತ್ತದೆ ಎಂದರೆ, ಗುಡ್ಡದ ಮೇಲೆ ಮನೆ ಕಟ್ಟಿಕೊಂಡಿರುತ್ತಾನೆ, ಅವನಿಗೆ ಬಾವಿ ತೆಗೆಯಲಿಕ್ಕೆ ಆಗುವುದಿಲ್ಲ. ಬಾವಿ ತೆಗೆಯಲಿಕ್ಕೆ ಸುಮಾರು ಒಂದೂಕಾಲು ಲಕ್ಷ ರೂಪಾಯಿಗಳು ಬೇಕು. ಆ ಹಣ ಕೊಡುತ್ತಿಲ್ಲ.

ಅವನೇನಾದರೂ ಒಂದು ಎಕರೆ, ಅರ್ಧ ಎಕರೆ ಜಮೀನು ಇಟ್ಟುಕೊಂಡಿದ್ದರೆ ಜಮೀನು ಮಾರಿ ಬಾವಿ ಮಾಡಿಕೊಳ್ಳಬೇಕು ಇಲ್ಲವೆ ಜಾಗ ಖಾಲಿ ಮಾಡಬೇಕಷ್ಟೆ. ಈಗ ನನ್ನ ಕಛೇರಿಯಲ್ಲಿ ಸುಮಾರು 500 ಜನ ಅರ್ಜಿ ಕೊಟ್ಟವರು ಇದ್ದಾರೆ. 500 ಜನ ಅರ್ಜಿ ಕೊಟ್ಟವರೊಳಗೆ ನನಗೆ ಹೆಚ್ಚು ಕಡಿಮೆ 40 ಜನರಿಗೆ ಬಾವಿ ಕೊಡುವುದಕ್ಕಾಗಿಲ್ಲ. ಆಮೇಲೆ ಇನ್ನೊಂದು ದೊಡ್ಡ ದುರಂತ ಎಂದರೆ, ನಮ್ಮ ZP ಯ Engineering Department ಬಗ್ಗೆ ಹೇಳುವುದಾದರೆ, ನಾನು ಈ ವಿಚಾರವನ್ನು KDP ಸಭೆಯಲ್ಲಿ ಪ್ರಸ್ತಾಪಿಸಿದಾಗ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಅವರು direction ಕೊಟ್ಟ ಮೇಲೂ ಮೊನ್ನೆ ದಿವಸ ಆಜ್ಞೆ ಬಂದಿದೆ. ಹೇಗೆ ಆಗಿದೆ ಎಂದರೆ, ಕಳೆದ ನಾಲ್ಕು ವರ್ಷಗಳಿಂದ ತೀರ್ಥಹಳ್ಳಿಯ ಕ್ಷೇತ್ರದಲ್ಲಿ ಯಾರೂ ಬಾವಿ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, rate of the construction of the well is lower than that. ಒಂದು ring ಗೆ 1,400/- ರೂಪಾಯಿ ಕೊಡುತ್ತಾರೆ. ಯಾರೂ ಬಾವಿ ಮಾಡುವುದಕ್ಕೆ ಬರುವುದಿಲ್ಲ. ಮೊನ್ನೆ 241 ಬಾವಿ ಮಾಡುವುದಕ್ಕೆ ZP ಯಿಂದ ಕೊಟ್ಟರೆ ಅದನ್ನು ಮಾಡಲಿಕ್ಕೆ ಯಾರೂ ರೆಡಿಯಿಲ್ಲ. ಏಕೆಂದರೆ, ಒಂದು ಬಾವಿಗೆ ಸುಮಾರು ಒಂದೂಕಾಲು ಲಕ್ಷ ರೂಪಾಯಿ ಆಗುತ್ತದೆ. ಇವರು ಕೊಡುವ ಹಣ 75,000/- ರೂಪಾಯಿ ಅಷ್ಟಕ್ಕೆ ಯಾರೂ ಮುಂದೆ ಬರುವುದಿಲ್ಲ. How they can solve this problem? ನನಗೆ ಅರ್ಥವಾಗುತ್ತಿಲ್ಲ. ಎರಡು ತಿಂಗಳ ಹಿಂದೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಎದುರು ಅದನ್ನು ಪ್ರಸ್ತಾಪ ಮಾಡಿದಾಗ, ಅವರು ನೇರವಾಗಿ direction ಕೊಟ್ಟರು. ನೀವೇ direction ಕೊಟ್ಟ ನಂತರವೂ ಕೂಡ ಮೂರು ದಿನದ ಹಿಂದೆ ಆ ಆಜ್ಞೆ ಬಂದಿದೆಯಷ್ಟೆ. ನಾನು ಹೇಳುವುದೇನೆಂದರೆ, ಅವರು District Minister ಇದ್ದಾರೆ, Deputy Chief Minister ಇದ್ದಾರೆ, ಅವರು direct ಆಗಿ ಇವತ್ತೇನು cost ಬೀಳುತ್ತದೆ ಆ rate ಗೆ ತರ್ಜುಮೆ ಮಾಡಿ ಕೊಡಿ ಎಂದು ನೇರವಾಗಿ ಹೇಳಿದರೆ, ಅದನ್ನು ಒಬ್ಬರಿಂದ ಒಬ್ಬರಿಗೆ Executive Engineer ಕೇಳಬೇಕು, Superintendent Engineer ಕೇಳಬೇಕು,

Chief Engineer ಕೇಳಬೇಕು ಎಂದು ನಾನು ಅವರಿಗೆಲ್ಲಾ Phone ಮಾಡಿದ್ದಾಯಿತು. Sir, ನಿನ್ನೆ I have received the order. ಹೀಗಾದರೆ ಹೇಗೆ drinking water problem solve ಆಗುವುದು? ನನಗೆ ಅರ್ಥವಾಗಲಿಲ್ಲ. ಬರಗಾಲವನ್ನು ಸರ್ಕಾರ face ಮಾಡಲಿಕ್ಕೆ ಹೇಗೆ plan ಮಾಡಿದೆ? Actually ನಮ್ಮ area ದಲ್ಲಿ ಸುಮಾರು 3,500 ಕಿ.ಮೀ.ರಸ್ತೆ ಇದೆ. Geographically it is the biggest constituency in Karnataka. I am having 3,500 K.M. Roads and 61 Gram Panchayaths. See, ನಾವು ಇವರನ್ನು reach ಮಾಡುವುದು ಹೇಗೆ? 500 ಜನ ಅರ್ಜಿ ಕೊಟ್ಟವರಲ್ಲಿ ಒಬ್ಬರಿಗೂ ಬಾವಿ ಕೊಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ನಾನು ಅದನ್ನು ನಾಲ್ಕು ಬಜೆಟ್ session ನಲ್ಲಿ ಮತ್ತು ರಾಜ್ಯಪಾಲರ ವಂದನಾರ್ಪಣಾ ಭಾಷಣದಲ್ಲಿ ಮಾತನಾಡುವಾಗಲೂ ಹೇಳಿದೆ. ನಮಗೆ at least ಒಂದೊಂದು ಕೋಟಿಯಾದರೂ ಕೊಡಿ we will solve the problem ಎಂದು ಕೇಳಿದೆ. ಹಣ ಕೊಟ್ಟರೆ at least ನಾವು 50–60 ಬಾವಿಗಳನ್ನಾದರೂ ಕೊಡಬಹುದು. That has not been done. ಈಗ order ಮಾಡಿದ್ದಾರೆ. ಈಗ ನಾಲ್ಕು ಮುಕ್ಕಾಲು ವರ್ಷಗಳಾಗಿ ಹೋಯಿತು. ಈಗ ಬರಗಾಲದ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಬರಗಾಲಕ್ಕಾಗಿ ನೀವು ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಆದರೆ, ನಾನು ಏನು ಹೇಳುವುದೆಂದರೆ, ಸಮಸ್ಯೆ ಬರುವುದಕ್ಕಿಂತ ಮುಂಚೆನೇ ನಾವು prevention ಮಾಡಬೇಕು, ಸರ್ಕಾರ ಏನು ಮಾಡಿದೆ? ಈಗಾಗಲೇ what are the measures you have taken? ಈಗ ನಾಲ್ಕುಮುಕ್ಕಾಲು ವರ್ಷಗಳಾಗಿ ಹೋಗಿದೆಯಲ್ಲ? ನಾಳೆ ಬರಗಾಲ ಬರದಿದ್ದರೂ ಕೂಡ ಬರಗಾಲ ಬರುವುದಕ್ಕಿಂತ ಮುಂಚಿತವಾಗಿ ನಾವು water source ನ್ನು ಯಾವ ರೀತಿ ಮಾಡಬೇಕು? preserve ಹೇಗೆ ಮಾಡಬೇಕು? ಮತ್ತು ಅದಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವುದಕ್ಕೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ? ಯಾವುದೇ ಕ್ರಮ

ತೆಗೆದುಕೊಂಡಿಲ್ಲ. There is no plan before the government. ನಾವು ಬರಗಾಲವನ್ನು ಯಾವ ರೀತಿ ಎದುರಿಸಬೇಕು ಕುಡಿಯುವ ನೀರಿನ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಇಲ್ಲಿಯವರೆಗೆ ಕಳೆದ ನಾಲ್ಕೂವರೆ ವರ್ಷಗಳಿಂದಲೂ ಏನೂ ಮಾಡಿಲ್ಲ. ಸಂಪೂರ್ಣವಾಗಿ ವಿಫಲವಾಗಿರತಕ್ಕಂಥದ್ದು. ನಮ್ಮಲ್ಲಿ ನೀರು ಇದೆ. ಕೋಲಾರ, ಈ ಭಾಗದ ಸಮಸ್ಯೆಗಳೇ ಬೇರೆ. ಅವರಿಗೆ source of water ಇಲ್ಲ. Source of water ಇದ್ದ ಕಡೆಯಲ್ಲಿ ನೀವು ಏನು ಮಾಡಿದ್ದೀರಿ? ನಮ್ಮ ಹತ್ತಿರ ನೀರು ಇದೆ. ಇಡೀ ತೀರ್ಥಹಳ್ಳಿ ತಾಲ್ಲೂಕಿಗೆ 24 hours ನೀರು ಕೊಡುವಷ್ಟು ನೀರು ನಮ್ಮ ಹತ್ತಿರವಿದೆ. ಆದರೆ, ಅದಕ್ಕೆ ನೀವು ಹಣವನ್ನೇ ಕೊಡುವುದಿಲ್ಲವಲ್ಲ? ಈಗ ನಮ್ಮ ಹತ್ತಿರ ತುಂಗಾ ನದಿ ಇದೆ, ಕೆರೆಗಳು ಇವೆ, ಒಳ್ಳೆಯ source ಇದೆ, ಆದರೂ ನಮ್ಮ ಹತ್ತಿರ ಪ್ರತಿ ಹಂತದಲ್ಲಿಯೂ water problem ಇದೆ. ನಮ್ಮಲ್ಲಿ High court ನಿಂದಲೂ directions ಬಂದಿತ್ತು. ಅನೇಕ School ಗಳಿಗೆ ಈಗಲೂ ಕೂಡ drinking water ಇಲ್ಲ. There is a mandatory direction from the High Court regarding supply of water. ನೀರನ್ನು ಶೌಚಾಲಯಗಳಿಗೆ ಮತ್ತು ಕುಡಿಯುವುದಕ್ಕೆ ವ್ಯವಸ್ಥೆ ಮಾಡಬೇಕೆನ್ನುವ direction ಇದೆ.

Government has given a direction and the High Court has given the direction but no water supply has been made. ನನ್ನ ಕ್ಷೇತ್ರದಲ್ಲಿ ಈಗಲೂ ಕೂಡ ಅಗಿಲ್ಲ. ಈ ರೀತಿಯಾದರೆ ಹೇಗೆ? ಇದೇನು ಈಗ ಬಂದಿರುವುದೇ? ಇದು ಬಂದು ಈಗಾಗಲೇ ಒಂದು ವರ್ಷವಾಗಿದೆ.

What is the measure that has been taken by the Government? Education Department ನಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ, ಎಷ್ಟು ಶಾಲೆಗಳಲ್ಲಿ ಬಾವಿ ಇದೆ ಎಷ್ಟು ಶಾಲೆಗಳಲ್ಲಿ ಇಲ್ಲವೆಂದು ಈಗಾಗಲೇ Education Department ನವರು ರಿಪೋರ್ಟ್ ಅನ್ನು ತರಿಸಿಕೊಂಡಿದ್ದಾರೆ. They are having the records on their file.

ಅವರ ಮುಂದೆ ಈ ರಿಪೋರ್ಟ್ ಇದೆ. ಆದ್ದರಿಂದ, ನೇರವಾಗಿ ಹಣ ಬಿಡುಗಡೆ ಮಾಡಿ ಬಾವಿ ತೋಡಿಸಿ ಎಂದುBetterment Committeeಗೆನೀವು ಡೈರೆಕ್ಷನ್ ಕೊಡಬಹುದಲ್ಲವೇ? I am unable to understand. They have collected the materials. They have collected the information one year back. ನಾನೂ ಸಹ ಆ ಸಭೆಯಲ್ಲಿ ಭಾಗವಹಿಸಿದ್ದೇನೆ. BEO ರವರನ್ನು ನಾವೇ ಮೀಟಿಂಗ್ ಮಾಡಿ ಎಷ್ಟು ಶಾಲೆಗಳಲ್ಲಿ ಕುಡಿಯುವ ನೀರು ಇಲ್ಲವೆಂಬ ಮಾಹಿತಿಯನ್ನು DDPI ಗೆ ಕಳುಹಿಸಿಕೊಟ್ಟಿದ್ದೇವೆ. ಈ ಮಾಹಿತಿಯನ್ನು ಕಳುಹಿಸಿಕೊಟ್ಟು ಒಂದು ವರ್ಷವಾಗಿದೆ. ಬರಗಾಲವನ್ನು ನಾವು face ಮಾಡುವುದು ಹೇಗೆಂದರೆ, ಈ ರೀತಿಯಾದ lethargic attitude ಏನಿದೆ this has created it ಬಯಲು ಸೀಮೆಯಲ್ಲಿರುವ ಸಮಸ್ಯೆಗಳ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಉಳಿದಂಥ ಮಾನ್ಯ ಸದಸ್ಯರುಗಳು ಈಗಾಗಲೇ ಮಾತನಾಡಿದ್ದಾರೆ. ಈಗ ನಾನು ಹೇಳತಕ್ಕಂಥದ್ದು ಏನೆಂದರೆ, ಮೊದಲು ಹಣವನ್ನು ಬಿಡುಗಡೆ ಮಾಡಿ. 189 rural Assembly segments are there. 189 rural segment ಗಳಲ್ಲಿ ಇರುವವರೆಲ್ಲರಿಗೂ ಸಹ ಕುಡಿಯುವ ನೀರಿನ ಸಮಸ್ಯೆ ಈಗ ಇದೆ. ಬರಗಾಲ ಘೋಷಿತ ಪ್ರದೇಶದಲ್ಲಿ ಮಾತ್ರವಲ್ಲದೆ ಇಲ್ಲಿಯೂ ಕೂಡ ನೀರಿನ ಸಮಸ್ಯೆ ಇದೆ. ಈಗ ಫೆಬ್ರವರಿ ತಿಂಗಳಾಗಿದ್ದು, ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಆದ್ದರಿಂದ, ಬರಗಾಲ ಘೋಷಿತ ತಾಲ್ಲೂಕುಗಳಿಗೆ ಮಾತ್ರ ಎಂಬ ಪ್ರಶ್ನೆ ಏನಿಲ್ಲ. RDPR Ministry ಗೆ ಏನು 189 Assembly segments ಬರುತ್ತವೆಯೋ ಅಷ್ಟೂ ಕ್ಷೇತ್ರಗಳಲ್ಲಿ ಈಗ ಕುಡಿಯುವ ನೀರಿನ ಸಮಸ್ಯೆ ಇದೆ. ಈಗ ಫೆಬ್ರವರಿ ತಿಂಗಳು ಬಂದಿದೆ. ಆದರೆ, ಡಿಸೆಂಬರ್ ತಿಂಗಳಿನಿಂದಲೇ ಕುಡಿಯುವ ನೀರಿನ ಸಮಸ್ಯೆ ಪ್ರಾರಂಭವಾಗಿದೆ. ಆದ್ದರಿಂದ, ಹಣ ಬಿಡುಗಡೆ ಮಾಡಿ ಎಂದು ಮಾನ್ಯ ಮಂತ್ರಿಯವರಿಗೆ ಹೇಳುತ್ತಿದ್ದೇನೆ. ಇವತ್ತಿನದಿವಸ Task-forceಗೆ minimum 2 ಕೋಟಿ ರೂಪಾಯಿ ಬಿಡುಗಡೆ ಮಾಡಿದರೆ ಈ ಸಮಸ್ಯೆ ತಕ್ಷಣ solve ಆಗುತ್ತದೆ. ಇವತ್ತಿನದಿವಸ

ಬಯಲು ಸೀಮೆ ಪ್ರದೇಶದ ಸಮಸ್ಯೆಗಳು ಬೇರೆ ಇವೆ. ಹೈದರಬಾದ್ ಕರ್ನಾಟಕ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಜಿಲ್ಲೆಗಳ ಸಮಸ್ಯೆಗಳಿಗೆ ಇವತ್ತಿನದಿವಸ ಸರ್ಕಾರ larger scale ನಲ್ಲಿ attend ಮಾಡಬೇಕಾಗುತ್ತದೆ. ಆದ್ದರಿಂದ, ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ನಿರ್ದೇಶನ ಕೊಡಬೇಕೆಂದು ಮಾನ್ಯ ಉಪಾಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿರುವ 189 ಎಲ್ಲಾ rural Assembley segments ನಲ್ಲಿರುವ Taskforce ಮೂಲಕ ಕನಿಷ್ಠ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಒಂದು ಹಂತದ ಸಮಸ್ಯೆ ನಿವಾರಣೆ ಮಾಡಬಹುದು. ಇನ್ನೊಂದು ವಿಷಯ ಏನೆಂದರೆ, ಇವತ್ತಿನ ದಿವಸ ನೀರಿನ ಸಮಸ್ಯೆ ಒಂದೇ ಅಲ್ಲ, ಇದರ ಜೊತೆಗೆ ಕರೆಂಟ್ ಸಮಸ್ಯೆ ಕೂಡ ಇದೆ. ಈಗ ಮಕ್ಕಳಿಗೆ exams ನಡೆಯುತ್ತಿದೆ. ಆದರೆ, ಈಗ ನೀರು ಇಲ್ಲ, ಕರೆಂಟ್ ಕೂಡ ಇಲ್ಲ. ಇವೆರಡೂ ಕೂಡ basic necessity ಆಗಿವೆ. ಹಾಗಾದರೆ ಇದನ್ನು ನೀವು ಯಾವರೀತಿಯಾಗಿ solve ಮಾಡುತ್ತೀರಿ? ಆದ್ದರಿಂದ, ಇದಕ್ಕೆ ಮೊದಲು ಹಣ ಬಿಡುಗಡೆ ಮಾಡಬೇಕು. ಇವತ್ತಿನದಿವಸ taskforce ನಲ್ಲಿ ಏನಾಗಿದೆ ಎಂದರೆ, ನಮ್ಮಲ್ಲಿ source of water ಇದೆ ಮತ್ತೆ pumpset, Mini Water Supply Tank ಇದೆ. ಆದ್ದರಿಂದ, ಅಲ್ಲಿ ಒಂದು ಕಿ.ಮೀ. ವರೆಗೆ ಪೈಪ್ ಹಾಕುವುದಕೋಸ್ಕರ ನಮಗೆ ಮೂರು ಲಕ್ಷ ರೂಪಾಯಿ ಬೇಕೆಂದು ಕೇಳುತ್ತಿದ್ದಾರೆ. ನಾವು ಯಾರ ಹತ್ತಿರ ದುಡ್ಡು ಕೇಳುವುದು ಹೇಳಿ? Taskforce ಮೂಲಕ ಇದಕ್ಕೆ ಹಣ ಕೊಡಬೇಕು. ಆದರೆ, Taskforce ನಲ್ಲಿ ಈಗ ಹಣ ಇಲ್ಲ. ಅಲ್ಲಿಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಆದ್ದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇರುವ ನೀರನ್ನು preserve ಮಾಡುವುದಕ್ಕೆ ಏನೇನು ಮಾಡಬೇಕೆಂಬುದು ಒಂದು ಭಾಗ. ಆದರೆ, ಈಗ ಬಂದಿರುವಂಥ ಸಮಸ್ಯೆಯನ್ನು ಎದುರಿಸುವುದಕ್ಕೆ ಎಲ್ಲ 189 Assembly segments ಗೆ 2 ಕೋಟಿ ರೂಪಾಯಿಯಂತೆ taskforce ಗೆ ಹಣ ನೀಡಿದರೆ ಎಲ್ಲೆಲ್ಲಿ ಸಮಸ್ಯೆ ಇದೆಯೋ ಅಲ್ಲಿ ತುರ್ತಾಗಿ

ಅಗತ್ಯಕ್ಕಂಥ ಕೆಲಸವನ್ನು ಮಾಡಬಹುದೆಂಬ ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ(ಸಕಲೇಶಪುರ):– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಎಷ್ಟೊಂದು ಭೀಕರವಾಗಿದೆ ಎನ್ನತಕ್ಕಂಥದನ್ನು ನಮ್ಮ ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿರುವ 175 ತಾಲ್ಲೂಕುಗಳಲ್ಲಿ 148 ತಾಲ್ಲೂಕುಗಳು ಬರಪೀಡಿತವಾಗಿವೆ ಎಂಬುದನ್ನು ಸರ್ಕಾರ ದೃಢಪಡಿಸಿದೆ. ನಾನು ಮಲೆನಾಡು ಪ್ರದೇಶದಿಂದ ಬಂದಿದ್ದೇನೆ. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಸಹ ಮಲೆನಾಡು ಪ್ರದೇಶದಿಂದ ಬಂದವರಾಗಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದೆ ಎಂದರೆ ಬಯಲು ಸೀಮೆಯಲ್ಲಿ ಇದನ್ನು ನಿರೀಕ್ಷೆ ಮಾಡುವುದೇ ಕಷ್ಟ ಎಂಬುದು ನನಗೆ ಅನಿಸುತ್ತದೆ. ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಇವತ್ತಿನದಿವಸ ಪ್ರತಿ ತಾಲ್ಲೂಕುಗಳಲ್ಲಿ ಕನಿಷ್ಠ 100 ಕೊಳವೆ ಬಾವಿಗಳ ಅಗತ್ಯತೆ ಇದೆ. ಈ ತಾಲ್ಲೂಕುಗಳಲ್ಲಿ ಇವತ್ತಿನದಿವಸ ಕೊಳವೆ ಬಾವಿಯನ್ನು ತೋಡುವುದಕ್ಕೆ ಹೋದರೆ ಕನಿಷ್ಠ 500 ರಿಂದ 600 ಅಡಿ ಆಳಕ್ಕೆ ಕೊರೆಯಬೇಕಾಗುತ್ತದೆ. ಬರಗಾಲ ನಿವಾರಣೆ ಮಾಡುವುದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಯನ್ನು ಸರ್ಕಾರ ಕೊಟ್ಟಿರುವುದು ನಿಜ. ಕೊಟ್ಟಿರುವ ಹಣವನ್ನು ಪೂರ್ಣವಾಗಿ ಕುಡಿಯುವ ನೀರಿಗಾಗಿ ಬಳಸಬೇಕೆಂದು ನಿರ್ದೇಶನ ಕೂಡ ಇದೆ. ಆದರೆ, ತಪ್ಪು ಎಲ್ಲಿ ಆಗಿದೆ ಎಂದರೆ, ಕೇವಲ pipeline and Cistern ಮಾಡುವುದಕ್ಕೆ ಅವಕಾಶ ಇದೆ. ಆದರೆ, ಕೊಳವೆ ಬಾವಿಯನ್ನು ಕೊರೆಯುವುದಕ್ಕೆ ಅವಕಾಶ ಇಲ್ಲ. pipeline and Cistern ಅನ್ನು ಕೂರಿಸಿದರೆ ನೀರನ್ನು ಎಲ್ಲಿಂದ ತರಬೇಕು? ಕೊಳವೆ ಬಾವಿ ತೋಡಿಸದಿದ್ದರೆ ಇದನ್ನು ಮಾಡಿರುವುದು ಕೂಡ ನಿರರ್ಥಕವಾಗುತ್ತದೆ. pipeline and Cistern ಮಾಡಿದ ಮೇಲೆ ನೀರು ಇರತಕ್ಕಂಥ ಕೊಳವೆಬಾವಿಗಳು ಬತ್ತಿ ಹೋಗಿರುವಂಥ ಸಂಭವಗಳು ಸಹ

ಇವೆ. ಆದ್ದರಿಂದ, ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ Taskforceಗೆಕನಿಷ್ಠ ಪಕ್ಷ ಒಂದೊಂದು ಕೋಟಿ ರೂಪಾಯಿಯಾದರೂ ಕೊಡಬೇಕು. ಆ ಹಣವನ್ನು ಸಂಪೂರ್ಣವಾಗಿ ಕೊಳವೆಬಾವಿಯನ್ನು ತೋಡುವುದಕ್ಕಾಗಿ ಅವಕಾಶ ಮಾಡಿಕೊಡಬೇಕು. ಈ ರೀತಿಯಾಗಿ ಮಾಡಿದರೆ ಮಾತ್ರ ಕುಡಿಯುವ ನೀರಿನ ದಾಹವನ್ನು ಹಿಂಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ರಾಜ್ಯಾದ್ಯಂತ ಸಂಪೂರ್ಣವಾಗಿ ಬರಗಾಲದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ವಿಫಲವಾಗಿದೆ ಎಂದು ನಾನು ಭಾವಿಸುತ್ತೇನೆ. ಸಕಲೇಶಪುರ ತಾಲ್ಲೂಕಿನಲ್ಲಿ ನೈಸರ್ಗಿಕವಾಗಿ ಸಿಗತಕ್ಕಂಥ ನೀರು ಈಗ ಇದೆ. ಆದರೆ, ಬೇಸಿಗೆ ಕಾಲದಲ್ಲಿ ಇದು ಬರುತ್ತಾ ಬರುತ್ತಾ ಕಡಿಮೆ ಆಗುತ್ತದೆ. ಆದರೂ ಕೂಡ ಇರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ಹಳ್ಳಿಗಳಿಗೆ ನೀರನ್ನು ಕೊಡಬಹುದಾಗಿದೆ. ಇದಕ್ಕಾಗಿ ನಾನು ಈಗಾಗಲೇ 70 ಹಳ್ಳಿಗಳಿಗೆ ಸುಮಾರು 12.5 ಕೋಟಿ ರೂಪಾಯಿಯ ಒಂದು ಅಂದಾಜನ್ನು ತಯಾರು ಮಾಡಿ ಕೊಟ್ಟಿದ್ದೇನೆ. ಇದು ಇನ್ನೂ ಕೂಡ ಸರ್ಕಾರದಲ್ಲಿದೆ. ಅವರು ಪ್ರಸ್ತಾವನೆಯನ್ನು ಕೇಳಿದ್ದಾರೆ, ಈಗಾಗಲೇ ಎಸ್ಟಿಮೇಟ್ ಸಹ ಆಗಿದೆ. ಆದರೆ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅದಕ್ಕೆ ತಕ್ಷಣ ಒಪ್ಪಿಗೆ ನೀಡಿ ಅದನ್ನು ಕೂಡ ಮಾಡಿದರೆ ನಮಗೆ ಸುಲಭವಾಗುತ್ತದೆ ಎಂಬ ಮಾತನ್ನು ಹೇಳಿ, ನನ್ನ ಕ್ಷೇತ್ರ ಆಲೂರು ಮತ್ತು ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಕೊಳವೆಬಾವಿ ಕೊರೆಸಿಕೊಡಿ ಎಂದು ಜನರು ಪ್ರತಿದಿನ ಬರುತ್ತಿದ್ದಾರೆ. ಇವತ್ತಿನದಿವಸ ಅಲ್ಲಿ ಕೊಳವೆ ಬಾವಿಯನ್ನು ಕೊರೆದರೂ ಸುಲಭವಾಗಿ ನೀರು ಸಿಗುತ್ತಿಲ್ಲ. ಆದ್ದರಿಂದ, ಇದಕ್ಕಾಗಿ ಸರ್ಕಾರ ಒಂದು ವಿಶೇಷ ಸಮಿತಿಯನ್ನು ಮಾಡಿ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದನ್ನು ಅರಿತು ನೀರನ್ನು ಕೊಡುವಂತಹ ಕೆಲಸ ಆಗಬೇಕು. ಇವೆಲ್ಲಕ್ಕಿಂತ ಹೆಚ್ಚಾಗಿ ನೀರು ಸಿಕ್ಕಿದರೂ ಸಹ ವಿದ್ಯುತ್ ಇಲಾಖೆಯಲ್ಲಿ ಇವತ್ತಿನದಿವಸ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ತುಂಬಾ

ಇದೆ. ನಮ್ಮಲ್ಲಿ ಪ್ರತಿ ದಿನ ಸುಮಾರು 10 ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗುತ್ತಿವೆ. ಈ ನಿಟ್ಟಿನಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡತಕ್ಕಂಥದ್ದು ಮತ್ತು ರಿಪೇರಿ ಮಾಡಿಸತಕ್ಕಂಥದ್ದು ಹಾಗೆಯೇ ಗುಣಮಟ್ಟದ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡತಕ್ಕಂಥ ಕೆಲಸ ಕೂಡ ಮಾಡಬೇಕಾಗುತ್ತದೆ. ಅದಕ್ಕಾಗಿ ಸರ್ಕಾರವನ್ನು. ಒತ್ತಾಯ ಮಾಡುವುದೇನೆಂದರೆ, ಕನಿಷ್ಠ ಒಂದು ಕೋಟಿ ರೂಪಾಯಿಯನ್ನು ತಕ್ಷಣ ಬಿಡುಗಡೆ ಮಾಡಿ. ಈಗ ಚುನಾವಣೆ ಸಮಯದ ಕೂಡ ಆಗಿದೆ. ಮುಂದೆ ಬರತಕ್ಕಂಥ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗುತ್ತದೆ. ಆ ನಿಟ್ಟಿನಲ್ಲಿ ಕ್ರಮವಾಗಿ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):– ಮಾನ್ಯ ಉಪಾಧ್ಯಕ್ಷರೆ, ಕಳೆದ ಎರಡು ವರ್ಷಗಳಿಂದ ನಾವು ಬರಗಾಲವನ್ನು ಎದುರಿಸಿಕೊಂಡು ಬರುತ್ತಿದ್ದೇವೆ. ಅದರಲ್ಲೂ ವಿಶೇಷವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಬಹಳ ಹೆಚ್ಚಿನ ನೋವನ್ನು ಅನುಭವಿಸುವಂಥ ಪ್ರದೇಶಗಳಾಗಿವೆ. ಕಳೆದ ಸಾರಿ ಮತ್ತು ಈ ಸಾರಿ ಸತತವಾಗಿ ನಮಗೆ ಮಳೆ ಆಗಲಿಲ್ಲ. ಇವತ್ತಿನದಿವಸ ನಮ್ಮಲ್ಲಿ ಅಂತರ್ಜಲಮಟ್ಟ ಕುಸಿದಿದೆ. ಅಂತರ್ಜಲಮಟ್ಟ ಕುಸಿದಿರುವುದರಿಂದ 1000 ರಿಂದ 1500 ಅಡಿ ಬೋರ್‌ವೆಲ್ ಕೊರೆಸಿದರೂ ಸಹ ನೀರು ಸಿಗುತ್ತಿಲ್ಲ. ಅಕಸ್ಮಾತ್ ನೀರು ಸಿಕ್ಕಿದರೂ ಸಹ ಅದರಲ್ಲಿ ಫ್ಲೋರೈಡ್ ಅಧಿಕವಾಗಿರುತ್ತದೆ. ಫ್ಲೋರೈಡ್ ಅಂಶ ಇರುವ ವಿಷ ನೀರನ್ನು ಕುಡಿದು ಆ ಭಾಗದಲ್ಲಿರುವ 100ಕ್ಕೆ 90 ರಷ್ಟು ಜನರು ಅಂಗವಿಕಲರಾಗುತ್ತಿದ್ದಾರೆ. ಒಂದಲ್ಲಾ ಒಂದು ರೀತಿಯಲ್ಲಿ ಕಾಯಿಲೆಗಳನ್ನು ಅವರು ಪಡೆದುಕೊಂಡಿದ್ದಾರೆ. ಫ್ಲೋರೈಡ್‌ರಹಿತ ಕುಡಿಯುವ ನೀರನ್ನು ಕೊಡಬೇಕೆಂದು ನಾವು ಅನೇಕ ಸಾರಿ ಈ ಸರ್ಕಾರಗಳಿಗೆ ಒತ್ತಾಯ ಮಾಡಿದ್ದೇವೆ. ಇದಕ್ಕೆ ಏನಾದರೊಂದು ಪರಿಹಾರ ಹುಡಕಬೇಕೆಂಬುದರ ಬಗ್ಗೆ ಸರ್ಕಾರಗಳು. ಆಲೋಚನೆ ಮಾಡುತ್ತಿಲ್ಲ. ಆದರೆ, ಬರ ಬರ ಎಂದು ಈ

ಸದನದಲ್ಲಿ ಅನೇಕ ಸಾರಿ ಚರ್ಚೆ ಮಾಡುತ್ತಿದ್ದೇವೆ. ಆದರೆ, ಅದರ ಪರಿಹಾರಕ್ಕೆ ಮುಂದಿನ ದಿನಗಳಲ್ಲಿ ಏನು ಮಾಡಬೇಕೆಂಬ ಆಲೋಚನೆಗಳನ್ನು ಮಾತ್ರ ಯಾವುದೇ ಸರ್ಕಾರಗಳು ಮಾಡುತ್ತಿಲ್ಲ. ನಮ್ಮ ಭಾಗದಲ್ಲಿ ನೀರಿನ ವಿಚಾರದಲ್ಲಿ ಅನೇಕ ಹೋರಾಟಗಳನ್ನು ಮಾಡಿ ಕೆರೆಗಳನ್ನು ನಿರ್ಮಾಣ ಮಾಡಿ ಅದರಿಂದಲೇ ಕುಡಿಯುವ ನೀರನ್ನು ಪೂರೈಸಬೇಕೆಂದು ಅನೇಕ ಸಾರಿ ಇವರಿಗೆ ಸಲಹೆಗಳನ್ನೂ ಸಹ ಕೊಟ್ಟಿದ್ದೇವೆ. ಒಂದೊಂದು ಕೆರೆಗಳಲ್ಲಿ ಕುಡಿಯುವ ನೀರಿನ ಶೇಖರಣೆ ಮಾಡಿ ಆ ನೀರನ್ನು ಎಲ್ಲ ಪ್ರದೇಶಗಳಿಗೆ ಕೊಡಬೇಕೆಂದು ನಾವು ಅನೇಕ ಸಾರಿ ಸಲಹೆಗಳನ್ನು ಕೊಟ್ಟಿದ್ದೇವೆ.

ಏಕೆಂದರೆ ವ್ಯವಸಾಯಕ್ಕೆ ನೀರು ನೀಡುವಂಥ ಎಲ್ಲ ಕೆರೆಗಳನ್ನು ನಾವು ಇಟ್ಟಿದ್ದೇವೆ. ಆದರೆ ಇಡೀ ರಾಜ್ಯದಲ್ಲಿ ಎಲ್ಲೂ ಕೂಡ ನಾವು ಕುಡಿಯುವ ನೀರಿಗೆ ಎಂದು ಒಂದು ಕೆರೆಯನ್ನೂ ಇಟ್ಟಿಲ್ಲ. ನಮ್ಮ ಬಾಗೇಪಲ್ಲಿಯಲ್ಲಿ ಇಂದಿನ ಮುಖ್ಯಮಂತ್ರಿಗಳ ಸಹಾಯದಿಂದ ಪರಗೋಡು ಎಂಬಲ್ಲಿ ಚಿತ್ರಾವತಿ ನದಿಗೆ ಒಂದು ಅಣೆಕಟ್ಟು/ ಬ್ಯಾರೇಜನ್ನು ನಾವು ಕಟ್ಟಿದ್ದೆವು. ಆ ಚಿತ್ರಾವತಿ ಬ್ಯಾರೇಜು ಮಳೆಗಾಲದಲ್ಲಿ ಬಂದಂಥ ನೀರನ್ನು ಶೇಖರಣೆ ಮಾಡಿ ಆ ನೀರನ್ನು ಫ್ಲೋರೈಡ್‌ರಹಿತವಾಗಿ ಫಿಲ್ಟರ್ ಮಾಡಿ ಸುಮಾರು 128 ಹಳ್ಳಿಗಳಿಗೆ ಕೊಡುವಂಥ ಕಾರ್ಯಕ್ರಮಕ್ಕೆ ನಾವು ಕೈ ಹಾಕಿದಾಗ ಆಂಧ್ರ ಪ್ರದೇಶದವರು ಅದಕ್ಕೆ ಅಡ್ಡಿಪಡಿಸಿದರು. ನಮ್ಮ ಭಾಗದಲ್ಲಿ ಎಲ್ಲೂ ಮೂಲನದಿಗಳಿಲ್ಲ. ಆದರೆ ಅಲ್ಲಿ ಬಿದ್ದಂಥ ಮಳೆ ನೀರನ್ನು ಶೇಖರಣೆ ಮಾಡುವುದಕ್ಕೂ ಕೂಡ ಪಕ್ಕದ ರಾಜ್ಯದವರು ನಮ್ಮ ವಿರುದ್ಧ ಬರುತ್ತಾರೆ. ಆದರೂ ಕೂಡ ನಾವು ಬಿಡಲಿಲ್ಲ. ಏಕೆಂದರೆ, ಕುಡಿಯುವ ನೀರು ನಮ್ಮ ಹಕ್ಕು. ಆ ಕುಡಿಯುವ ನೀರನ್ನು ನಾವು ಶೇಖರಣೆ ಮಾಡಲೇ ಬೇಕೆಂದು ಪರಗೋಡಿನಲ್ಲಿ ಒಂದು ಬ್ಯಾರೇಜನ್ನು ಕಟ್ಟಿ 128 ಹಳ್ಳಿಗಳಿಗೆ ಕಾಮಗಾರಿಗಳನ್ನು ತೆಗೆದುಕೊಂಡು ಪೈಪ್‌ಲೈನ್‌ಗಳನ್ನು ಈಗಾಗಲೇ ಹಾಕಿಬಿಟ್ಟಿದ್ದೇವೆ. ಮೊನ್ನೆ ನಮ್ಮ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಮತ್ತು ಕೇಂದ್ರದ ಸಚಿವರಾದ ವೀರಪ್ಪ ಮೊಯ್ಲಿಯವರ ಸಮ್ಮುಖದಲ್ಲಿ ನಾವು ಅದನ್ನು ಉದ್ಘಾಟನೆ ಮಾಡಿಬಿಟ್ಟೆವು. ಇವತ್ತು ನಾವು ಆ

ಒಂದು ಕೆರೆಯಿಂದ 128 ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡುವಂಥದ್ದು ಆಗುತ್ತಿದೆ. ಅದೇ ರೀತಿಯಲ್ಲಿ ಹೊಂಡಮಾನ್ ಎನ್ನುವ ಕೆರೆಯನ್ನು ನಾವು ಮಾಡಿದ್ದೇವೆ. ಅದರಿಂದ 62 ಹಳ್ಳಿಗಳಿಗೆ ಪೈಪ್‌ಲೈನ್‌ಗಳನ್ನು ಹಾಕಿದ್ದೇವೆ. ಒಟ್ಟು ಸುಮಾರು 200 ಹಳ್ಳಿಗಳಿಗೆ ಎರಡು ಕೆರೆಗಳಿಂದ ನಾವು ನೀರನ್ನು ತಂದಿದ್ದೇವೆ. ಈ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ನಾನು ಹೇಳುತ್ತೇನೆ. ಏಕೆಂದರೆ, ಎಲ್ಲ ಕಡೆಗಳಲ್ಲಿಯೂ ಕೂಡ ನಾವು ಕೆರೆಗಳನ್ನು ವ್ಯವಸಾಯಕ್ಕಾಗಿ ಉಪಯೋಗಿಸುತ್ತಿದ್ದೇವೆ. ಅದಕ್ಕೆ ನನ್ನ ಸಲಹೆ ಎಂದರೆ, ಪ್ರತಿಯೊಂದು ಪಂಚಾಯಿತಿಯಲ್ಲಿ ಒಂದು ಕೆರೆಯನ್ನು ಕೇವಲ ಕುಡಿಯುವ ನೀರಿಗೆಂದು ಸೀಮಿತ ಮಾಡಿ. ಆ ಕೆರೆಯ ನೀರಿನ ಸಾಮರ್ಥ್ಯವನ್ನು ಹೆಚ್ಚಿಸಲು ಅಲ್ಲಿರುವಂಥ ಹೂಳನ್ನು ಎತ್ತಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಕೂಡ ಕಳೆದ ಸಲ ಹೇಳಿದ್ದೆ. ಒಂದು ಪಂಚಾಯಿತಿಯಲ್ಲಿ ಕೇವಲ ಒಂದು ಕೆರೆಯನ್ನು ಕುಡಿಯುವ ನೀರಿಗೆಂದು ಇಟ್ಟು, ಆ ಪಂಚಾಯಿತಿಯಲ್ಲಿ ಯಾವಯಾವ ಹಳ್ಳಿಗಳು ಬರುತ್ತವೆ, ಆ ಹಳ್ಳಿಗಳಿಗೆ ಫ್ಲೋರೈಡ್‌ರಹಿತ ನೀರನ್ನು ಕೊಡುವ ರೀತಿಯಲ್ಲಿ ಮಾಡಬೇಕು. ಇಡೀ ರಾಜ್ಯದಲ್ಲಿ ಈ ರೀತಿ ಕೆಲಸ ಮಾಡಿದರೆ ನಿಜವಾಗಿಯೂ ಕೂಡ ಬರವನ್ನು ಎದುರಿಸಲು ಮತ್ತು ಕುಡಿಯುವ ನೀರನ್ನು ಶೇಖರಿಸಲು ಅವಕಾಶವಾಗುತ್ತದೆ. ಆದರೆ ಈ ಸರ್ಕಾರ ಆ ರೀತಿಯ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಶಾಶ್ವತ ನೀರಿನ ಯೋಜನೆ ಬರಬೇಕು ಎಂದು ಇವತ್ತು ನಾವೆಲ್ಲರೂ ಆಲೋಚನೆ ಮಾಡುತ್ತಿದ್ದೇವೆ. ಆದರೆ ಆ ಶಾಶ್ವತ ನೀರನ್ನು ತರುವ ಕಾರ್ಯಕ್ರಮಕ್ಕೂ ಮೊದಲು ಎಲ್ಲಾ ಕೆರೆಗಳಲ್ಲಿರುವ ಹೂಳನ್ನು ತೆಗೆಸುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ದಾಖಲೆಗಳ ಪ್ರಕಾರ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕೆರೆಗಳಿವೆ. ಆ ನಾಲ್ಕು ಸಾವಿರ ಕೆರೆಗಳು ಕೂಡ ಇವತ್ತು ಹೂಳು ತುಂಬಿವೆ. ಆದ್ದರಿಂದ ಆ ಕೆರೆಗಳಲ್ಲಿ ಪ್ರಾರಂಭದಲ್ಲಿ ಏನು ನೀರಿನ ಸಾಮರ್ಥ್ಯವಿತ್ತು. ಇವತ್ತು ಆ ಸಾಮರ್ಥ್ಯವಿಲ್ಲ. ಆದರೆ ಸರ್ಕಾರದ ದಾಖಲೆಗಳಲ್ಲಿ ನಮ್ಮ ಭಾಗದಲ್ಲಿ ನಾಲ್ಕು ಸಾವಿರ ಕೆರೆಗಳಿವೆ ಎಂದು ಇದೆ. ಆದರೆ ಆ ಕೆರೆಗಳಲ್ಲಿ ಅರ್ಧಕ್ಕರ್ಧದಷ್ಟು ಹೂಳು

ತುಂಬಿರುವುದರಿಂದ ನಮ್ಮ ಲೆಕ್ಕದಲ್ಲಿ ಎರಡು ಸಾವಿರ ಕೆರೆಗಳು ಮಾತ್ರ ಇವೆ. ಇವತ್ತು ಆ ಕೆರೆಗಳ ಹೂಳನ್ನು ಎತ್ತಿಸಿ. ಮುಂದಿನ ದಿನಗಳಲ್ಲಿ ನಮ್ಮ ಭಾಗಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ತರಬೇಕು ಎಂದು ಸರ್ಕಾರ ತೀರ್ಮಾನ ಮಾಡಿದೆ. ಇವತ್ತು ಎತ್ತಿನಹೊಳೆ ಕಾರ್ಯಕ್ರಮವನ್ನು ಮಾಡಿ ಆ ಪೈಪ್‌ಲೈನ್‌ನಿಂದ ನೀರನ್ನು ತಂದು ಎಲ್ಲ ಕೆರೆಗಳಿಗೆ ಹರಿಸಲು ಆಲೋಚನೆ ಮಾಡಿದೆ. ಆದರೆ ನಾವು ಅರ್ಧಕ್ಕರ್ಧ ನೀರನ್ನು ಮಾತ್ರ ಶೇಖರಣೆ ಮಾಡಲು ಸಾಧ್ಯವಾಗುತ್ತದೆ. ಆದರೆ ಬದಲು ಆ ಕೆರೆಗಳ ಹೂಳು ತೆಗೆದು, ಅಲ್ಲಿ ಹೆಚ್ಚಿನ ನೀರನ್ನು ನಿಲ್ಲಿಸುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕು. ಸರ್ಕಾರ ಕೇವಲ ಎತ್ತಿನಹೊಳೆ ಯೋಜನೆಗೆ ಗುದ್ದಲಿಪೂಜೆ ಅಥವಾ ಶಂಕುಸ್ಥಾಪನೆಯನ್ನು ಮಾಡುವುದಲ್ಲ. ಅದರ ಜೊತೆಗೆ, ನಾನು ಈಗಾಗಲೇ ಹೇಳಿದ ಹಾಗೆ, ಒಂದೊಂದು ಪಂಚಾಯಿತಿಯಲ್ಲಿ ಒಂದೊಂದು ಕೆರೆಯನ್ನು ಗುರುತಿಸಿ, ಆ ಕೆರೆಯ ಹೂಳನ್ನು ತೆಗೆದು ಅದನ್ನು ಶಾಶ್ವತವಾಗಿ ಕುಡಿಯುವ ನೀರಿನ ಕೆರೆ ಎಂದು ಮಾಡಬೇಕಾಗುತ್ತದೆ. ಆ ರೀತಿಯಲ್ಲಿ ಇವರು ಆಲೋಚನೆ ಮಾಡಿ ಅದಕ್ಕೆ ಹಣವನ್ನು ಇಟ್ಟರೆ ಮಾತ್ರ ಬರವನ್ನು ಕಡಿಮೆ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಬಹುದು. ನಮ್ಮ ಭಾಗದಲ್ಲಿ ಹಳ್ಳಿಗಳಿಗೆ ಹೋದಾಗ ನಿಜವಾಗಲೂ ಕೂಡ ನೋವಾಗುತ್ತದೆ, ನನ್ನ ವಿಧಾನಸಭಾ ಕ್ಷೇತ್ರದಲ್ಲಿ 500 ಹಳ್ಳಿಗಳು ಬರುತ್ತವೆ, ಡಾ: ನಂಜುಂಡಪ್ಪ ವರದಿ ಪ್ರಕಾರ ನಮ್ಮ ಪ್ರದೇಶವನ್ನು ಬಹಳ ಹಿಂದುಳಿದ ಪ್ರದೇಶ ಎಂದು ಘೋಷಣೆ ಮಾಡಿದ್ದು, ಆ ಭಾಗಕ್ಕೆ ವಿಶೇಷ ಅನುದಾನವನ್ನು ಕೊಡಬೇಕು ಎಂದು ಕೂಡ ಸರ್ಕಾರ ತೀರ್ಮಾನ ಮಾಡಿದೆ. ಆದರೆ ಇವತ್ತು ನಮ್ಮಲ್ಲಿ ಆ ರೀತಿಯ ಯಾವುದೇ ಯೋಜನೆಗಳಿಗೆ ಹಣ ಬಿಡುಗಡೆಯಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಬರುವ 500 ಹಳ್ಳಿಗಳಲ್ಲಿಯೂ ನೀರಿನ ಸಮಸ್ಯೆಯಿದೆ. ಕುಡಿಯುವ ನೀರಿನ ಟಾಸ್ಕ್‌ಫೋರ್ಸ್‌ಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅದರಲ್ಲಿ ನಾವು ಸುಮಾರು ಎರಡು ಕೋಟಿ, ಮೂರು ಕೋಟಿ, ನಾಲ್ಕು ಕೋಟಿ ರೂಪಾಯಿಗಳವರೆಗೂ ಬೋರ್‌ವೆಲ್‌ಗಳನ್ನು ಕೊರೆಯಬೇಕು, ಮೋಟರ್‌ಗಳನ್ನು ಕೊಡಬೇಕು ಮತ್ತು ಪೈಪ್‌ಲೈನ್ ಮಾಡಬೇಕೆಂದು ನಾವು

ಟಾಸ್ಕ್‌ಫೋರ್ಸ್‌ನಲ್ಲಿ ನಿರ್ಣಯ ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತೇವೆ. ಆದರೆ ಸರ್ಕಾರದಲ್ಲಿ ಅದಕ್ಕೆ ಕೊಡುವುದು ಎಷ್ಟೆಂದರೆ 20 ಲಕ್ಷ, 30 ಲಕ್ಷ 40 ಲಕ್ಷ ರೂಪಾಯಿಗಳು. ಈ ಹಣದಲ್ಲಿ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ. ಆದರೆ ಮೋಟರ್‌ಗಳನ್ನು ಕೊಡುವುದಿಲ್ಲ, ಪೈಪ್‌ಲೈನ್‌ಗಳ ಕೆಲಸವಾಗುತ್ತಿಲ್ಲ. ಅಂದರೆ, ಬರವನ್ನು ಎದುರಿಸುತ್ತಿರುವಂಥ ಜನರಿಗೆ ಕುಡಿಯುವ ನೀರನ್ನು ಕೊಡಲು ಈ ಸರ್ಕಾರ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ? ಒಂದು ಊರಿನಲ್ಲಿ ನಾವು ಬೋರ್‌ವೆಲ್ಲನ್ನು ಕೊರೆದರೆ, ಅಲ್ಲಿ ನೀರು ಸಿಗಲಿಲ್ಲವೆಂದು ಅಲ್ಲಿನ ಜನ ಆ ಬೋರ್‌ವೆಲ್ ಕೊರೆಯುವ ವ್ಯಾನ್‌ಅನ್ನು ಬಿಡುವುದಿಲ್ಲ, ಅಲ್ಲಿ ಮತ್ತೊಂದು ಸಾರಿ ಬೋರ್‌ವೆಲ್ ಹಾಕಲೇಬೇಕು ಎಂದು ಹೇಳುತ್ತಾರೆ. ಅಲ್ಲಿ ನೀರು ಸಿಗುವವರೆಗೂ ಕೂಡ ಅಲ್ಲಿ ಜನರು ಆ ವಾಹನಗಳನ್ನು ಆಚೆ ಬಿಡುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ ಸರ್ಕಾರವು ಮುನ್ನೆಚ್ಚರಿಕೆಯಾಗಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು. ಒಂದು ಕಡೆ ನಾವು ಬೋರ್‌ವೆಲ್‌ಗಳನ್ನು ಹಾಕುತ್ತಿದ್ದೇವೆ. ಆದರೆ ತಕ್ಷಣ ಅವರಿಗೆ ಮೋಟರ್ ಕೊಡುತ್ತಿಲ್ಲ ಮತ್ತು ಪೈಪ್‌ಲೈನ್ ಕೆಲಸ ಮಾಡಿಸುತ್ತಿಲ್ಲ. ಕೇವಲ ಬೋರ್‌ವೆಲ್‌ಗಳನ್ನು ಹಾಕಿದರೆ ಇವತ್ತು ಯಾವ ರೀತಿಯಲ್ಲಿ ನಾವು ಕುಡಿಯುವ ನೀರನ್ನು ಕೊಟ್ಟ ಹಾಗೆ ಆಗುತ್ತದೆ? ಇದನ್ನು ಸರ್ಕಾರ ಆಲೋಚನೆ ಮಾಡಬೇಕು. ಇಷ್ಟೆಲ್ಲಾ ಮಾಡಿದ ನಂತರ ನೀವು ಅವುಗಳಿಗೆ ಕರೆಂಟ್ ಸರ್ವೀಸನ್ನು ಕೊಡದೇ ಹೋದರೆ ನೀರು ಯಾವ ರೀತಿ ಮೇಲೆ ಬರುತ್ತದೆ? ಇವತ್ತು ನಿರಂತರ ಜ್ಯೋತಿಯಲ್ಲಿ 24 ಗಂಟೆಗಳೂ ನಿಮಗೆ ಕರೆಂಟ್ ಇದೆ ಎಂದು ಸರ್ಕಾರ ಹೇಳಿದೆ. ನಾನು ಒಂದು ಕಡೆ ಭಾಷಣ ಮಾಡುತ್ತಿದ್ದೆ, 24 ಗಂಟೆಗಳ ಕಾಲ ನಿಮಗೆ ನಾವು ನಿರಂತರ ಜ್ಯೋತಿಯನ್ನು ಕೊಡುತ್ತೇವೆ ಎಂದು ನಾನು ಹೇಳಿದ ತಕ್ಷಣವೇ ಕರೆಂಟ್ ಹೋಯಿತು. ಆಗ ನಮ್ಮ ಸ್ಥಿತಿ ಯಾವ ರೀತಿ ಇರುತ್ತದೆ? ನಾವು ಜನರಿಗೆ ಸುಳ್ಳು ಹೇಳಿ ಅಧಿಕಾರವನ್ನು ಹಿಡಿಯುವಂಥ ಕೆಲಸವನ್ನು ಮಾಡಿದ್ದೇವೆ. ನಿರಂತರ ಜ್ಯೋತಿ ಎಂದರೆ 24 ಗಂಟೆಗಳ ಕಾಲ ಕರೆಂಟ್ ಹೋಗದೇ ಇರುವ ರೀತಿಯಲ್ಲಿ ಇವರು ನೋಡಿಕೊಳ್ಳಬೇಕು. ಇವತ್ತು ಅದರ

ಜೊತೆಯಲ್ಲಿ ಕುಡಿಯುವ ನೀರನ್ನು ಸೇರಿಸಿದ್ದಾರೆ. ಇವರು ನಿರಂತರ ಜ್ಯೋತಿಯಲ್ಲಿ 24 ಗಂಟೆಗಳ ಕಾಲ ಕರೆಂಟನ್ನು ಪೂರೈಸಬೇಕಾಗಿದೆ. ಕೇಂದ್ರ ಸರ್ಕಾರ ನಮಗೆ ಹೊಸ ಯೋಜನೆಗಳನ್ನು ಕೊಟ್ಟಿದೆ. ಇವತ್ತು ನೂರಕ್ಕೆ ನೂರರಷ್ಟು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಹೇಳಿ ಕಡ್ಡಾಯ ಶಿಕ್ಷಣ ಯೋಜನೆಯನ್ನು ಮಾಡಿದೆ. ಅದೇ ರೀತಿ ಇವತ್ತು ಎಲ್ಲ ಶಾಲೆಗಳಲ್ಲಿ ಮಕ್ಕಳಿಗೆ ನಾವು ಮಧ್ಯಾಹ್ನದ ಊಟವನ್ನು ಕೊಡುತ್ತಿದ್ದೇವೆ. ಕೇಂದ್ರ ಸರ್ಕಾರ ಕೊಟ್ಟಿರುವ ಮಧ್ಯಾಹ್ನದ ಊಟ ಕೊಡುವ ಈ ಕಾರ್ಯಕ್ರಮ ಎಲ್ಲ ಶಾಲೆಗಳಲ್ಲಿ ನಡೆಯುತ್ತಿದೆ. ಆದರೆ ನೀವು ಆ ಮಕ್ಕಳಿಗೆ ಕೇವಲ ಊಟ ಕೊಟ್ಟು, ನೀರು ಕೊಡದಿದ್ದರೆ, ಯಾವ ರೀತಿಯಲ್ಲಿ ನಾವು ಆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಲು ಸಾಧ್ಯವಾಗುತ್ತದೆ? ಇದನ್ನು ಇವತ್ತು ಈ ಸರ್ಕಾರದವರು ಏಕೆ ಆಲೋಚನೆ ಮಾಡುತ್ತಿಲ್ಲ? ಕೇಂದ್ರ ಸರ್ಕಾರದ ಈ ಕಾರ್ಯಕ್ರಮದನ್ವಯ ಇವತ್ತು ಆ ಮಕ್ಕಳಿಗೆ ಕೇವಲ ಊಟವನ್ನು ಕೊಟ್ಟು ನೀರನ್ನು ಕೊಡದಿದ್ದರೆ, ಆ ಮಕ್ಕಳು ನೀರಿಗೋಸ್ಕರ ಎಲ್ಲಿಗೆ ಹೋಗಬೇಕಾಗುತ್ತದೆ? ಆವತ್ತು ನಾನು ವಿದ್ಯಾಮಂತ್ರಿಗಳಿಗೆ ಹೇಳಿದೆ, ಕನಿಷ್ಠ ಎಲ್ಲ ಶಾಲೆಗಳಿಗೆ ನೀವು ನೀರನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ಪ್ರತಿಶಾಲೆಗಳಲ್ಲಿ ನಿಮ್ಮದೇ ಆದಂಥ ಒಂದು ಬೋರ್‌ವೆಲ್‌ಅನ್ನು ಹಾಕಿ ಆ ಮಕ್ಕಳಿಗೆ ನೀರನ್ನು ಕೊಡಿ ಎಂದು ಕೂಡ ಹೇಳಿದೆ. ಆದರೆ ಇವತ್ತು ಎಲ್ಲೂ ಕೂಡ ಒಂದು ಶಾಲೆಯಲ್ಲೂ ಬೋರ್‌ವೆಲ್‌ಗಳನ್ನು ಹಾಕುವುದಿಲ್ಲ, ಮಕ್ಕಳಿಗೆ ನೀರನ್ನು ಕೊಡುವುದಿಲ್ಲ. ಅವರೆಲ್ಲರೂ ನೀರಿಗಾಗಿ ಗ್ರಾಮ ಪಂಚಾಯಿತಿಗಳ ಮೇಲೆ ಅವಲಂಬಿಸುತ್ತಾರೆ. ಆ ಗ್ರಾಮ ಪಂಚಾಯಿತಿಯವರು ಕೊಡುವಂಥ ನೀರನ್ನು ಇವತ್ತು ಆ ಮಕ್ಕಳು ಸೇವಿಸಬೇಕಾಗುತ್ತದೆ. ಗ್ರಾಮ ಪಂಚಾಯಿತಿಗಳು ತಮ್ಮ ಒಳಜಗಳಗಳಲ್ಲಿ ಆ ಮಕ್ಕಳಿಗೆ ನೀರನ್ನು ಕೊಡದೇ ಹೋದರೆ ಆ ಮಕ್ಕಳಿಗೆ ನೀರು ಇರುವುದಿಲ್ಲ. ಇವತ್ತು ಒಂದರ ಹಿಂದೆ ಒಂದರಂತೆ ಬರ ಬರುತ್ತಿದೆ. ಬರಕ್ಕೆ ಇವೆಲ್ಲವೂ ಸೇರುತ್ತಿದೆ. ಆದ್ದರಿಂದ, ಈ ಸರ್ಕಾರದವರು ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು. ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಯಾರಿಗೋ ಸಮಾಧಾನ

ಮಾಡುವುದಕ್ಕೋಸ್ಕರವೋ ಅಥವಾ ಚುನಾವಣೆಗೋಸ್ಕರವೋ ಮಂಡಿಸುವುದಲ್ಲ. ಅದು ನ್ಯಾಯಸಮ್ಮತವಾಗಿ ಜನರಿಗೆ ಸಿಗಬೇಕು. ಇವತ್ತು ಅಂಥ ಒಂದು ಬಜೆಟ್ ಅನ್ನು ಮಾಡಿ, ಇವೆಲ್ಲಕ್ಕೂ ಕೂಡ ಹಣ ಕೊಡಬೇಕಾಗುತ್ತದೆ. ಇವರು ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸಿದರು. ಆದರೆ ಇವತ್ತಿಗೂ ಕೂಡ ಬೋರ್‌ವೆಲ್‌ಗಳನ್ನು ಹಾಕಿರುವ ಅನೇಕರಿಗೆ ಮೋಟರ್‌ಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಪೈಪ್‌ಲೈನ್‌ಗಳನ್ನು ಹಾಕಿದವರಿಗೆ ದುಡ್ಡು ಕೊಡುತ್ತಿಲ್ಲ. ಇಂಜಿನಿಯರುಗಳು ಅವರಿಗೆ ಬೇಕಾದರೆ ಬರುತ್ತಾರೆ, ಇಲ್ಲದಿದ್ದರೆ ಇಲ್ಲ. ಇವತ್ತು ನಮಗೆ ನಾಚಿಕೆಯಾಗುತ್ತಿದೆ, ನಮ್ಮ ಭಾಗದಲ್ಲಿ ಒಬ್ಬ ಇಂಜಿನಿಯರನ್ನು ಹಾಕುವುದಕ್ಕೆ ಆಗುತ್ತಿಲ್ಲ. ನಮ್ಮ ಭಾಗದಲ್ಲಿ ಒಬ್ಬ ಇಂಜಿನಿಯರ್ ಮಾತ್ರ ಇದ್ದಾರೆ. ಉಳಿದ ಜೂನಿಯರ್ ಇಂಜಿನಿಯರ್‌ಗಳು ಅಥವಾ ಅಸಿಸ್ಟೆಂಟ್ ಇಂಜಿನಿಯರುಗಳ್ಯಾರೂ ಇಲ್ಲ. ನಮ್ಮ ಭಾಗ ಅತ್ಯಂತ ಹಿಂದುಳಿದ ಪ್ರದೇಶ ಎಂದು ಡಾ: ನಂಜುಂಡಪ್ಪನವರ ವರದಿಯಲ್ಲಿ ಹೇಳಿದ್ದು, ಆ ಭಾಗವನ್ನು ನಾವು ಬೆಳೆಸಬೇಕು ಅಭಿವೃದ್ಧಿಪಡಿಸಬೇಕು ಎಂದು ಸರ್ಕಾರದವರು ತೀರ್ಮಾನ ಮಾಡಿದ್ದರೂ ಅಲ್ಲಿಗೆ ಒಬ್ಬ ಇಂಜಿನಿಯರನ್ನು ಹಾಕಲು ಆಗುತ್ತಿಲ್ಲ. ಒಬ್ಬರೇ ಒಬ್ಬ ಇಂಜಿನಿಯರ್ ಇಡೀ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆಯೇ? ಅಲ್ಲಿ ಇಂಜಿಯರುಗಳಿಲ್ಲ ಎಂದರೆ ಯಾವ ರೀತಿ ನೀರನ್ನು ಕೊಡಲು ಸಾಧ್ಯವಾಗುತ್ತದೆ? ಅದನ್ನು ಇವರು ಆಲೋಚನೆ ಮಾಡಬೇಕು. ಡಾ: ನಂಜುಂಡಪ್ಪ ವರದಿಯಲ್ಲಿ ಹೇಳಿರುವಂತೆ, ಗಡಿನಾಡು ಪ್ರದೇಶದಲ್ಲಿ ಯಾವ್ಯಾವ ಪ್ರದೇಶಗಳು ಬರುತ್ತವೆ ಅಲ್ಲಿಗೆ ಅಗತ್ಯವಿರುವ ಎಲ್ಲ ಸಿಬ್ಬಂದಿಯನ್ನು ತಕ್ಷಣ ಭರ್ತಿ ಮಾಡಬೇಕು. ಇವತ್ತು ನಮ್ಮ ಭಾಗದಲ್ಲಿ ಕುಡಿಯುವ ನೀರಿಗೆ ತುಂಬ ಹಾಹಾಕಾರವಾಗಿದೆ. ಇವತ್ತು ಮಳೆ ಯಾವ ರೀತಿ ಬರುತ್ತಿದೆ ಎಂದು ನಮಗೆ ಅರ್ಥವಾಗುತ್ತಿಲ್ಲ. ನಿನ್ನೆ ನವ ದೆಹಲಿಯಲ್ಲಿ ಒಳ್ಳೆಯ ಮಳೆಯಾಗಿದೆ. ಆ ರೀತಿಯಲ್ಲಿ ನಮಗೇನಾದರೂ ದೇವರು ವರ ಕೊಟ್ಟು, ಏಪ್ರಿಲ್‌ನಲ್ಲಿ ಮಳೆ ಬಂದರೆ ಇವರು ಮತ್ತು ನಾವೆಲ್ಲರೂ ಕೂಡ ಬಚಾವ್ ಆಗುತ್ತೇವೆ. ಇಲ್ಲದಿದ್ದರೆ ನಾವು

ಚುನಾವಣೆಗೆ ಹೋದಂಥ ಸಂದರ್ಭದಲ್ಲಿ ಜನರು ನೀರನ್ನು ಬಿಟ್ಟರೆ ಬೇರೆ ಏನನ್ನೂ ಕೇಳುವುದಿಲ್ಲ. ನಾವು ಯಾರೂ ಕೂಡ ಜನರ ಬಳಿಗೆ ಹೋಗಲು ಸಾಧ್ಯವೂ ಆಗುವುದಿಲ್ಲ.

ತಕ್ಷಣ ಸರ್ಕಾರ ಹಣ ಬಿಡುಗಡೆ ಮಾಡಬೇಕು ಮತ್ತು ಪ್ರತಿಯೊಂದು ಪಂಚಾಯತ್‌ನಲ್ಲಿ ಒಂದು ಕೆರೆಯನ್ನು ಕುಡಿಯುವ ನೀರಿಗೆ ಎಂದು ಸೀಮಿತ ಮಾಡುವುದಕ್ಕೆ ವಿಶೇಷವಾದಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇಂತಹ ಬರ ಪ್ರದೇಶಗಳಲ್ಲಿ ಕೆಲವು ರೈತರು ಮುಂದೆ ಬರುತ್ತಾರೆ. ಗೋಶಾಲೆಗಳನ್ನು ನಾವು ಪ್ರಾರಂಭ ಮಾಡಿದೆವು. ಗೋಶಾಲೆಗಳನ್ನು ನಾವು ಪ್ರಾರಂಭ ಮಾಡಿದ ಮೇಲೆ ಇವರು ಮೇವಿಗೋಸ್ಕರ ಬೇರೆ ಪ್ರದೇಶಗಳಿಗೆ ಹೋಗುತ್ತಿದ್ದರು. ಇವತ್ತು ಬಟ್ಟೆಗಿಂತ ಬಟ್ಟೆ ಹೊಲೆಯುವವರಿಗೇ ಹೆಚ್ಚಿನ ಕೂಲಿ ಕೊಡಬೇಕಾಗುತ್ತದೆ, ಬಟ್ಟೆಗೆ ಏನೂ ಇಲ್ಲ. ಈ ರೀತಿಯಲ್ಲಿ ಮೇವಿನ ಸಾಗಾಣಿಕೆಗೇ ಹೆಚ್ಚಿಗೆ ಹಣ ಕೊಡಬೇಕಾಗಿದೆ. ಮೇವಿಗೆ ಕೊಡುವಂತಹ ಬೆಲೆ ಕಡಿಮೆ. ನಮ್ಮ ಭಾಗದಲ್ಲಿ ರೈತರು ಮೇವು ಕೊಟ್ಟಿದ್ದಾರೆ. ಆದರೆ ಮೇವು ಕೊಟ್ಟಂತಹ ರೈತರಿಗೆ ಇವತ್ತಿಗೂ ಕೂಡ ಹಣ ಬಿಡುಗಡೆ ಮಾಡಿಲ್ಲ. ನಾಳೆ ದಿವಸ ನಾವು ರೈತರ ಹತ್ತಿರ ಹೋಗಿ ಜಾನುವಾರುಗಳಿಗೆ ಇವತ್ತು ಮೇವಿಲ್ಲ ಮೇವು ಕೊಡಿ ಎಂದು ಕೇಳಿದರೆ ಯಾವ ರೈತರು ಮುಂದೆ ಬರುತ್ತಾರೆ? ಈ ರೀತಿ ಒಂದು ಪೊಳ್ಳು ಸರ್ಕಾರ ಎಲ್ಲ ಕೆಲಸವನ್ನು ಮಾಡಿಸಿಕೊಂಡು ಅವರಿಗೆ ಹಣ ಬಿಡುಗಡೆ ಮಾಡದೇ ಹೋದರೆ, ರೈತರು ಯಾವ ರೀತಿ ಮೇವುಗಳನ್ನು ಕೊಡುತ್ತಾರೆ? ಇವತ್ತು ಹಳ್ಳಿಗಳಲ್ಲಿ ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಜಾನುವಾರುಗಳಿಗೆ ಗೋಕುಂಟೆಗಳನ್ನು ಮಾಡಿ ಎಂದರೆ, ಇವರ ಸರ್ಕಾರದಲ್ಲಿ ಗೋಕುಂಟೆಗಳಿಗೆ ಯಾವುದೇ ರೀತಿಯ ಸಹಾಯ ಮಾಡಿಲ್ಲ. ಪ್ರತಿಯೊಂದು ಹಳ್ಳಿಗಳಲ್ಲಿಯೂ ಗೋಕುಂಟೆಗಳನ್ನು ಮಾಡಬೇಕು. ಜಾನುವಾರುಗಳಿಗೆ ಬಾಯಿ ಇಲ್ಲ. ಮಾನವರ ರೀತಿ ಅವುಗಳಿಗೆ ಬಾಯಿ ಇದ್ದಿದ್ದರೆ ಇಡೀ ವಿಧಾನ ಸೌಧಕ್ಕೆ ಎಲ್ಲಾ ಜಾನುವಾರುಗಳು ಬರುತ್ತಿದ್ದವು. ಆದರೆ ಇವತ್ತು ಜಾನುವಾರುಗಳಿಗೆ ಕುಡಿಯುವ ನೀರಿಗೋಸ್ಕರ

ಗೋಕುಂಟೆಗಳನ್ನು ಮಾಡುವುದಕ್ಕೆ ಇವರು ವಿಶೇಷ ಅನುದಾನ ಕೊಡಬೇಕಾಗುತ್ತದೆ.

ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನ ಸಚಿವರು): ಮಾನ್ಯ ಶಾಸಕ ಮಿತ್ರರು ಏನು ರೈತರಿಗೆ ಮೇವಿನ ಹಣ ಬಿಡುಗಡೆ ಆಗಿಲ್ಲ ಎಂದು ಹೇಳಿದರು, specific ಆಗಿ ಇಂತಹ ರೈತರು ಎಂದು ಹೇಳಿದರೆ ತಕ್ಷಣ ಆ ರೈತರಿಗೆ ಹಣ ಬಿಡುಗಡೆ ಮಾಡಿಸುತ್ತೇನೆ.

ಶ್ರೀ ಎನ್. ಸಂಪಂಗಿ: ಈಗ ಚುನಾವಣೆ ಬಂದಿದೆ. ನೀವು ಏನು ಹೇಳಿದರೂ ಕೂಡ ನಾವು ಕೇಳುತ್ತೇವೆ. ನೀವು ಕೊಡುತ್ತೀರೋ ಬಿಡುತ್ತೀರೋ ನಮಗೆ ಗೊತ್ತಿಲ್ಲ. ನಾಳೆಯೇ ಹಣ ಬಿಡುಗಡೆ ಮಾಡಿ. ಇದರಿಂದ ಇವತ್ತು ನಮ್ಮ ಭಾಗದಲ್ಲಿ ಬಹಳಷ್ಟು ತೊಂದರೆಯಾಗಿದೆ. ಸರ್ಕಾರ ಏನು ಹಣ ಬಿಡುಗಡೆ ಮಾಡಬೇಕೋ ಅದನ್ನು ತಕ್ಷಣ ಇವತ್ತೇ ಮಾಡಬೇಕು. ನಮ್ಮಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಇಂಜಿನಿಯರ್‌ಗಳು ಯಾರೇ ಇದ್ದರೂ ಕೂಡ ತಕ್ಷಣ ನೇಮಿಸಬೇಕಾಗುತ್ತದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕೆಲವರನ್ನು ಟ್ಯಾಂಕರ್ ಮೂಲಕ ನೀರು ಹೊಡೆಯಿರಿ ಎಂದು ಕೇಳಿಕೊಳ್ಳುತ್ತಾರೆ. ಟ್ಯಾಂಕರ್ ಮೂಲಕ ನೀರು ಹೊಡೆದರೆ ಅವರಿಗೆ ಬಿಲ್ ಕೊಡುವುದಿಲ್ಲ. ಕಳೆದ ಬಾರಿ ಹಳ್ಳಿಗಳಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸಿದವರಿಗೆ ಇವತ್ತಿಗೂ ಕೂಡ ಬಿಲ್ ಕೊಟ್ಟಿಲ್ಲ. ಈ ರೀತಿಯಾದರೆ ನೀರು ಹೊಡೆಯಲು ಯಾರು ಮುಂದೆ ಬರುತ್ತಾರೆ? ಬರ ಪ್ರದೇಶ ಎಂದು ಘೋಷಣೆ ಮಾಡಿದ್ದಾರೆ. ಅದು ಕೇವಲ ಪೇಪರ್‌ಗಳಲ್ಲಿ, ದಾಖಲೆಗಳಲ್ಲಿ ಇವೆ. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ task-force ನಲ್ಲಿ ಇವರು ಏನೇನು ಅನುಮೋದನೆ ಮಾಡಿಕೊಂಡಿದ್ದಾರೆ, ಅಷ್ಟೂ ಹಣವನ್ನೂ ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಅಲ್ಲಿನ ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯತ್‌ನ CEO ಗಳಿಗೆ ಕಡ್ಡಾಯವಾಗಿ ಸೂಚನೆ ಕೊಡಬೇಕು. ಎಲ್ಲಾ ಅಧಿಕಾರಿಗಳೂ ಆ ಒಂದು ಪ್ರದೇಶದಲ್ಲಿ ಇರಬೇಕೆಂದು ಕಡ್ಡಾಯ ಮಾಡಬೇಕು. ಇವತ್ತು ಅಧಿಕಾರಿಗಳು ಯಾರೂ ನಿಮಗೆ ಸಿಗುವುದಿಲ್ಲ. ಇವತ್ತು ಯಾವುದಾದರೂ ಹಳ್ಳಿಗೆ ಹೋಗಿ

ಇಂಜಿಯರ್‌ರವರ ಹತ್ತಿರ ಮಾತನಾಡಬೇಕೆಂದು ಫೋನ್ ಮಾಡಿದರೆ ಯಾವ ಅಧಿಕಾರಿಗಳೂ ನಮ್ಮ ಕೈಗೆ ಸಿಗುವುದಿಲ್ಲ. ಇವತ್ತು ನಮ್ಮ ಸದನದಲ್ಲಿ ಎಷ್ಟು ಜನ ಮಂತ್ರಿಗಳು ಕುಳಿತುಕೊಳ್ಳುತ್ತಾರೋ ಆ ರೀತಿಯಲ್ಲಿ ಅಧಿಕಾರಿಗಳು ಇರುತ್ತಾರೆ. 'ಮುಂದಿನ ನೇಗಿಲು ಹೇಗೆ ಹೋಗುತ್ತದೆಯೋ ಹಿಂದಿನ ನೇಗಿಲು ಅದೇ ರೀತಿ ಬರುತ್ತದೆ' ಎಂದು ನಮ್ಮಲ್ಲಿ ಹೇಳುತ್ತಾರೆ. ಆ ರೀತಿಯಲ್ಲಿ ಸರ್ಕಾರ ನಡೆಯುತ್ತಿದೆ. ತಮ್ಮ ಸಮ್ಮುಖದಲ್ಲಿ ಈ ಬರವನ್ನು ನೀಗಿಸತಕ್ಕಂಥ ಹಣ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಸುನೀಲ್ ವಿ.ಹೆಗಡೆಯವರು ಮಾತನಾಡುವುದು.

ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ): ಮಾನ್ಯ ಉಪಾಧ್ಯಕ್ಷರೆ, ಬರಗಾಲ ಮತ್ತು ಕುಡಿಯುವ ನೀರು ಎರಡೂ ಸಮಸ್ಯೆಗಳೂ ಇಡೀ ರಾಜ್ಯದಲ್ಲಿಯೇ ಭೀಕರವಾಗಿ ಕಾಡುತ್ತಿದೆ. ಈ ಹಿಂದೆ ಇದೇ ಸದನದಲ್ಲಿ ನನ್ನ ಕ್ಷೇತ್ರದ ಎರಡೂ ತಾಲ್ಲೂಕುಗಳನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ನಾನು ವಿನಂತಿ ಮಾಡಿದ್ದೆ. ಹಳಿಯಾಳ ತಾಲ್ಲೂಕನ್ನು ಬರಗಾಲ ಎಂದು ಘೋಷಣೆ ಮಾಡಿದ್ದಾರೆ. ಆದರೆ, ಜೋಯಿಡಾ ತಾಲ್ಲೂಕು moisture ಮತ್ತು humidity ಎಂದು ಕಾರಣ ಕೊಟ್ಟು ಬರಗಾಲ ತಾಲ್ಲೂಕು ಎಂದು ಘೋಷಣೆ ಮಾಡಲಿಲ್ಲ. ಹಳಿಯಾಳ ತಾಲ್ಲೂಕಿಗೆ ಕೊಟ್ಟಂತಹ ಒಂದು ಕೋಟಿ ರೂಪಾಯಿಯಲ್ಲಿ ಸರ್ಕಾರದಿಂದ ಮಂಜೂರಾಗಿ ಬಂದಿದ್ದು 57 ಲಕ್ಷ ರೂಪಾಯಿಯ ಕೆಲಸಗಳಿಗೆ ಮಾತ್ರ. ಅದೂ ಕೆಲಸಗಳು ಶುರು ಆಗಬೇಕೆಂದು ಇದ್ದರೆ ಹಲವಾರು ರೀತಿಯ conditionಗಳಿಂದ ಯಾವುದೇ ರೀತಿಯ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಹಳಿಯಾಳ ಒಂದರಲ್ಲಿಯೇ ಈಗ 9 ಹಳ್ಳಿಗಳಲ್ಲಿ ಜಾತ್ರೆಗಳಿವೆ. ಯಾವುದೇ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಬೋರ್ ಕೊರೆಸೋಣವೆಂದರೆ, ಜಿಲ್ಲಾ ಪಂಚಾಯತ್‌ನವರ ಹತ್ತಿರವೂ ದುಡ್ಡಿಲ್ಲ.Task-force ನಲ್ಲಿಯೂ ದುಡ್ಡಿಲ್ಲ. ಮೊದಲು ಇದ್ದಂತಹ,

ಬೋರ್‌ವೆಲ್‌ಗಳನ್ನು upgradation ಮಾಡುವುದಕ್ಕೆ ಮಾತ್ರ 1 ಕೋಟಿ ರೂ.ಗಳಲ್ಲಿ 57 ಲಕ್ಷ ರೂ.ಗಳನ್ನು ಕೊಟ್ಟಿರುವುದನ್ನು ಬಿಟ್ಟರೆ, ಹೊಸ ಬೋರ್‌ಗಳನ್ನು ಕೊರೆಸಿ, ಹೊಸ ಬಾವಿಗಳನ್ನು ಕೊರೆಸುವುದಕ್ಕೆ ಯಾವುದೇ ರೀತಿಯ ಅವಕಾಶವನ್ನು ಮಾಡಿ ಕೊಡಲಿಲ್ಲ. ಅದೇ ರೀತಿ ಜೋಯಿಡಾ ತಾಲ್ಲೂಕು, 87% ಅರಣ್ಯದಿಂದ ಕೂಡಿದ್ದರೂ ಸಹ, ಈ ವರ್ಷ ಅಲ್ಲಿಯೂ ಭೀಕರವಾದಂತಹ ಬರಗಾಲವಾಗಿದೆ. ಅಲ್ಲಿ ಕೆಲವೊಂದು ಕಡೆ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಆಗುತ್ತದೆ. ಕೆಲವೊಂದು ಕಡೆ natural water ಮೇಲೆಯೇ depend ಆಗಬೇಕು ಅಥವಾ ಬಾವಿಗಳನ್ನು ಕೊರೆಸಬೇಕು. ಅಲ್ಲಿ ಒಂದು ರೂಪಾಯಿಯೂ ಸಹ ಕುಡಿಯುವ ನೀರಿಗೆ ಇವತ್ತಿನವರೆಗೂ ಹಣ ಬಂದಿಲ್ಲ. ನಾನು task-force ನ ಅಧ್ಯಕ್ಷನಾಗಿ ಆ ಹಳ್ಳಿಯ ಪ್ರತಿಯೊಂದು ತಾಲ್ಲೂಕಿಗೆ ಹೋದಾಗ ಎಲ್ಲಾ ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ನಮ್ಮ ಕಡೆಯಿಂದ ನೀರಿನದ್ದು ಏನೂ ತೊಂದರೆ ಇಲ್ಲ. ಎಂ.ಎಲ್.ಎ.ರವರು ಅಧ್ಯಕ್ಷರಾಗಿದ್ದಾರೆ ಅವರ ಹತ್ತಿರವೇ ಕೇಳಿ ಎಂದು ಹೇಳುತ್ತಾರೆ. ಆದರೆ ನಾವು ಡಿ.ಸಿ. ರವರ ಹತ್ತಿರ ಮಾತನಾಡಿದಾಗ, ಯಾವುದೇ ರೀತಿಯ ದುಡ್ಡು ಕುಡಿಯುವ ನೀರಿನ task-force ಗೆ ಬಂದಿಲ್ಲ, ನೀವು C.S ರವರ ಹತ್ತಿರ ಮಾತನಾಡಿ ಎಂದು ಹೇಳುತ್ತಾರೆ. C.S ನವರನ್ನು ಕೇಳಿದರೆ ನಮ್ಮ ಹತ್ತಿರ ಯಾವುದೇ ದುಡ್ಡು ಇಲ್ಲವೆಂದು ಹೇಳುತ್ತಾರೆ. ಒಂದು ಕಡೆ ಕಾಡಿನಲ್ಲಿರುವಂತಹ ಜನ, ಕುಡಿಯುವುದಕ್ಕೆ ನೀರಿಲ್ಲ, ಈ ಒಂದು ಸನ್ನಿವೇಶದಲ್ಲಿ ಕಾಡಿನಿಂದ ಹೊರಗೆ ಬಂದು ನೀರು ಕುಡಿಯುವಂತಹ ಪರಿಸ್ಥಿತಿ ಇರುವಾಗ, ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ 10–15 ಕಿ.ಮೀ. distance. ಇದೆ. ಇಂತಹ ಒಂದು ಸನ್ನಿವೇಶದಲ್ಲಿ ಏಕಾದರೂ ನಾವು task-force ನ ಅಧ್ಯಕ್ಷರಾಗಿ ಉಳಿದಿದ್ದೇವೆಯೋ ಎನ್ನುವ ಭಾವನೆ ನಮ್ಮನ್ನು ಕಾಡುತ್ತಿದೆ. ಎರಡನೆಯದಾಗಿ, ಜೋಯಿಡಾ ಮತ್ತು ಹಳಿಯಾಳದಲ್ಲಿ ಹೋದ ವರ್ಷವೂ ನೀರಿನ ಸಮಸ್ಯೆ ಇತ್ತು. ಈ ವರ್ಷವೂ ನೀರಿನ ಸಮಸ್ಯೆ ಇದೆ, ಮಳೆ ಕಡಿಮೆಯಾಗಿದೆ. ಹೀಗಾಗಿ

ಬೆಳೆಗಳೆಲ್ಲಾ ನಾಶವಾಗಿವೆ. ಕಳೆದ ಎರಡು ವರ್ಷಗಳಿಂದ ಹಳಿಯಾಳದಲ್ಲಿ ಗೋವಿನ ಜೋಳ ಹಾಳಾಗಿದೆ. ಭತ್ತ ಹಾಳಾಗಿ ಬಿದ್ದಿದೆ. ನಾವು insureance ತುಂಬಿದ್ದೇವೆ. ಆದರೆ ಯಾವುದೇ ರೀತಿಯ crop insurance ಇವತ್ತಿನವರೆಗೂ ಬಂದಿಲ್ಲ. ಜೋಯಿಡಾ ತಾಲ್ಲೂಕಿಗೆ ಇತಿಹಾಸದಲ್ಲಿಯೇ ಒಂದು ಪೈಸೆ crop insurance ಇವತ್ತಿನವರೆಗೂ ಕೊಟ್ಟಿಲ್ಲ. ಈ ರೀತಿಯ ತಾರತಮ್ಯ ಜೋಯಿಡಾ ಮತ್ತು ಹಳಿಯಾಳಕ್ಕೆ ಆಗುತ್ತಿದೆ. ಜೋಯಿಡಾ ತಾಲ್ಲೂಕು ನಂಜುಂಡಪ್ಪ ವರದಿಯಲ್ಲಿ ಬಂದಿದೆ, ಹಿಂದುಳಿದ ತಾಲ್ಲೂಕು ಎಂದು ಹೇಳುತ್ತಾರೆ. ಆದರೆ ಯಾವುದೇ ರೀತಿಯ ಸವಲತ್ತುಗಳನ್ನು ಜೋಯಿಡಾ ತಾಲ್ಲೂಕಿಗೆ ಇವತ್ತಿನವರೆಗೂ ಕೊಡುತ್ತಿಲ್ಲ. ನಾನು ಈಗಾಗಲೇ ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡಿದ್ದೇನೆ, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ವಿನಂತಿ ಮಾಡಿದ್ದೇನೆ. ಒಂದು ಕಡೆ ಬರಗಾಲದ ಛಾಯೆ ಇದೆ. ಕುಡಿಯುವುದಕ್ಕೆ ನೀರಿಲ್ಲ. ಒಂದು ಕಡೆ ರೈತ ಬೆಳೆದಂತಹ ಬೆಳೆ ಬರಲಿಲ್ಲ. insurance ಗಾಗಿ ಎಲ್ಲಾ ಸೊಸೈಟಿ ಮುಖಾಂತರ ಪ್ರೀಮಿಯಮ್ ತುಂಬಿದ್ದು ಇದೆ. ಆ ಪ್ರೀಮಿಯಮ್ ದುಡ್ಡೂ ಬರುತ್ತಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಹಳಿಯಾಳ ಜೋಯಿಡಾದಿಂದ ಜನ ಗುಳೆ ಹೋಗುವಂತಹ ಸನ್ನಿವೇಶ ನಿರ್ಮಾಣವಾಗಿದೆ. ಜೋಯಿಡಾ ಹಾಗೂ ಹಳಿಯಾಳ ತಾಲ್ಲೂಕಿನ ಬಹಳಷ್ಟು ಜನ ಗೌಂಡಿ ಕೆಲಸಕ್ಕಾಗಿ ಗೋವಾಕ್ಕೆ ಕೊಲ್ಲಾಪುರಕ್ಕೆ ಹೋಗಿದ್ದಾರೆ. ಮನೆಯಲ್ಲಿ ಯಾರದಾರೂ ಸತ್ತರೂ ಸಹ, ಅವರ ಮಣ್ಣಿಗೆ ನಾವು 3-3 ದಿನ ಕಾಯಬೇಕು. ಏಕೆಂದರೆ ಅವರು ಕೊಲ್ಲಾಪುರ, ಗೋವಾದಿಂದ ಬರಬೇಕು. ಇಂತಹ ಒಂದು ಸನ್ನಿವೇಶ ನಮ್ಮಲ್ಲಿ ನಿರ್ಮಾಣವಾಗಿದೆ. ಒಂದು ಕಡೆ ಪಂಚಾಯಿತಿಯಲ್ಲಿ NREG ಯ approval ತೆಗೆದುಕೊಂಡಿದ್ದಾರೆ. ಯಾವುದೇ ರೀತಿಯ NREG ಕಾಮಗಾರಿಗಳು ನಡೆಯುತ್ತಿಲ್ಲ. ಮಾನ್ಯ ಸಂಪಂಗಿಯವರು ಹೇಳಿದ ಹಾಗೆ ಇಂಜಿನಿಯರ್‌ಗಳ ಕೊರತೆ ಒಂದು ಕಡೆ ಆದರೆ, ಒಬ್ಬರು ಜಿಲ್ಲಾ ಪಂಚಾಯತ್‌ನ ಇಂಜಿನಿಯರ್‌ರವರು ಎಂ.ಎಲ್.ಎ. ಗ್ರಾಂಟ್ಸ್ ಕೆಲಸ ಮಾಡಬೇಕು. ಜಿಲ್ಲಾ ಪಂಚಾಯಿತಿ ಕೆಲಸ ಮಾಡಬೇಕು. ತಾಲ್ಲೂಕು

ಪಂಚಾಯಿತಿ, ಗ್ರಾಮ ಪಂಚಾಯಿತಿ ಕೆಲಸ ಮಾಡಬೇಕು, NREG ಕೆಲಸ ಮಾಡಬೇಕು ಮತ್ತು task-force ನ ಕೆಲಸ ಮಾಡಬೇಕು. ಇಷ್ಟೆಲ್ಲಾ ಕೆಲಸಗಳನ್ನು ಒಬ್ಬರೇ ಇಂಜಿನಿಯರ್ ಮಾಡುತ್ತಿರುವುದರಿಂದ ಸಮರ್ಪಕವಾಗಿ ಯಾವುದೇ ಕೆಲಸಗಳು ಆಗುತ್ತಿಲ್ಲ. ಅಂತಹ ಒಂದು ಸನ್ನಿವೇಶದಲ್ಲಿ ಈ ರೀತಿ ಬರಗಾಲಕ್ಕೆ ತುತ್ತಾದಂತಹ ವ್ಯವಸ್ಥೆಗೆ ನಾವು ನಿರ್ಲಕ್ಷ್ಯ ತಾಳಿದರೆ, ಖಂಡಿತವಾಗಿಯೂ ಮುಂದಿನ ತಿಂಗಳಿನಲ್ಲಿ ಚುನಾವಣೆಗಳು ಬಂದಾಗ, ಯಾವುದೇ ಅಭ್ಯರ್ಥಿಗಳು ಇರಲಿ, ಯಾರೇ ಇರಲಿ, ಯಾವುದೇ ಹಳ್ಳಿಗಳಿಗೆ ಹೋಗುವಂತಹ ಸನ್ನಿವೇಶ ನಿರ್ಮಾಣವಾಗುವುದಿಲ್ಲ. ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಬರುತ್ತದೆ. ಟ್ಯಾಂಕರ್ ಮೂಲಕ ನೀರು ಕೊಡುವಂತೆ ತಹಶೀಲ್ದಾರರು ಮತ್ತು ಡಿ.ಸಿ. ಮುಖಾಂತರ ಹೇಳುತ್ತಿದ್ದಾರೆ. ಟ್ಯಾಂಕರ್ ಮೂಲಕ ಕೊಡಬೇಕೆಂದು ಹೇಳಿದರೆ, ಆ ಹಳ್ಳಿಗಳಲ್ಲಿ ನಾವು ಎಲ್ಲಿ ಟ್ಯಾಂಕರ್‌ಗಳನ್ನು ತೆಗೆದುಕೊಂಡು ಹೋಗುತ್ತೇವೆ ಅಲ್ಲಿ ಸರಿಯಾದಂತಹ electricity ಇರುವುದಿಲ್ಲ. ದಿವಸಕ್ಕೆ 3 ಗಂಟೆ, 4 ಗಂಟೆelectricity ಇದ್ದರೆ, ಆನಂತರ electricity ಇರುವುದಿಲ್ಲ. ಒಂದು ಟ್ಯಾಂಕರ್ ತುಂಬಿಕೊಂಡು 10 ಕಿ.ಮೀ. ಹಳ್ಳಿಗೆ ಹೋಗಿ ಕೊಟ್ಟು ಬರುವಷ್ಟರೊಳಗೆ ಇಲ್ಲಿ ಕರೆಂಟ್ ಇರುವುದಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಈಗ task-force ಅನ್ನು ಬಲಪಡಿಸಬೇಕಾಗಿದೆ. ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿರುವ task-force ಅನ್ನು ಬಲಪಡಿಸಿದರೆ, ಖಂಡಿತವಾಗಿಯೂ ಅದರಲ್ಲಿ ಏನಾದರೂ action ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ನೀವು ಅದನ್ನು C.S. ನವರ ಕೈಯಲ್ಲಿ ಕೊಟ್ಟರೆ ಅವರು ಅದನ್ನು ಡಿ.ಸಿ.ಯವರ ಕೈಯಲ್ಲಿ ಕೊಟ್ಟರೆ ಮತ್ತೆ ಅವರ ಕೈ ಕೆಳಗಿರುವ ಅಧಿಕಾರಿಗಳಲ್ಲಿ ಹೋಗಿ ನಾವು ಕೇಳಿಕೊಂಡು, ನಮ್ಮ ಕೆಲಸಗಳು ಯಾವುದೂ ಆಗುವುದಿಲ್ಲ. ಕುಡಿಯುವ ನೀರಿಗಾಗಿ ಜೋಯಿಡಾ ತಾಲ್ಲೂಕಿಗಾಗಿ ಸುಮಾರು ಒಂದು ಕೋಟಿಗೂ ಚಿಲ್ಲರೆ ರೂಪಾಯಿ ಕೊಡಬೇಕೆಂದು ಡಿ.ಸಿ.ಯವರಿಗೆ ಮನವಿ ಸಲ್ಲಿಸಿದ್ದೇವೆ. ಅವರು ಸರ್ಕಾರಕ್ಕೆ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ.

ದುಡ್ಡಿಲ್ಲವೆಂದು ಹೇಳುತ್ತಾರೆ. ಈ ರೀತಿ ಸನ್ನಿವೇಶಗಳು ನಿರ್ಮಾಣವಾದರೆ ಶಾಸಕರಾಗಿ ಕ್ಷೇತ್ರದಲ್ಲಿ ಕೆಲಸ ಮಾಡಲು ಸಮಸ್ಯೆಯಾಗುತ್ತದೆ. ಸರ್ಕಾರವು ಹಳಿಯಾಳ ತಾಲ್ಲೂಕನ್ನು ಬರಗಾಲವೆಂದು ಘೋಷಣೆ ಮಾಡಿದೆ. ಕೂಡಲೇ ಪಕ್ಕಧ ತಾಲ್ಲೂಕಾದ ಜೋಯಿಡಾ ತಾಲ್ಲೂಕಿಗೆ ಬರಗಾಲವೆಂದು ಘೋಷಣೆ ಮಾಡುವುದು ಅವಶ್ಯಕತೆ ಇದೆ. ಏಕೆಂದರೆ ಅಲ್ಲಿ ಕುಡಿಯುವುದಕ್ಕೂ ಕೂಡ ನೀರು ಇಲ್ಲ. ಅಲ್ಲಿ ಬೆಳೆಯೂ ಸಹ ಬರಲಿಲ್ಲ. ಏಕೆಂದರೆ ಅಲ್ಲಿ ನೆಟ್ಟಿ ಬೆಳೆಯನ್ನು ಬೆಳೆಯುತ್ತಾರೆ. ಅಲ್ಲಿ ನೆಟ್ಟಿಯನ್ನು ಬೆಳೆದಿದ್ದಾರೆ. ಅದರ ನಂತರ ಅಲ್ಲಿ ಮಳೆ ಬರಲಿಲ್ಲ. ಅಲ್ಲಿ ಎಲ್ಲಾ ಬೆಳೆಯು ಹಾಳಾಗಿಹೋಗಿ ಜೋಯಿಡಾ ತಾಲ್ಲೂಕಿನ ಜನರು ಬರಗಾಲ ಬವಣೆಗೆ ತುತ್ತಾಗಿದ್ದಾರೆ. ಕೂಡಲೆ ಆ ತಾಲ್ಲೂಕನ್ನು ಬರಗಾಲವೆಂದು ಘೋಷಣೆ ಮಾಡಿ ಜೋಯಿಡಾ–ಹಳಿಯಾಳ ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಮತ್ತು ಬರಗಾಲವನ್ನು ಎದುರಿಸುವುದಕ್ಕಾಗಿ task-force ಗೆ ಸಾಕಷ್ಟು ಪ್ರಮಾಣದಲ್ಲಿ ದುಡ್ಡನ್ನು ಕೊಟ್ಟು ಕೂಡಲೇ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಪ್ರಯತ್ನವನ್ನು ಮಾಡಿದಲ್ಲಿ ಮುಂದಿನ ದಿನಗಳಲ್ಲಿ ಅಲ್ಲಿ ಶಾಂತಿಕರವಾದಂತಹ ವಾತಾವರಣವು ನಿರ್ಮಾಣವಾಗುತ್ತದೆ, ಇಲ್ಲದೆ ಹೋದರೆ ಖಂಡಿತವಾಗಿ ಅಲ್ಲಿ ಅಶಾಂತಿಯ ವಾತಾವರಣವು ನಿರ್ಮಾಣವಾಗಿ ಕುಡಿಯುವ ನೀರಿಗಾಗಿ ಹೊಡೆದಾಡುವಂತಹ ಸನ್ನಿವೇಶವು ನಿರ್ಮಾಣವಾಗುವ ಸಾಧ್ಯತೆಗಳು ಇದೆ. ನಾನು ಈ ಸನ್ನಿವೇಶದಲ್ಲಿ ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, Surfacewater ನಿಂದ ಕುಡಿಯುವ ನೀರಿಗಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು. ನಮ್ಮಲ್ಲಿ ಬಹುಗ್ರಾಮ ಯೋಜನೆಗಳು 4–5 ಯೋಜನೆಗಳನ್ನು ಸರ್ಕಾರಕ್ಕೆ ನಾವು ಸಲ್ಲಿಸಿದ್ದೇವೆ. ಕಾಳಿನದಿ ನೀರಿನಿಂದ ಕುಡಿಯುವ ನೀರಿಗಾಗಿ ಯೋಜನೆಯನ್ನು ಮಾಡಿದ್ದೇವೆ. ಅದನ್ನು ಜಾರಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ಪ್ರಯತ್ನವನ್ನು ಮಾಡಬೇಕು. ಸೂಪಾ ಡ್ಯಾಂನಲ್ಲಿರುವಂತಹ ನೀರನ್ನು ಕುಡಿಯುವುದಕ್ಕಾದರೂ ಉಪಯೋಗ ಮಾಡುವುದಕ್ಕೆ ಸರ್ಕಾರವು ಈ ಸನ್ನಿವೇಶದಲ್ಲಿ permission ಅನ್ನು ಕೊಡಬೇಕಾಗಿದೆ. ಈ ರೀತಿ ಮಾಡಿದಾಗ ಮಾತ್ರ ಕುಡಿಯುವ ನೀರಿನ

ಬವಣೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ಈ ದಿಸೆಯಲ್ಲಿ ಸರ್ಕಾರವು ಕೂಡಲೇ ಪ್ರಯತ್ನವನ್ನು ಮಾಡಬೇಕು. Crop insurance ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಹೋದ ವರ್ಷವೂ ಬರಗಾಲವಾಗಿದೆ. ಆದರೆ ನಮಗೆ Crop insureance ಬರಲಿಲ್ಲ. ಅದರ ಹಿಂದಿನ ವರ್ಷವೂ ಬರಗಾಲವಾಗಿ ಆಗಲೂ ಸಹ crop insurance ಭರಲಿಲ್ಲ. ಈ ವರ್ಷವಂತೂ ಭೀಕರ ಬರಗಾಲವಾಗಿದೆ. Crop insurance ಗೆ ಬಂಧಪಟ್ಟ ಹಾಗೆ ರೆವಿನ್ಯೂ ಇಲಾಖೆಯವರು ಸಂಬಂಧಪಟ್ಟ ಇತರೆ ಇಲಾಖೆಯವರ ಜೊತೆಯಲ್ಲಿ ಸರ್ಕಾರ ಕೂಡಲೇ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಅನ್ನು ಮಾಡಿ ಆ insurance ಕೊಡುವಂತಹ ನಿಟ್ಟಿನಲ್ಲಿ ಕಾರ್ಯಕ್ರಮಗಳು ಆಗಬೇಕು. ಇದಕ್ಕೆ ಕೂಡಲೇ ಒತ್ತನ್ನು ಕೊಟ್ಟಲ್ಲಿ ಮಾತ್ರ ಈ ಕಾರ್ಯಕ್ರಮಗಳು ಯಶಸ್ವಿಯಾಗುವುದಕ್ಕೆ ಸಾಧ್ಯವಿದೆ. ಇಲ್ಲವೆಂದರೆ ಇದು ಕೇವಲ writing ನಲ್ಲಿ ಮತ್ತು book ನಲ್ಲಿ ಮಾತ್ರ ಉಳಿದುಬಿಡುತ್ತದೆ. ಅಲ್ಲಿ ಯಾವುದೇ ರೀತಿಯಾದಂತಹ ಕೆಲಸಕಾರ್ಯಗಳು ಆಗುವುದಕ್ಕೆ ಸಾಧ್ಯವಿಲ್ಲ. ನರೇಗಾ ಯೋಜನೆಗೆ ಅತಿ ಹೆಚ್ಚಿನ ಒತ್ತನ್ನು ಕೊಟ್ಟು ಅಲ್ಲಿ ಇಂಜಿನಿಯರ್‌ಗಳನ್ನು ನೇಮಕ ಮಾಡಿ ಆದಷ್ಟು ಅಲ್ಲಿ ಗುಳೆ ಹೋಗುವವರನ್ನು ತಪ್ಪಿಸುವುದಕ್ಕೆ ಜನರನ್ನು ಅಲ್ಲಿ ಕೆಲಸ ಕಾರ್ಯಗಳಲ್ಲಿ ತೊಡಗಿಸುವುದಕ್ಕೆ ಸರ್ಕಾರವು ಪ್ರಯತ್ನ ಮಾಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಶಿವರಾಜ್ ತಂಗಡಗಿ (ಕನಕಗಿರಿ): ಮಾನ್ಯ ಉಪಾಧ್ಯಕ್ಷರೆ, ಬಹಳಷ್ಟು ಸದಸ್ಯರುಗಳು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿ ನಮ್ಮ ತಾಲ್ಲೂಕನ್ನು ಬರಗಾಲವೆಂದು ಘೋಷಣೆ ಮಾಡಿ ಈ ಹಿಂದೆ ಏನು task-force ಅನ್ನು ಮಾಡಿ ಅದಕ್ಕೆ ಡಿ.ಸಿ.ಯವರು ಅಪ್ರೂವ್ ಮಾಡಿದ ಮೇಲೆ ಕಾಮಗಾರಿಯನ್ನು ಪ್ರಾರಂಭ ಮಾಡಿದೆವು. ಆಕಾಮಗಾರಿ ಕೆಲಸದ ದುಡ್ಡು ಇದುವರೆಗೂ ಬಿಡುಗಡೆಯಾಗಿರುವುದಿಲ್ಲ. ಈಗಾಗಲೇ 2–3 ಸಾರಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇನೆ. ಈ ಸದನದಲ್ಲಿ ಸನ್ಮಾನ್ಯ ಡಿ.ಸಿ.ಎಂ.ರವರು

ಇದ್ದಾರೆ. ಅವರಿಗೂ ಸಹ ನಾವು ಎರಡು ಸಾರಿ ಮನವಿಯನ್ನು ಸಲ್ಲಿಸಿದ್ದೇವೆ. ಇವರು ಹಣವನ್ನು ಬಿಡುಗಡೆ ಮಾಡಿ ಎಂದರು ಹೇಳುತ್ತಾರೆ, ಆದರೆ ಡಿ.ಸಿ.ಯವರು ಮಾತ್ರ ನಮ್ಮ ಹತ್ತಿರ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಈ ವರ್ಷವೂ ಸಹ ಮಳೆಯಾಗಿರುವುದಿಲ್ಲ. ಮಳೆಯಾಗದೆ ಇರುವಂತಹ ಬಹಳಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ತೊಂದರೆ ಇದೆ. ನಾವು ಶಾಸಕರಾಗಿat least, ಆ ಕ್ಷೇತ್ರಕ್ಕಾಗಿ ಕುಡಿಯುವ ನೀರನ್ನು ಸಹ ಒದಗಿಸದೇ ಹೋದರೆ ಯಾವ ಒಂದು ಕಾರಣಕ್ಕಾಗಿ ಇಲ್ಲಿ ಇರಬೇಕು. ಅದಕ್ಕಾಗಿ ಸರ್ಕಾರವು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಅಲ್ಲಿ ಏನಾಗಿದೆ ಸಮಸ್ಯೆ ಎಂದರೆ, ಸಾಕಷ್ಟು condition ಗಳನ್ನು ಹಾಕಿದ್ದಾರೆ. Task-force ಅನ್ನು ಮಾಡಿ ಡಿ.ಸಿ.ಯವರಿಗೆ ಒಪ್ಪಿಸಬೇಕು, ಡಿ.ಸಿ.ಯವರು ಅವರದೇ ಆದಂತಹ ಸಮಸ್ಯೆಗಳನ್ನು ಹೇಳುತ್ತಾರೆ. ಬರೀ ಬೋರ್‌ವೆಲ್‌ಗೆ ಮಾತ್ರ ಇಷ್ಟು ದುಡ್ಡು, ಅದು ಆದಮೇಲೆ ಪೈಪ್ ಲೈನ್‌ಗೆ ಇಷ್ಟು ದುಡ್ಡು, ಆದರೆ ದಯಮಾಡಿ ಕುಡಿಯುವ ನೀರಿನ ವಿಚಾರದಲ್ಲಿ ಸ್ವಲ್ಪ ಕಾನೂನನ್ನು ಸಡಲೀಕರಣ ಮಾಡಬೇಕು. ಅಲ್ಲಿರುವಂತಹ ವಸ್ತುಸ್ಥಿತಿಯ ವಿಚಾರವನ್ನು ತಿಳಿದುಕೊಳ್ಳಲಾರದೆ ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ಇವತ್ತು ಏನಾಗಿದೆ ಎಂದರೆ, ನನ್ನ ಕ್ಷೇತ್ರದ ರಾಮಪುರ ಎನ್ನುವಂತಹ ಗ್ರಾಮದಲ್ಲಿ ಕನಿಷ್ಠ 6 ಬೋರ್ ಹಾಕಿಸಿದರೂ ಒಂದರಲ್ಲೂ ನೀರು ಬರಲಿಲ್ಲ. ಕೊನೆಗೆ ನಾವು ಸುಮಾರು 3 ಕಿ.ಮೀ. ದೂರದಲ್ಲಿ ಬೋರ್ ಹಾಕಿ ನೀರು ತರುವಂತಹ ವ್ಯವಸ್ಥೆಯನ್ನು ಮಾಡಿದೆವು. ಆದರೆ ಇಲ್ಲಿಯವರೆಗೂ ಅದಕ್ಕೆ ಬಿಲ್ ಕೊಡುವಂತಹ ಕೆಲಸ ಆಗಲಿಲ್ಲ. ಇದರ ಜೊತೆಗೆ ಮಾನ್ಯ ಉಪಾಧ್ಯಕ್ಷರೆ, ನಾನು ನಿಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. Taskforce ಎನ್ನುವುದನ್ನು ಗಟ್ಟಿ ಮಾಡಬೇಕಾದರೆ, ಶಾಸಕರಿಗೆ ಅಧಿಕಾರ ಏನು ಕೊಟಿದ್ದೀರಿ ಕನಿಷ್ಠ 4 ದಿನದೊಳಗೆ ಒಂದು ವಾರದೊಳಗೆ ಅದನ್ನು implement ಮಾಡುವುದಕ್ಕಾದರೂ ತಾವು ಅವಕಾಶವನ್ನು ಮಾಡಿಕೊಡಬೇಕು. ಕೆಲಸ ಮಾಡುವುದಕ್ಕೆ ಆದೇಶವನ್ನು ಮಾಡಿದ ಮೇಲೆ ಆ ಬಿಲ್ ಪಾವತಿ ಆಗದೆ ಇದ್ದರೆ ಹೇಗೆ? ಅದು ಪಾವತಿಯಾಗಬೇಕು.

ಇನ್ನೊಂದು ನಮ್ಮಲ್ಲಿ ಏನಾಗಿದೆ ಎಂದರೆ, ಕುಡಿಯುವ ನೀರನ್ನು ಬಹಳಷ್ಟು ದೂರದಿಂದ ತರುವಂತಹ ಕೆಲಸ, ಅದರ ಜೊತೆಗೆ ಕೆ.ಇ.ಬಿ.ಯದು, ಕರೆಂಟಿನಿಂದ ಏನಾಗಿದೆ ಎಂದರೆ ಅದನ್ನೂ ಸಹ ತಾವು ಸ್ವಲ್ಪ ಸಡಲೀಕರಣ ಮಾಡಬೇಕು. ನಾವು ಏನು ಟಿ.ಸಿ.ಯನ್ನು ಕೊಡುತ್ತೇವೆ, ಅದರ ಜೊತೆಗೆ ಕಂಬವನ್ನು ಕೊಡುತ್ತೇವೆ. ಅದು ಆದ ಮೇಲೆ ಅವರು ದುಡ್ಡನ್ನು ಕಟ್ಟಿ ಆದ ಮೇಲೆಯೇ ಅವರಿಗೆ ನಾವು ಕನೆಕ್ಷನ್ ಕೊಡುತ್ತೇವೆ. ಅಲ್ಲಿಯವರೆಗೂ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಅಧಿಕಾರಿಯವರು ಹೇಳುತ್ತಾರೆ. ಹೀಗೆ ಆದರೆ ನಾವು ಬರಗಾಲವನ್ನು ಯಾವ ರೀತಿಯಾಗಿ ಎದುರಿಸುವುದಕ್ಕೆ ಸಾಧ್ಯವಿದೆ? ನಾವು ಬರಗಾಲವನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಾವು ಬೋರ್ ಹಾಕುತ್ತೇವೆ, ಬೋರ್ ಹಾಕಿದ ಮೇಲೆ ಪೈಪ್ ಲೈನ್ ಹಾಕುತ್ತೇವೆ ಇದು ಆದ ಮೇಲೆ ಕೆ.ಇ.ಬಿ.ಯವರು ಕರೆಂಟ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ದುಡ್ಡು ಕಟ್ಟುವುದಕ್ಕೂ ಸಾಧ್ಯವಿಲ್ಲವೆಂದು ಕೆ.ಇ.ಬಿ.ಯವರು ಸ್ಪಷ್ಟವಾಗಿ ಹೇಳುತ್ತಾರೆ. ನಮ್ಮಲ್ಲಿ ಮೊಟ್ಟಮೊದಲಿಗೆ ಕರೆಂಟಿನ ತೊಂದರೆ ಇದೆ. ನಮ್ಮ ಕ್ಷೇತ್ರದ 5–6 ಹೋಬಳಿಯಲ್ಲಿ ಪ್ರತಿಭಟನೆಯು ಪ್ರಾರಂಭವಾಗಿತ್ತು. ಈ ಬಗ್ಗೆ ಮತ್ತೊಂದು ಹೊಸ ಆದೇಶವನ್ನು ಮಾಡಿದ್ದಾರೆ. 3 ಗಂಟೆಗಳ ಕಾಲ 3 ಫೇಸ್, 5 ತಾಸು ಸಿಂಗಲ್ ಫೇಸ್ ಎಂದು ಮಾಡಿದ್ದಾರೆ. ಹಿಂದೆ 6 ತಾಸುವಳ ಕಾಲ ಕರೆಂಟ್ ಕೊಡುವ ಬಗ್ಗೆ ಇನ್ನೂ ಕೆಲಸವಾಗಿರುವುದಿಲ್ಲ. ಆದರೆ ಈಗಲೂ 3 ತಾಸು ಎಂದು ಆದೇಶವನ್ನು ಮಾಡಿದರೂ ಕೂಡ ಈಗ ಒಂದೂವರೆ ತಾಸು ಮಾತ್ರ ಕರೆಂಟ್ ಅನ್ನು ಕೊಡುತ್ತಿದ್ದಾರೆ. ಇವರು ಒಂದೂವರೆ ತಾಸು ಕರೆಂಟ್ ಅನ್ನು ಕೊಟ್ಟರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೇಗೆ ಸರಿಮಾಡುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ನಮ್ಮಲ್ಲಿ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಾಗಿದೆ. ಇದರ ಜೊತೆಗೆ ಕರೆಂಟಿನ ಅಭಾವವೂ ಕೂಡ ಆಗಿದೆ. ಆ ನೋವನ್ನು ಹೇಳತೀರದು. ಆ ಒಂದೂವರೆ ತಾಸಿನ ಕರೆಂಟ್ ಇದ್ದುದರಲ್ಲಿ ನಾವೆಲ್ಲರೂ ಹೋಗಿ ನೀರನ್ನು ತುಂಬಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಸುಮಾರು 5–6 ಕಡೆಯಲ್ಲಿ

ಪ್ರತಿಭಟನೆಗಳು ಆಗುತ್ತಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಸರಿಮಾಡಬೇಕು. ಕರೆಂಟ್ ಇಲ್ಲದೆ ಇದ್ದರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕಾಗುವುದಿಲ್ಲ. ಈಗ ಹೊಸದೊಂದು ನಿರಂತರ ಜ್ಯೋತಿ ಕಾರ್ಯಕ್ರಮ ಮಾಡುತ್ತೇವೆ, ಇದರಿಂದ ಕುಡಿಯುವ ನೀರಿಗೆ ವ್ಯವಸ್ಥೆ ಆಗುತ್ತದೆ. ಒಂದು ಕಡೆಯಲ್ಲಿ ಇದನ್ನು ಸರಿಮಾಡುವುದಕ್ಕೆ ಹೋಗಿ ಇನ್ನೊಂದು ಸಮಸ್ಯೆಯನ್ನು ನಾವು ಸೃಷ್ಟಿ ಮಾಡುತ್ತಿದ್ದೇವೆ. ನಿರಂತರ ಜ್ಯೋತಿಯಲ್ಲಿ 6 ತಾಸು 3 ಫೇಸ್‌ಕರೆಂಟ್ ಅನ್ನು ಕೊಡುವಂತಹ ವ್ಯವಸ್ಥೆ ಇದೆ. ನಮ್ಮ ಭಾಗದ ರೈತರು 6 ತಾಸಿನೊಳಗೆ ಸುಮಾರು 1–2 ಎಕರೆ ಭೂಮಿಗೆ ನೀರನ್ನು ಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಈಶ್ವರಪ್ಪನವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕೆಲವೊಂದು ಭಾಗದಲ್ಲಿ ನಿರಂತರ ಜ್ಯೋತಿ ಪ್ರಾರಂಭವಾಗಿಲ್ಲ. ಆದರೆ ಇದನ್ನು ಪ್ರಾರಂಭ ಮಾಡುವುದರ ಜೊತೆಗೆ ಕನಿಷ್ಠ 3 ಫೇಸ್ ಕರೆಂಟ್ ಅನ್ನು 12 ತಾಸಿನವರೆಗಾದರೂ ಕೊಡುವಂತಹ ವ್ಯವಸ್ಥೆಯಾದರೆ ಈ ನಿರಂತರ ಜ್ಯೋತಿಯಲ್ಲಿ ಆದರೆ ಅದು ಎಲ್ಲೋ ಒಂದು ಕಡೆಯಲ್ಲಿ ಯಶಸ್ವಿಯಾಗುವುದಕ್ಕೆ ಸಾಧ್ಯವತೆ ಇದೆ. ಇವತ್ತು ಸಾಕಷ್ಟು ಹಣವನ್ನು ನೀಡಿ ಈ ನಿರಂತರ ಜ್ಯೋತಿಯಲ್ಲಿ ಕಂಬಗಳನ್ನು ಹಾಕಿ ಎಲ್ಲವನ್ನೂ ಮಾಡಿದ್ದೀರಿ. ಆದರೆ ಅದು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಈ ನಿರಂತರ ಜ್ಯೋತಿ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಪ್ರಾರಂಭ ಮಾಡಬೇಕು. ನೀವು 6 ತಾಸಿನಲ್ಲಿ 3 ಫೇಸ್ ಕರೆಂಟ್ ಅನ್ನು ಕೊಟ್ಟರೆ ರೈತರು ಒಪ್ಪಿಕೊಳ್ಳುವುದಿಲ್ಲ. ಇದು ಯಶಸ್ವಿಯಾಗುವುದಕ್ಕೂ ಕೂಡ ಸಾಧ್ಯವಿಲ್ಲ. ನಾನು ಮಾನ್ಯ ಈಶ್ವರಪ್ಪ ಸಾಹೇಬರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ರಾಜೀವ್ ಗಾಂಧಿ ಯೋಜನೆಯನ್ನು ನೇರವಾಗಿ ನದಿಯಿಂದ ಕೆರೆಗೆ ತಂದು, ಕೆರೆಯಿಂದ ಗ್ರಾಮಗಳಿಗೆ ಕೊಡುವಂತಹ ಯೋಜನೆಯನ್ನು ಪ್ರಾರಂಭ ಮಾಡಿದ್ದರು. ಇಲ್ಲಿ ಟೆಂಡರ್‌ನಲ್ಲಿರುವಂತಹದ್ದು ಬರೀ ಆ ಊರಿನಲ್ಲಿರುವಂತಹ ನೀರಿನ ಟ್ಯಾಂಕಿಗೆ ಮಾತ್ರ ನೀರನ್ನು

ತಂದುಕೊಡುವಂತಹ ವ್ಯವಸ್ಥೆ ಆಗುತ್ತದೆ. ಆದರೆ ಊರಿನೊಳಗೆ ಪೈಪ್‌ಲೈನ್ ಮಾಡುವುದಕ್ಕೆ ನಮ್ಮಲ್ಲಿ ದುಡ್ಡು ಇಲ್ಲ, ನಮ್ಮ ಟೆಂಡರ್‌ನಲ್ಲಿ ಇಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಮ್ಮ ಭಾಗದೊಳಗೆ ಕನಿಷ್ಠ 6 ರಿಂದ 7 Rajeev Gandhi Sub-Mission ಯೋಜನೆ ಪ್ರಾರಂಭವಾಗಿದೆ. ಅದರಲ್ಲಿ ಮೂರು ಕಾಮಗಾರಿಗಳು ಮುಗಿದು ಕೆಲಸವು start ಆಗಿದೆ. ನಮಗೆ ಬರಿ ಟ್ಯಾಂಕಿಗೆ ನೀರನ್ನು ತೆಗೆದುಕೊಂಡರೆ ಆಗುವುದಿಲ್ಲ. ಊರಿನೊಳಗೆ ಪೈಪ್‌ಲೈನ್ ಮಾಡಿ ನೀರನ್ನು ಕೊಟ್ಟರೆ ಮಾತ್ರ ಸರಿಯಾಗುತ್ತದೆ. ನಾನು ನಿಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ಕುಡಿಯುವ ನೀರಿನ ವ್ಯವಸ್ಥೆ ಸರಿಮಾಡಬೇಕಾದರೆ ದಯಮಾಡಿ ಬೋರ್ ಹಾಕುವುದರ ಜೊತೆಗೆ ಪೈಪ್‌ಲೈನ್, ಕೆ.ಇ.ಬಿ.ಯದು, ಅದು complete ಮಾಡಿ immediate ಆಗಿ ಕರೆಂಟ್ ಅನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಈಗ ಫೆಬ್ರವರಿ, ಮಾರ್ಚ್, ಏಪ್ರಿಲ್‌ನಲ್ಲಿ ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದ ಹೈದರಾಬಾದ್–ಕರ್ನಾಟಕದ ಭಾಗದಲ್ಲಿ ನೀರಿನ ತೊಂದರೆಯು ಹೇಳತೀರದಾಗಿದೆ. ಪ್ರತಿಯೊಂದು ಹಂತದೊಳಗೂ ನಮಗೆ ಕುಡಿಯುವ ನೀರಿನ ತೊಂದರೆ ಇದೆ. ಮಾನ್ಯ ಉಪಾಧ್ಯಕ್ಷರೆ, ನಿಮ್ಮ ಮುಖಾಂತರ ನಾನು ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ನಮಗೆ ಕನಿಷ್ಠ 1–1 ಕೋಟಿ ರೂಪಾಯಿಗಳನ್ನು ತೆಗೆದು ಇಡಬೇಕು. ಆ 1 ಕೋಟಿ ರೂಪಾಯಿಗಳು ಖಾಲಿಯಾದರೆ immediate ಆಗಿ ದುಡ್ಡನ್ನು ಭವಿಸುವಂತಹ ಕೆಲಸವನ್ನು ಮಾಡಬೇಕು. ಕನಿಷ್ಠ ಒಂದೊಂದು ಕ್ಷೇತ್ರಕ್ಕೆ 1–1 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕು. ಆ ಹಣವು ಖರ್ಚಾದರೆ immediate ಆಗಿ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸವನ್ನು ಮಾಡಬೇಕು. ಇವತ್ತು ಜಿಲ್ಲಾಧಿಕಾರಿಗಳು, 'ನಮ್ಮ ಹತ್ತಿರ ದುಡ್ಡಿಲ್ಲ, ನಾವು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ' ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ ನಾನು ನಿಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ದಯಮಾಡಿ ನೀವು 1–1 ಕೋಟಿ ರೂಪಾಯಿಗಳನ್ನು ಕೊಡಬೇಕು. ಮಾನ್ಯ ಸಚಿವರಾದ ಶ್ರೀ ರೇವುನಾಯಕ್ ಬೆಳಮಗಿಯವರು

ಮೇವಿನ ದುಡ್ಡನ್ನು ನಾವು ಈಗಾಗಲೇ ಕೊಟ್ಟಿದ್ದೇವೆಂದು ಹೇಳಿದರು. ಮಾನ್ಯ ಸಚಿವರೆ, ಇವತ್ತಿಗೂ ಒಂದೂವರೆಯಿಂದ ಎರಡೂವರೆ ಕೋಟಿ ರೂಪಾಯಿಗಳು ನಮ್ಮ ಜಿಲ್ಲೆಯೊಳಗೆ ಮೇವಿನ ಬಾಕಿ ಇದೆ. ಆಗಿ Total 8 ಕೋಟಿ ರೂಪಾಯಿಗಳನ್ನು ಕೊಡುವುದು ಬಾಕಿ ಇದೆ. ಆ ಹಣವನ್ನು ಇದುವರೆಗೂ ಕೊಟ್ಟಿರುವುದಿಲ್ಲ. ನೀವು ಎಲ್ಲಾ ಜಿಲ್ಲೆಗೂ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ನಮ್ಮಲ್ಲಿ ಆ ಹಣವು ಬಿಡುಗಡೆಯಾಗಿರುವುದಿಲ್ಲ. ಜಿಲ್ಲೆಯ ಎಲ್ಲಾ ಶಾಸಕರುಗಳು ಹೋಗಿ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ನಮ್ಮಲ್ಲಿ ಹಿಂದೆ ಮಾಡಿರುವಂತಹ ಕಾಮಗಾರಿಗೆ ಹಣವು ಬಿಡುಗಡೆಯಾಗಿರುವುದಿಲ್ಲ.

ಇನ್ನು ನಾವು ಯಾವ ರೀತಿ task-force ಮಾಡಿಕೊಂಡು ಕೆಲಸವನ್ನು ಮಾಡಬೇಕು? ಯಾವ ರೀತಿ ನಮ್ಮ ಗ್ರಾಮಕ್ಕೆ ನೀರು ಕೊಡುವಂಥ ಕೆಲಸವನ್ನು ಮಾಡಬೇಕು? ನಮಗೆ ಬಹಳಷ್ಟು ನೀರಿನ ತೊಂದರೆ ಇದೆ. ಇದರೊಂದಿಗೆ ಕರೆಂಟಿನ ಅಭಾವ. ವಿದ್ಯುತ್ ಅಭಾವವಂತೂ ನಮಗೆ ಹೇಳತೀರದ ಸಮಸ್ಯೆಯಾಗಿದೆ. ನಾವು ಪ್ರತಿಭಟನೆ ಮಾಡಲಿಕ್ಕೆ ನಮ್ಮ ಭಾಗದ ಜನರು ನೀವು ಬರಬೇಕೆಂದು ಹೇಳಿದಾಗ ನಮಗೆ ಅಲ್ಲಿಗೆ ಹೋಗಲಿಕ್ಕೆ ಆಗುವುದಿಲ್ಲ. ದಯಮಾಡಿ ವಿದ್ಯುತ್ ಅಭಾವದ ಸಮಸ್ಯೆಯನ್ನು ಸರಿಮಾಡಿ. ಅದರ ಜೊತೆಗೆ ನಿರಂತರ ಜ್ಯೋತಿ ಎಂದು ಏನು ಪ್ರಾರಂಭ ಮಾಡಿದಿರಿ ಅದಕ್ಕೆ ಕಾನೂನನ್ನು ಸಡಲೀಕರಣ ಮಾಡಿ. ಇವತ್ತು ನಮ್ಮಲ್ಲಿ ಎಲ್ಲಾ ಲೈನ್ಸ್ ಆಗಿದೆ, ಆದರೆ ಅದಕ್ಕೆ connections ಕೊಟ್ಟಿಲ್ಲ. ಏಕೆ ಕೊಟ್ಟಿಲ್ಲವೆಂದರೆ 6 ತಾಸು, 3 ಫೇಸ್ ಎಂದರೆ ಯಾರು ರೈತರು ಒಪ್ಪುತ್ತಿಲ್ಲ. 6 ತಾಸು ಎಂದರೆ ಒಂದು ಎಕರೆಗೂ ನೀರು ಹಾಯಿಸಿಕೊಳ್ಳಲು ಸಾಧ್ಯವಿಲ್ಲ. ಅದಕ್ಕೆ ನೀವು ನಿರಂತರ ಜ್ಯೋತಿ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಅದರ ಜೊತೆಗೆ ಬೋರ್‌ವೆಲ್ ಮತ್ತು ಪೈಪ್‌ಲೈನ್‌ಗೆ ವಿದ್ಯುತ್, ಟಿ.ಸಿ. ಕೊಡುವಂಥದ್ದು ಆಗಬೇಕು. ನಮ್ಮ ಭಾಗದೊಳಗೆ ಒಂದು transformer ಸುಟ್ಟರೆ ಅದನ್ನು ರಿಪೇರಿ ಮಾಡಿಸಲಿಕ್ಕೆ ಕನಿಷ್ಠ 15–20 ದಿವಸಗಳು ಬೇಕು. 15 ದಿವಸದವರೆಗೆ ಆ

ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಕರೆಂಟ್ ಇರುವ ಹಾಗಿಲ್ಲ. ಇದು ಹೇಗೆ ಸಾಧ್ಯತೆ ಆಗುತ್ತದೆ? ಅದನ್ನು ಕೇಳಿದರೆ Transformers repair centre ಸರಿಯಿಲ್ಲವೆಂದು ಹೇಳುತ್ತಾರೆ. ಈ ಬಗ್ಗೆ ಹತ್ತು ಬಾರಿ ನಮ್ಮ ಅಧಿಕಾರಿಗಳ, ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೆ ಇನ್ನೂ ಅದು ಸರಿಯಾಗುತ್ತಿಲ್ಲ. ಅದಕ್ಕೆ ನಮಗೆ spare transformer ಕೊಟ್ಟರೆ ಆ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗುತ್ತದೆ. ಈಗ ನಮ್ಮ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮಯ. ಪರೀಕ್ಷೆ ಸಮಯದಲ್ಲಿ ರಾತ್ರಿ ವೇಳೆ ಕರೆಂಟ್ ಹೋದರೆ ಯಾವ ರೀತಿ ನಮ್ಮ ವಿದ್ಯಾರ್ಥಿಗಳು ಓದಬೇಕು? ಯಾವ ರೀತಿ ವಿದ್ಯಾಭ್ಯಾಸ ಮಾಬೇಕು? ದಯಮಾಡಿ ಇವೆಲ್ಲಾ ಸಮಸ್ಯೆಗಳಿವೆ. ಹಾಗಾಗಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಮಾಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕುಡಿಯುವ ನೀರಿಗೂ ಅನುಕೂಲವಾಗುತ್ತದೆ. ದಯಮಾಡಿ ಈ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕು ಮತ್ತು ಪ್ರತಿಯೊಂದು ಕ್ಷೇತ್ರಕ್ಕೆ ಒಂದರಿಂದ ಒಂದೂವರೆ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಪೈಪ್‌ಲೈನ್ ಮತ್ತು ಬೋರ್ ಹಾಕಲಿಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ನರೇಂದ್ರ (ಹನೂರು): ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಈಗಾಗಲೇ ನಮ್ಮ ನಾಯಕರು ಹಾಗೂ ಹಲವು ಮಾನ್ಯ ಸದಸ್ಯರೆಲ್ಲಾ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ನಮ್ಮ ಚಾರಮರಾಜನಗರದ ಜಿಲ್ಲೆ ಕಳೆದ ಮೂರು ವರ್ಷಗಳಿಂದ ತೀವ್ರವಾದಂಥ ಬರಗಾಲವನ್ನು ಅನುಭವಿಸುತ್ತಿರುವುದು ತಮಗೆ ಗೊತ್ತಿದೆ. ಅದರಲ್ಲಿಯೂ ವಿಶೇಷವಾಗಿ ನಮ್ಮ ಹನೂರು ಕ್ಷೇತ್ರ ತೀವ್ರವಾದಂಥ ಬರವನ್ನು ಅನುಭವಿಸುತ್ತಿದೆ. ಭೌಗೋಳಿಕವಾಗಿ ನಮ್ಮಲ್ಲಿ ಸುಮಾರು 60% ಅರಣ್ಯ ಪ್ರದೇಶವಿದೆ. 42% ಭೂಪ್ರದೇಶವಿದೆ. ಇವತ್ತಿನದಿವಸ ಸಾವಿರ, ಸಾವಿರದ

ನೂರು ಅಡಿ ಆಳ ಕೊರೆದರೂ ಸಹ ನೀರು ಸಿಗುತ್ತಿಲ್ಲ. ಕೆಲವು ಕಡೆ ನೀರು ದೊರೆತರೂ ಹದಿನೈದು, ಇಪ್ಪತ್ತು, ಇಪ್ಪತ್ತೈದು ದಿವಸಗಳ ಕಾಲ ನೀರು ಬರುತ್ತದೆ, ನಂತರ ಅದು ಬತ್ತಿ ಹೋಗುತ್ತದೆ. ತದನಂತರ ನಾವು ಬೇರೆ water source ಹುಡುಕಿಕೊಂಡು ಹೋಗಬೇಕು. ಕೆಲವು ಕಡೆ ನಾಲ್ಕೈದು, ಆರು ಕಿ.ಮೀ. ದೂರದಲ್ಲಿ ನೀರಿನ ಪಾಯಿಂಟ್ ಅನ್ನು ಹುಡುಕಿ ಅಲ್ಲಿಂದ ಪೈಪ್‌ಲೈನ್ ಹುಡುಕಿ ಗ್ರಾಮಗಳಿಗೆ ನೀರು ತರುವಂಥ ಪ್ರಯತ್ನ ಆಗಿದೆ. ಊರಿಂದ ಕನಿಷ್ಠ ಎರಡು ಕಿ.ಮೀ. ದೂರದಲ್ಲಿ ಬೋರ್‌ವೆಲ್ ಹಾಕಿ ಅಲ್ಲಿಂದ ಪೈಪ್‌ಲೈನ್ ಮಾಡಿ ಪಂಪ್, ಮೋಟರ್ ಅಳವಡಿಸಿ ಮಾಡಬೇಕಾದರೆ ಕನಿಷ್ಠ 10–15 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ನಾವು ಇಷ್ಟು ಹಣ ಖರ್ಚು ಮಾಡಿ ಬೋರ್‌ವೆಲ್ ಕೊರೆಸಿದರೂ ಸಹ 15–20 ದಿವಸಗಳಲ್ಲಿ ಬೋರ್‌ವೆಲ್‌ನ ನೀರು ಬತ್ತಿ ಹೋಗುವಂಥ ಪರಿಸ್ಥಿತಿ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ 40 ದಿವಸ ಜಿಲ್ಲಾಡಳಿತದಲ್ಲಿ ಒಂದು ರೂಪಾಯಿ ಹಣವಿಲ್ಲ. ಎಲ್ಲಾ ಸದಸ್ಯರು ಹೇಳಿದಂತೆ ನಾವು ಗ್ರಾಮಗಳಿಗೆ ಹೋದಂಥ ಸಂದರ್ಭದಲ್ಲಿ ಹೆಂಗಸರು, ಮಕ್ಕಳು ಮುತ್ತಿಗೆ ಹಾಕುವಂಥ ಪರಿಸ್ಥಿತಿ ಆಗಿದೆ. ಶಾಸಕರೇ ನಿಮ್ಮನ್ನು ನಾವು ಚಿನ್ನ, ಬೆಳ್ಳಿ, ಊಟ ಕೇಳುವುದಿಲ್ಲ, ಕನಿಷ್ಠ ನೀರನ್ನಾದರೂ ಕೊಡಿಸುವಂಥ ಯೋಗ್ಯತೆ ನಿಮಗಿಲ್ಲವೇ ಎಂದು ಕೇಳಿದಾಗ ನಾವು ಇವತ್ತಿನ ದಿವಸ ತಲೆ ತಗ್ಗಿಸಿಕೊಂಡು ನಿಲ್ಲುವಂಥ ಪರಿಸ್ಥಿತಿ ಸರ್ಕಾರ ನಮಗೆ ತಂದೊಡ್ಡಿದೆ. ಜನವರಿಯಲ್ಲಿ ಸಂಕ್ರಾಂತಿ ಹಬ್ಬ ಆಯಿತು. ವಿಶೇಷವಾಗಿ ಹಳ್ಳಿಗಾಡಿನಲ್ಲಿ ಗೋಮಾತೆಯನ್ನು ಪೂಜೆ ಮಾಡುವಂಥವರು, ದನಕರುಗಳನ್ನು ಇಟ್ಟಿರತಕ್ಕಂಥವರು ಅವತ್ತಿನ ದಿವಸ ದನಕರುಗಳಿಗೆ ಸ್ನಾನವನ್ನು ಮಾಡಿಸಿ ಕೊಂಬುಗಳಿಗೆ ಅಲಂಕಾರ ಮಾಡಿ ವಿಶೇಷವಾಗಿ ಹಬ್ಬ ಆಚರಣೆ ಮಾಡುವಂಥ ಹಬ್ಬವದು. ಹಬ್ಬದ ದಿವಸ ನಾನು ಕೆಲವು ಗ್ರಾಮಗಳಿಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಸ್ವಾಮಿ ನೂರಾರು ವರ್ಷಗಳಿಂದ ಆಚರಣೆ ಮಾಡುವಂಥ ಪದ್ಧತಿಯನ್ನು ಈಗ ಆಚರಣೆ ಮಾಡಲಿಕ್ಕಾಗಲಿಲ್ಲ. ನಮ್ಮ ಗೋಮಾತೆಗೆ ಒಂದು ತೊಟ್ಟು ನೀರು ಕೂಡ ಮೈಮೇಲೆ ಹಾಕಲಿಕ್ಕೆ ಆಗಲಿಲ್ಲ. ಸ್ನಾನವನ್ನು ಮಾಡಿಸಲಿಕ್ಕೆ ಆಗಲಿಲ್ಲ ಎಂದು

ನೋವಿನಿಂದ ಹೇಳುವಂಥ ಸ್ಥಿತಿಯಿದೆ ಎಂದರೆ ನಾವು ಯಾವ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ? ನಮಗೆ ಕುಡಿಯಲಿಕ್ಕೆ, ಸ್ನಾನ ಮಾಡಲಿಕ್ಕೆ ನೀರು ಇಲ್ಲ. ಗೋವುಗಳಿಗೆ ಕುಡಿಯಲಿಕ್ಕೆ ನೀರು ಇಲ್ಲ, ಅದನ್ನು ತೊಳೆಯುವುದಕ್ಕೆ ವ್ಯವಸ್ಥೆ ಇಲ್ಲ. ಇಂಥ ಒಂದು ವ್ಯವಸ್ಥೆಯೊಳಗೆ ನಾವಿದ್ದೇವೆ ಎಂದು ಬಹಳ ಸಂಕಟವಾಗುತ್ತದೆ. ನಮ್ಮ ಹನೂರು ಕ್ಷೇತ್ರ . ಹಳ್ಳಿಗಾಡನ್ನು ಒಳಗೊಂಡಿರುವಂಥದ್ದು, ಸುಮಾರು ಹಳ್ಳಿಗಳೆಲ್ಲಾ ಕಾಡಂಚಿನಲ್ಲಿರುವಂಥದ್ದು. ನಮ್ಮ ಗ್ರಾಮಗಳಲ್ಲಿ ಕುರಿ, ಮೇಕೆ, ದನಕರುಗಳನ್ನು ಸಾಕುವಂಥದ್ದು ಮುಖ್ಯ ಕಸುಬು. ಇವತ್ತು ಕಾಡಿನಲ್ಲಿ ಆ ಪ್ರಾಣಿಗಳನ್ನು ಬಿಟ್ಟು ಮೇಯಿಸಬೇಕಾಗುತ್ತದೆ. ಅರಣ್ಯ ಇಲಾಖೆಯವರು ಕಾಡಿನೊಳಗೆ ಪ್ರಾಣಿಗಳನ್ನು ಮೇಯಿಸಬಾರದು ಎಂದು ಹೇಳುತ್ತಾರೆ. ಅವರು ಒಳಗೆ ಬಿಡುತ್ತಿಲ್ಲ. ಹೊರಗೆ ರೈತರು ಬೆಳೆ ಬೆಳೆದಿಲ್ಲ, ಮೇವಿಲ್ಲ. ಕಾವೇರಿ ಅಂಚಿನಲ್ಲಿ 15–20 ಗ್ರಾಮಗಳಿವೆ, ಕಾವೇರಿ ನೀರಿಗೆ ಕಾಡಿನೊಳಗೆ ಜಾನುವಾರುಗಳನ್ನು ಬಿಡುವಂಥದ್ದಾಗಿದೆ. ಆದರೆ ಅರಣ್ಯ ಇಲಾಖೆಯವರು ನೀವು ಅಲ್ಲಿಗೆ ಬರಬಾರದೆಂದು ಕಂಡಿಷನ್ ಹಾಕುವುದರಿಂದ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಕಾಡಿನ ಅಂಚಿನಲ್ಲಿ ನದಿ ಹತ್ತಿರ ದನಕರುಗಳಿಗೆ ಮೇಯಿಸಲಿಕ್ಕೆ ಆಗುತ್ತಿಲ್ಲ. ದಿನಕರುಗಳನ್ನು ಇಟ್ಟುಕೊಂಡು ನೀರು ಕುಡಿಸುವ ವ್ಯವಸ್ಥೆ ಇಲ್ಲ. ಇಂಥ ಒಂದು ಸಂದರ್ಭದಲ್ಲಿ ಸರ್ಕಾರದವರು ನಮ್ಮ ಸಂಕಷ್ಟವನ್ನು ಕೇಳಬೇಕಾಗುತ್ತದೆ. ಅರಣ್ಯ ಇಲಾಖೆಯವರಿಗೆ ಕೇಳಬೇಕಾಗುತ್ತದೆ. ಊರಿನಿಂದ 15–20 ಕಿ.ಮೀ. ಕಾಡಿನೊಳಗೆ ಹೋಗಿ ಅಲ್ಲೇ ಒಂದು ಗುಡಾರವನ್ನು ಹಾಕಿ ಅಲ್ಲೇ ಪ್ರಾಣಿಗಳನ್ನು ಮೇಯಿಸಿಕೊಂಡು ಅಲ್ಲೇ ಕಾಲ ಕಳೆಯುವಂಥ ಕೆಲಸವನ್ನು ಇವತ್ತಿನದಿವಸ ನಮ್ ರೈತರು ಮಾಡುತ್ತಿದ್ದಾರೆ. ಅದನ್ನು ಮಾಡದಿದ್ದರೆ ನಾವು ಜಾನುವಾರುಗಳನ್ನು ಸಾಕಲಿಕ್ಕೆ ಆಗುವುದಿಲ್ಲ. ಆದರೆ ಇವರು ಯಾವುದೋ ಒಂದು ಪ್ರದೇಶದಲ್ಲಿ ಒಂದು ಹುಲಿ ಇದೆ. ಯಾವುದೋ ಒಂದು ಪ್ರದೇಶದಲ್ಲಿ ಒಂದು ಚಿರತೆ ಇದೆ, ಅದನ್ನು ನಾವು ಸಂರಕ್ಷಣೆ ಮಾಡಬೇಕು, ನೀವು ಸಾವಿರಾರು ದನಕರುಗಳನ್ನು ಹೊರಗೆ ಕರೆದುಕೊಂಡು ಹೋಗಿ, ಕಾಡಿನೊಳಗೆ ಬರಬೇಡಿ ಎಂದರೆ ನಮ್ಮ ಪರಿಸ್ಥಿತಿ

ಏನಾಗಬೇಕು? ಆಡು ಕುರಿ ಧನಲಕ್ಷ್ಮಿ ಇದ್ದಂತೆ. ಅದಕ್ಕೆ ಭಗವಂತನೇ ಮೇವು ಕೊಡುತ್ತಾನೆಂದು ಮಾನ್ಯ ಪಶುಸಂಗೋಪನೆ ಸಚಿವರು ನಿನ್ನೆ ದಿವಸ ಇಲ್ಲಿ ಹೇಳುತ್ತಿದ್ದರು. ಆದರೆ ಆ ಭಗವಂತನೇ ಕೊಟ್ಟಿರುವ ಕಾಡಿಯಲ್ಲಿರುವಂಥ ಒಂದು ಮೇವನ್ನೂ ಸಹ ಸರ್ಕಾರದವರು, ಅರಣ್ಯ ಇಲಾಖೆಯವರು ಉಪಯೋಗಿಸಲಿಕ್ಕೆ ಬಿಡುತ್ತಿಲ್ಲವೆಂದರೆ ಇದರ ತೀವ್ರತೆಯನ್ನು ತಾವು ಅರಿತುಕೊಳ್ಳಬೇಕು. ಆದ್ದರಿಂದ ಸರ್ಕಾರಕ್ಕೆ ನನ್ನ ವಿನಂತಿ ಏನೆಂದರೆ ಈ ಒಂದು ಬರ ನೀಗುವ ತನಕ ನಮ್ಮ ಕನಕರುಗಳಿಗೆ ಕಾಡಿನಲ್ಲಿ ಮೇಯಿಸಲಿಕ್ಕೆ ಅವಕಾಶ ಕೊಡಬೇಕು. ಕಾವೇರಿ ನದಿ ತೀರದಲ್ಲಿ ಏನು ಗ್ರಾಮಗಳಿವೆ, ಆ ಗ್ರಾಮದಲ್ಲಿರುವಂಥವರು ಅರಣ್ಯದೊಳಗೆ ಹೋಗಿ ನದಿಯಲ್ಲಿ ನೀರು ಕುಡಿಸುವಂಥ ವ್ಯವಸ್ಥೆಗೆ ಯಾರು? ಅಡ್ಡಿ ಮಾಡಬಾರದು ಎಂದು ಮಾನ್ಯ ಸರ್ಕಾರದವರು ಹೇಳಬೇಕಾಗುತ್ತದೆ. ಇದರ ಜೊತೆಗೆ ವಿದ್ಯುತ್ ಸಮಸ್ಯೆ. ನಮ್ಮ ಮಿತ್ರರು ಸಾಕಷ್ಟು ಹೇಳಿದ್ದಾರೆ. ನಿರಂತರ ವಿದ್ಯುತ್ ಜ್ಯೋತಿ ಎಂದು ಮಾಡಿದರು, ವಿದ್ಯುತ್ತೇ ಇಲ್ಲ. ನಿರಂತರ ಎರಡನೇ ಪ್ರಶ್ನೆ. ಇವತ್ತು ನಮ್ಮ ಕಡೆ ಎರಡು ಗಂಟೆ ಮಾತ್ರ ವಿದ್ಯುತ್ ಕೊಡುತ್ತಿದ್ದಾರೆ. ತಂಗಡಗಿಯವರು 4–5 ಗಂಟೆ ಕೊಡುತ್ತಾರೆ ಎಂದು ಹೇಳುತ್ತಿದ್ದರು. ಅವರ ಕಡೆ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ನಮ್ಮ ಚಾಮರಾಜನಗರದ ಜಿಲ್ಲೆಯಲ್ಲಿ ಇವತ್ತು ಹಗಲು ಹೊತ್ತು 3 ಫೇಸ್ ಕೊಡುತ್ತಿರುವಂಥದ್ದು ಕೇವಲ 2 ಗಂಟೆಗೆ ಮಾತ್ರ ಕೊಡುತ್ತಿದ್ದಾರೆ. ರಾತ್ರಿ ಎರಡು ಫೇಸ್ ಕೊಡುತ್ತಿದ್ದಾರೆ. ಎರಡು ಗಂಟೆಯ ವಿದ್ಯುತ್‌ನಲ್ಲಿ ಯಾವ ರೀತಿ ನಾವು ಕುಡಿಯುವ ನೀರನ್ನು ಪೂರೈಸಲಿಕ್ಕೆ ಆಗುತ್ತದೆ? ಒಂದು ಮೋಟರ್‌ಗೆ 10–15 ಕಡೆ ಟ್ಯಾಂಕ್‌ಗಳನ್ನು ಕಟ್ಟಿರುತ್ತೇವೆ. ಆ ಟ್ಯಾಂಕ್‌ಗಳಿಗೆ ನೀರು ಶೇಖರಣೆ ಆಗುವುದಿಲ್ಲ. ಹಾಗಾಗಿ ನೀರು ಇರುವ ಕಡೆ ಬಳಸಲಿಕ್ಕೆ ಆಗುತ್ತಿಲ್ಲ. ನಿರಂತರ ವಿದ್ಯುತ್ ಯೋಜನೆ ಎಂದು ಹೇಳಿ ಇವತ್ತು ಊರಿಗೆ ಬೇರೆ ಲೈನ್, ತೋಟಗಳಿಗೆ ಬೇರೆ ಲೈನ್ ಎಂದು separate ಮಾಡಿಬಿಟ್ಟಿದ್ದಾರೆ. ನನ್ನ ಹನೂರು ಮತಕ್ಷೇತ್ರದಲ್ಲಿ ಸುಮಾರು 12000 ಕುಟುಂಬಗಳು ತೋಟಗಳಲ್ಲಿ ವಾಸಿಸುತ್ತಿದ್ದಾರೆ. ಈಗ ನಿರಂತರ ಜ್ಯೋತಿ ಎಂದು ಹೇಳಿ ಗ್ರಾಮಕ್ಕೆ ಮಾತ್ರ 3 ಫೇಸ್ ಕರೆಂಟ್

ಕೊಡುತ್ತಾರೆ, ಆದರೆ ತೋಟದ ಮನೆಗಳೇನಿವೆ ಅವರಿಗೆ ದಿನಕ್ಕೆ ಎರಡು ಗಂಟೆ ಸಮಯ ಹಗಲು ಹೊತ್ತು ಮಾತ್ರ ಕರೆಂಟ್ ನೋಡುತ್ತಾರೆ. ಸಾಯಂಕಾರ ವಿದ್ಯುತ್ ಇರುವುದಿಲ್ಲ. single phase current ಇವತ್ತೇನು ಗ್ರಾಮಗಳಿಗೆ ಕೊಡುತ್ತಾರೆ ಆ ತೋಟದಲ್ಲಿ ವಾಸಿಸುವವರಿಗೆ ಆ ಕರೆಂಟ್ ಸಹ ಕೊಡುತ್ತಿಲ್ಲ. ಇವತ್ತು ನನ್ನ ಕ್ಷೇತ್ರದಲ್ಲಿ ತೋಟಗಳಲ್ಲಿ ವಾಸಿಸುವ 12000 ಕುಟುಂಬಗಳಿಗೆ ಕಳ್ಳಕಾಕರ ಭಯ ಇದೆ. ಕಾಡುಪ್ರಾಣಿಗಳ ಭಯ ಇದೆ. ಅವರಲ್ಲಿ ಓದುತ್ತಿರುವ ಮಕ್ಕಳು ಇದ್ದಾರೆ. ಆ ತೋಟದಲ್ಲಿರುವ ಮಕ್ಕಳು ಯಾವ ರೀತಿಯಾಗಿ ಓದಬೇಕು? ಅಲ್ಲಿ ಯಾವ ರೀತಿ ಅಡಿಗೆ ಮಾಡಬೇಕು? ಅವರು ಯಾವ ರೀತಿಯಾಗಿ ಊಟ ಮಾಡಬೇಕು? ಯಾವ ರೀತಿಯಾಗಿ ಅವರು ಕಳ್ಳ ಕಾಕರಿಂದ ರಕ್ಷಣೆ ಮಾಡಬೇಕು? ಯಾವ ರೀತಿಯಾಗಿ ಅವರು ಕಾಡುಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳಬೇಕು? ದಯವಿಟ್ಟು ಇದರಿಂದ ತಪ್ಪಿಸಿಕೊಳ್ಳಲಿಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ತೋಟದಲ್ಲಿರುವುದಕ್ಕೆ ಕಷ್ಟವಾಗುತ್ತದೆ. ನೀವು ಗ್ರಾಮಕ್ಕೆ ನಿರಂತರ ಜ್ಯೋತಿ ಕೊಡಿ, ಸಂತೋಷ. ಈಗ ಕೊಡುತ್ತಿಲ್ಲ. ಮುಂದಿನ ದಿನಗಳಲ್ಲಿ ಕೊಡಿ, ಪ್ರತ್ಯೇಕ ಲೈನ್ ಮಾಡಿದ್ದೀರಿ. ಅದೇ ಸಮಯದಲ್ಲಿ ನೀವು ತೋಟದಲ್ಲಿ ವಾಸಿಸುವಂಥ ಕುಟುಂಬದವರಿಗೆ ಸಹ ವಿದ್ಯುತ್ ಕೊಡುವಂಥ ಕೆಲಸ ಆಗಬೇಕು. ಜೊತೆಗೆ ಇವತ್ತು ನೀರಿನ ಅಭಾವ ಎಷ್ಟರಮಟ್ಟಿಗೆ ಇದೆಯೆಂದರೆ ಕಾಡಿನಲ್ಲಿರುವಂಥ ಪ್ರಾಣಿಗಳು ಇವತ್ತು ನೀರಿಗೋಸ್ಕರ ಊರಿಗೆ ಬರುವಂಥ ಪರಿಸ್ಥಿತಿ ಬಂದಿದೆ.

ಮುಂಜಾನೆ ಸುಮಾರು 5–6 ಗಂಟೆ ಸಮಯದಲ್ಲಿ ನನ್ನ ಮತಕ್ಷೇತ್ರದಲ್ಲಿ ಒಬ್ಬ ವ್ಯಕ್ತಿ ನೀರು ತರುವುದಕ್ಕೆ ಹೋಗಿದ್ದಾಗ ಆನೆಯೊಂದು ಆತನಿಗೆ ಹಿಂದೆಯಿಂದ ಹೊಡೆದಿದ್ದರಿಂದ ಸುಮಾರು 15 ದಿವಸಗಳ ಹಿಂದೆ ಆತ ಸಾವನ್ನಪ್ಪಿದ್ದಾನೆ. ಕಾಡುಪ್ರಾಣಿಗಳು ನೀರಿನ ಅಭಾವದಿಂದ ಕಾಡಿನಿಂದ ಊರಿಗೆ ನುಗ್ಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ತಮಗೆ ಆಶ್ಚರ್ಯವಾಗಬಹುದು. ಕಾಡಿನಿಂದ ಆನೆಗಳು ನಮ್ಮ ಗ್ರಾಮಗಳಿಗೆ ಬಂದು ಒಂದು ಆನೆ ಬೋರ್‌ವೆಲ್ ಒತ್ತಿದರೆ ಸುಮಾರು ಹತ್ತಾರು ಆನೆಗಳು ನೀರು

ಕುಡಿಯುವ ದೃಶ್ಯ ಕಂಡುಬರುತ್ತದೆ. ಈ ರೀತಿ ಬೋರ್‌ವೆಲ್ handle ಗಳನ್ನು ಹೊಡೆಯುವಂತಹ ಸಮಯದಲ್ಲಿ ಮುರಿದು ಹಾಕಿ ಹೋಗುತ್ತವೆ. ಮೂರು ಮೂರು ದಿವಸಗಳಿಗೊಮ್ಮೆ ಕಾಡಂಚಿನ ಹಳ್ಳಿಗಳಲ್ಲಿ ಆ hand-pump ಅನ್ನು ರಿಪೇರಿ ಮಾಡುವುದೊಂದು ದೊಡ್ಡ ಕೆಲಸವಾಗಿದೆ. ನಾವು ಗ್ರಾಮಗಳಿಗೆ ಭೇಟಿ ನೀಡಿ ಕೇಳಿದಾಗ ಜನ ನೀರಿಲ್ಲವೆಂದು ಹೇಳುತ್ತಾರೆ. ನಾವು ಸಿಇಒ ಗಾಗಲಿ, ಡಿಸಿ ಯವರಿಗಾಗಲಿ ಇಂತಹ ಕಡೆ ಬೋರ್ ಹಾಕಬೇಕೆಂದು ಕೇಳಿದರೆ ಒಂದು ರೂಪಾಯಿ ಹಣವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾವಿ ಅಧಿವೇಶನದಲ್ಲಿ ತತ್‌ಕ್ಷಣದಲ್ಲಿ ಹಣ ಬಿಡುಗಡೆ ಮಾಡುತ್ತೇವೆ. ಯಾವುದೇ ಕಾರಣದಿಂದಲೂ ಕುಡಿಯುವ ನೀರಿಗೆ ಹಣವಿಲ್ಲವೆಂಬ ಕೊರತೆಯನ್ನುಂಟು ಮಾಡುವುದಿಲ್ಲವೆಂದು ಹೇಳಿದ್ದರು. ಆದರೆ ಇದುವರೆಗೆ ಒಂದು ರೂಪಾಯಿ ಕೂಡ ಹಣ ಬಿಡುಗಡೆಯಾಗಿಲ್ಲ. ತತ್‌ಕ್ಷಣದಲ್ಲಿ ಒಂದೊಂದು ಮತಕ್ಷೇತ್ರಕ್ಕೆ ಕನಿಷ್ಠ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ವ್ಯವಸ್ಥೆಯಾಗಬೇಕು. ಅಲ್ಲಿರುವ conditions ತೆಗೆದು ಹಾಕಬೇಕು. ಆ conditions ಇದ್ದರೆ ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ. ಕೇವಲ deepening ಗೆ ಮಾತ್ರ ಅವಕಾಶವಿದೆ, ಹೊಸ ಬೋರ್‌ವೆಲ್ ಕೊರೆಯುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತಾರೆ. ನಾವು ಈಗಾಗಲೇ 700–800 ಅಡಿಗಳನ್ನು ಕೊರೆದಿರುತ್ತೇವೆ. ಮತ್ತೆ ಕೆಳಗಡೆ ಕೊರೆದರೆ ಪ್ರಯೋಜನವಾಗುವುದಿಲ್ಲ. ಹೊಸsource ಹುಡುಕಬೇಕು. ಬೇರೆ ಕಡೆಯೇ ಕೊರೆಯಬೇಕು. ಬೇರೆ ಕಡೆ ಬಾವಿಯನ್ನು ಕೊರೆಯಲಿಲ್ಲವೆಂದರೆ ನೀರು ಸಿಗುವುದಿಲ್ಲ. ಇವರ conditions ಏನೆಂದರೆ ನೀವು deepening ಮಾಡಿ, ಇಲ್ಲವಾದರೆ ಮೋಟರ್ ಪಂಪ್ ರಿಪೇರಿ ಇದ್ದರೆ ಮಾಡುತ್ತೇವೆ. ಪೈಪ್‌ಲೈನ್ ಮಾಡುತ್ತೇವೆ ಅಂತಹವುಗಳಿಗೆ ಅವಕಾಶ ಕೊಡುತ್ತೇವೆಂದು ಹೇಳುತ್ತಾರೆ. ನೀರೇ ಇಲ್ಲದೆ ಬಾವಿಯನ್ನೇ ಕೊರೆಯದಿದ್ದ ಮೇಲೆ ಪೈಪ್‌ಲೈನ್ ಮಾಡುವ ಅವಶ್ಯಕತೆ ಏನಿದೆ? ದಯಮಾಡಿ ಆ ಷರತ್ತುಗಳನ್ನು ತೆಗೆದು ಹಾಕಿ. ನಮಗೆ ನೀರು ಬೇಕು. ಎಲ್ಲಿ ನೀರು ಸಿಗುತ್ತದೆ. ಎಲ್ಲಿ water source ಸಿಗುತ್ತದೆ ಅಲ್ಲಿ ಹೊಸದಾಗಿ ಬಾವಿಗಳನ್ನು ಕೊರೆಸುವುದು, ಜನರಿಗೆ

ನೀರು ಕೊಡಿಸುವುದು ಇಂತಹ ಏನು ಕೆಲಸಗಳನ್ನು ಮಾಡಬೇಕೋ ಅದನ್ನೆಲ್ಲಾ ಮಾಡಿ ಜನರಿಗೆ ನೀರನ್ನು ಕೊಡಿಸುವ ವ್ಯವಸ್ಥೆ ಮಾಡಿ ಎಂದು ಸರ್ಕಾರದವರು ಹೇಳಬೇಕೆ ಹೊರತು ಅದನ್ನು ಬಿಟ್ಟು ನೀವು ಬೋರ್ ಹಾಕಬಾರದು re-bore ಮಾಡಬೇಕು, deepening ಮಾಡಬೇಕು, ನೀವು ಮೋಟರ್ ಮಾತ್ರ ರಿಪೇರಿ ಮಾಡಿಸಬೇಕು ಇವೆಲ್ಲಾ ಷರತ್ತುಗಳನ್ನು ತೆಗೆದುಹಾಕಿ ಎಲ್ಲಿ ನೀರಿಲ್ಲ ಅಲ್ಲಿ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ನೀರನ್ನು ಕೊಡುವಂತಹ ಕೆಲಸ ಮಾಡಿ ಎಂಬ ಆದೇಶವನ್ನು ಅಧಿಕಾರಿಗಳಿಗೆ ಕೊಡಬೇಕು. ಎಲ್ಲಾ ಮಾನ್ಯ ಸದಸ್ಯರು ಹೇಳಿದರು, ಅಧಿಕಾರಿಗಳು ಯಾವ ಮಟ್ಟಕ್ಕೆ ಇದ್ದಾರೆಂದರೆ ಜಿಲ್ಲಾ ಪಂಚಾಯಿತಿಯ re-AEE ಆಗಲಿ, JE ಯವರಾಗಲಿ, EO ಆಗಲಿ, ತಹೀಲ್ದಾರ್‌ರವರಾಗಲಿ ಯಾರೂ ಕೂಡ ನೀರಿನ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಮಾನ್ಯ ಶಾಸಕರು ಮಾತ್ರ ಜನರ ಹಿಂಸೆಯನ್ನು ತಡೆಯಲಾರದೆ ತಲೆಕೆಡಿಸಿಕೊಳ್ಳಬೇಕೇ ಹೊರತು ಯಾವ ಅಧಿಕಾರಿಗಳೂ ತಲೆಕೆಡಿಸಿಕೊಳ್ಳುತ್ತಿಲ್ಲ. ಅಧಿಕಾರಿಗಳು ನಿರ್ಲಕ್ಷ್ಯ ಮನೋಭಾವನೆಯನ್ನು ತಳೆದಿದ್ದಾರೆ. ಸರ್ಕಾರ ಅವರುಗಳನ್ನು ತರಾಟೆಗೆ ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಯದರ್ಶಿಯವರು ಗ್ರಾಮ ಪಂಚಾಯಿತಿಗಳಲ್ಲಿರುವುದಿಲ್ಲ. AEE ಅಥವಾ JE ಯವರೂ ಕೂಡ ಇರುವುದಿಲ್ಲ. ಕುಡಿಯುವ ನೀರಿಲ್ಲವೆಂದು ಯಾರಾದರೂ ಹೋಗಿ ಇಂಜಿನಿಯರ್‌ಗಳನ್ನು ಕೇಳಿದರೆ, 'ಆಯಿತು, ಬಂದು ನೋಡುತ್ತೇವೆ, ರಿಪೇರಿ ಮಾಡುತ್ತೇವೆ' ಎಂಬ ಮಾತು ಅಧಿಕಾರಿಗಳ ಬಾಯಿಯಿಂದ ಬರುವುದೇ ಇಲ್ಲ. ಅಧಿಕಾರಿಗಳು ಈ ರೀತಿ ದಿವ್ಯ ನಿರ್ಲಕ್ಷ್ಯದಿಂದ ಮಾತನಾಡುತ್ತಿದ್ದಾರೆಯೇ ಹೊರತು ನಮ್ಮದೇ ಆದ ಜವಾಬ್ದಾರಿಯಿದೆ ಶಾಸಕರುಗಳಿಗಿರುವಷ್ಟೇ ಜವಾಬ್ದಾರಿ ತಮಗೂ ಇದೇ ಎಂಬ ಮಾತನ್ನು ಯಾವ ಅಧಿಕಾರಿಗಳೂ ಕೂಡ ಹೇಳುತ್ತಿಲ್ಲ. ಆದುದರಿಂದ ಅಧಿಕಾರಿಗಳಿಗೆ ಇವತ್ತಿನ ದಿವಸ ಬಿಸಿ ಮುಟ್ಟಿಸಬೇಕಾಗಿದೆ. ಅವರುಗಳು ತಾಲ್ಲೂಕು headquarters ನಲ್ಲಿದ್ದು ಎಲ್ಲೆಲ್ಲಿ ನೀರಿಗೆ ತೊಂದರೆಯಿದೆಯೋ ಅಲ್ಲೆಲ್ಲಾ ಹೋಗಿ ಸಮಸ್ಯೆಯನ್ನು ನಿವಾರಣೆ ಮಾಡುವಂತಹ ಕೆಲಸವನ್ನು

ಮಾಡಬೇಕೆಂಬ ಆದೇಶವನ್ನು ಸರ್ಕಾರ ಕೊಡಬೇಕು. ಎಲ್ಲಾ ಮಾನ್ಯ ಸದಸ್ಯರು ಹೇಳಿದ ಹಾಗೆ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ ಎರಡು ಕೋಟಿ ರೂಪಾಯಿಗಳನ್ನು ತತ್‌ಕ್ಷಣದಲ್ಲಿ ಮಂಜೂರು ಮಾಡಬೇಕು ಮತ್ತು ಮುನ್ನೂರು ದಿನಗಳಲ್ಲಿ ಆ ಹಣ ಮುಗಿಯುತ್ತಿದ್ದಂತೆ ಹಣವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಏಕೆಂದರೆ ಇದು ಕೇವಲ ಹಣದ ಪ್ರಶ್ನೆಯಲ್ಲ., ಇದು ಕುಡಿಯುವ ನೀರಿನ ಪ್ರಶ್ನೆ. ಜನರ ಜೀವನದ ಪ್ರಶ್ನೆ, ಆದುದರಿಂದ ಬೇರೆ ಯಾವುದೇ ಯೋಜನೆಗಳಿದ್ದರೂ ಸಹ ಅದನ್ನು ಸರ್ಕಾರ ಕೈಬಿಟ್ಟು ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹಳ್ಳಿಗಾಡಿನ ಜನರ ರಕ್ಷಣೆಗೆ ಸರ್ಕಾರ ಬರಬೇಕೆಂದು ತಮ್ಮ ಮೂಲಕ ವಿನಂತಿಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಉಪಾಧ್ಯಕ್ಷರೆ, ಇವತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸದನದಲ್ಲಿ ಸುದೀರ್ಘವಾಗಿ ಚರ್ಚೆಯಾಗುತ್ತಿದೆ ಅದರ ಜೊತೆ ಜೊತೆಗೆ ವಿದ್ಯುತ್ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆಗೆ ಪೂರಕವಾಗಿ ವಿದ್ಯುತ್‌ನಲ್ಲಾಗುವ ಅವ್ಯವಸ್ಥೆಯಿಂದ ಅತಿ ಹೆಚ್ಚು ಕಡೆ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ. ನಮ್ಮ ಭಾಗ ನೀರಾವರಿ ಪ್ರದೇಶವಾಗಿದ್ದು, ಅಲ್ಲಿ ನೀರಿದ್ದರೂ ಕೂಡ ನಾವು ಜನರಿಗೆ ನೀರನ್ನು ಏಕೆ ಕೊಡುವುದಕ್ಕಾಗುತ್ತಿಲ್ಲವೆಂದರೆ ವಿದ್ಯುತ್ತಿನ ಸಮಸ್ಯೆಯಿಂದ. ಇವತ್ತು ವಿದ್ಯುತ್ ಹೇಗಾಗಿದೆಯೆಂದರೆ ಯಾವಾಗ ವಿದ್ಯುತ್‌ನ್ನು ಕೊಡುತ್ತಾರೆ, ಯಾವಾಗ ತೆಗೆಯುತ್ತಾರೆಂದು ಯಾವ ಅಧಿಕಾರಿಗಳನ್ನು ಕೇಳಿದರೂ ಗೊತ್ತಿಲ್ಲ. ನಾವು JE ಯಿಂದ MD ವರೆಗೆ ಮಾತನಾಡಿದರೂ ಕೂಡ ಯಾರು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ನಾನೇ ಸ್ವತಃ ಹೋಗಿ 220 ಕೆ.ವಿ. ಸ್ಟೇಷನ್‌ನಲ್ಲಿ ಕುಳಿತು ನೋಡಿದ್ದೇನೆ. ಲೈನ್ ತೆಗೆಯಿರಿ ಎಂದುphone ಗಳ ಮೂಲಕ ಆದೇಶವನ್ನು ಮಾಡುತ್ತಾರೆ. ಅವರು ಆದೇಶ ಮಾಡಿದ ತಕ್ಷಣ ಲೈನ್ ತೆಗೆಯಬೇಕು, ಅವರು ಹಾಕಿ ಎಂದ ತಕ್ಷಣ ಹಾಕಬೇಕು. ಒಂದು ದಿವಸಕ್ಕೆ ಸುಮಾರು 8–10 ಬಾರಿ ಆದೇಶಗಳನ್ನು ಕೊಡುತ್ತಾರೆ. ಲೋಡ್

ಜಾಸ್ತಿಯಾಯಿತು ತೆಗೆಯಿರಿ ಎಂದು ಹೇಳುತ್ತಾರೆ. ಅವರು ತೆಗೆಯಲಿಲ್ಲವೆಂದರೆ ಅವರೇ ಅಲ್ಲಿ ತೆಗೆಯುತ್ತಾರೆ. ಬೆಂಗಳೂರಿನಲ್ಲಿ ಕುಳಿತು ಅವರೇ operate ಮಾಡುತ್ತಾರೆ. ಈ ರೀತಿ ಮಾಡುವುದರಿಂದ ವಿದ್ಯುತ್ ಯಾವಾಗ ಬರುತ್ತದೆ ಯಾವಾಗ ಹೋಗುತ್ತದೆಂದು ಯಾರಿಗೂ ಗೊತ್ತಾಗುವುದಿಲ್ಲ. ಹಾಗಾಗಿ ವಿದ್ಯುತ್ ಸಮಸ್ಯೆಯಿಂದಾಗಿ ಅತಿ ಹೆಚ್ಚು ಕಡೆ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಕುಡಿಯುವ ನೀರಿನ ಅಭಾವವಿರುವ ಕಡೆ ಬೇರೆ ವಿಷಯ, ಆದರೆ ನಮ್ಮ ಭಾಗಗಳಲ್ಲಿ ವಿದ್ಯುತ್ ಸಮಸ್ಯೆಯಿಂದ ನೀರಿದ್ದು ಕುಡಿಯುವುದಕ್ಕೆ ಕೊಡಲು ಆಗುತ್ತಿಲ್ಲ. ಈಗ ನಾನೊಂದು ಆದೇಶವನ್ನು ತರಿಸಿಕೊಂಡೆ. Three phase ವಿದ್ಯುತ್ ಅನ್ನು ಬೆಳಿಗ್ಗೆ ಕೊಡುವುದು ಕೇವಲ ಮೂರು ಗಂಟೆಗಳು. ಆ ಮೂರು ತಾಸಿನಲ್ಲಿ 20 ಬಾರಿ ವಿದ್ಯುತ್ ತೆಗೆಯುತ್ತಾರೆ. ಹಾಗಾದರೆ ನಾವು ನೀರನ್ನು ಯಾವಾಗ ಕೊಡಬೇಕು? ರಾತ್ರಿ ವೇಳೆ ಒಂದು ತಾಸು ಹಾಗೂ ಹಗಲು ವೇಳೆ ಮೂರು ತಾಸು ವಿದ್ಯುತ್ ಕೊಡುತ್ತಾರೆ. ಈ ರೀತಿ ಮೂರು ಗಂಟೆಗಳ ಕಾಲ ಮಾತ್ರ ವಿದ್ಯುತ್ ಕೊಟ್ಟರೆ ಕುಡಿಯುವ ನೀರನ್ನು ಹೇಗೆ ಕೊಡಬೇಕು? ರೈತರು ಬೆಳೆಯನ್ನು ಹೇಗೆ ಬೆಳೆಯಬೇಕು? ಮಕ್ಕಳ ಗತಿಯೇನು? ಇದು exam ಸಮಯವಾಗಿರುವುದರಿಂದ ಪ್ರತಿಯೊಂದು ಊರಿನಿಂದ ರಾತ್ರಿ ವಿದ್ಯಾರ್ಥಿಗಳು ನನಗೆ phone ಮಾಡಿ ವಿದ್ಯುತ್ ತೆಗೆದಿದ್ದಾರೆ ಓದುವುದಕ್ಕೆ ವಿದ್ಯುತ್ ಇಲ್ಲ, ನೀವೇನು ಮಾಡುತ್ತೀರಿ? ನಿಮ್ಮನ್ನು ಆರಿಸಿ ಕಳಹಿಸಿ ಜನ ಮೂರ್ಖರಾಗಿದ್ದಾರೆ ಎಂಬ ಭಾಷೆಯನ್ನು ಬಳಸುತ್ತಾರೆ. ಜನ ನಮಗೆ ರಾತ್ರಿ ಮಲಗುವುದಕ್ಕೂ ಬಿಡುವುದಿಲ್ಲ. ಈ ಪರಿಸ್ಥಿತಿಯಾದರೆ ವಿದ್ಯುತ್ ಸಮಸ್ಯೆ ಬಗ್ಗೆ ಯಾರನ್ನು ಕೇಳಬೇಕೆಂದು ನಮಗೆ ತಿಳಿಯುತ್ತಿಲ್ಲ. ಎಂ.ಡಿ. ಯಿಂದ ಕೆಳಗಿನ ಯಾವ ಅಧಿಕಾರಿಗಳನ್ನು ಕೇಳಿದರೂ ಯಾರ ಬಳಿಯೂ ಉತ್ತರವಿಲ್ಲ. ವಿದ್ಯುತ್ ತೆಗೆಯುವುದು ಹಾಕುವುದು. ಏಕೆಂದು ಕೇಳಿದರೆ wind production ಹೆಚ್ಚಾದ ಕೂಡಲೇ ಚಾಲೋ ಮಾಡು ಎಂದು ಹೇಳುತ್ತಾರೆ. Wind production ಕಡಿಮೆಯಾದ ತಕ್ಷಣ ತೆಗೆಯಿರಿ ಎಂದು ಹೇಳುತ್ತಾರೆ. 1000 ಮೆಗಾವ್ಯಾಟ್ ವಿದ್ಯುತ್ ಇವರು wind energy ಮೇಲೆ

ಅವಲಂಬನೆಯಾಗಿದ್ದಾರೆ. Wind ಯಾರ ಕೈಯಲ್ಲಿದೆ. Wind ಬಂದ ತಕ್ಷಣ ಹಾಕಬೇಕು wind ಹೋದ ತಕ್ಷಣ ತೆಗೆಯಬೇಕು. ಈ ರೀತಿ ಅಧಿಕಾರಿಗಳು ಕುಳಿತು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಜನ ಹೋಗಿ ಗಲಾಟೆ ಮಾಡುತ್ತಾರೆ. Man-handle ಮಾಡುತ್ತಾರೆ. ನಮ್ಮನ್ನು ಕೂಡ ಇವತ್ತು manhandle ಮಾಡುವ ಮಟ್ಟಕ್ಕೆ ಅವರು ಹೋಗಿದ್ದಾರೆ. ಅತಿ ಹೆಚ್ಚು ಕಿರಿಕಿರಿ ಇರುವುದು ವಿದ್ಯುತ್‌ನಲ್ಲಿ. ಸ್ವಲ್ಪ ದಿನ ಚೆನ್ನಾಗಿ ನಡೆಯಿತು, ಈಗ ಮತ್ತೆ ನಿಂತಿದೆ. ಕಳೆದ 10 ದಿನಗಳಿಂದ ವಿದ್ಯುತ್ ಸಮಸ್ಯೆ ತುಂಬಾ ಆಗಿದೆ. ಯಾವಾಗ ಬರುತ್ತದೆ ಯಾವಾಗ ಹೋಗುತ್ತದೆಂದು ಯಾರಿಗೂ ಗೊತ್ತಿಲ್ಲ. ಒಂದು transformer ಸುಟ್ಟರೆ ಅದನ್ನು replace ಮಾಡುವುದಕ್ಕೆ ಒಂದು ತಿಂಗಳು ಅಥವಾ ಎರಡು ತಿಂಗಳು ಕಾಲಾವಕಾಶ ತೆಗೆದುಕೊಂಡರೆ ಹೇಗೆ ಕೆಲಸ ಮಾಡುವುದು? ಇವರೇ ಹೋಗಿ ಬಿಚ್ಚಿಟ್ಟಿರುವ transformer ತಂದು ರಿಪೇರಿಗೆ ಕೊಡಬೇಕು, ಸರಿಯಾದ ನಂತರ ಅದನ್ನೇ ವಾಪಸ್ಸು ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. transformer ಸುಟ್ಟರೆ ಇವರ ಬಳಿ ಬೇರೆ alternative transformers ವ್ಯವಸ್ಥೆ ಇಲ್ಲ. ಸುಟ್ಟಿರುವ transformer ರೈತರೇ ಬಿಚ್ಚಿಕೊಂಡು ಬರುತ್ತಾರೆ. ಇವರೇ ಹೋಗಿ ಬಿಚ್ಚಿಕೊಂಡು ಬಂದರೆ ನಾಲ್ಕು ತಿಂಗಳುಗಳಾಗುತ್ತವೆ. ರಿಪೇರಿ ಸೆಂಟರ್‌ಗೆ ಕೊಟ್ಟು ರಿಪೇರಿಯಾದ ನಂತರ ರೈತರೇ ತೆಗೆದುಕೊಂಡು ಅಳವಡಿಸಿಕೊಂಡರೂ ಒಂದೊಂದು ತಿಂಗಳುಗಳವರೆಗೆ ಸಮಯ ಹಿಡಿಯುತ್ತದೆ. ಇವರ ಬಳಿ alterntive transformers ಇಲ್ಲವೆಂದರೆ ಒಂದು ತಿಂಗಳು, 15 ದಿವಸಗಳವರೆಗೆ ಕುಡಿಯುವ ನೀರು ಕೊಡುವ ಹಾಗಿಲ್ಲ. ಈ ರೀತಿಯಾದ ಅವ್ಯವಸ್ಥೆಯಿಂದ ಕುಡಿಯುವ ನೀರಿಗೆ ಅತಿ ಹೆಚ್ಚಿನ ತೊಂದರೆಯಾಗುತ್ತಿದೆ. ಇದನ್ನು ಸರಿಪಡಿಸದಿದ್ದರೆ ನೀರನ್ನು ಕೊಡುವುದಕ್ಕಾಗುವುದಿಲ್ಲ. ವಿದ್ಯುತ್ ಇಲ್ಲವೆಂದರೆ ಏನು alternative ಇದೆ? ಪಂಚಾಯಿತಿಗಳಲ್ಲಿ generator ಅನ್ನು ಚಾಲೂ ಮಾಡಿಕೊಂಡು ನೀರನ್ನು ಕೊಡುವುದಕ್ಕಾಗುತ್ತದೆಯೇ? ಯಾವ ಪಂಚಾಯಿತಿಗಳಲ್ಲೂ ಆ ವ್ಯವಸ್ಥೆಯಿಲ್ಲ.

ವಿದ್ಯುತ್ ಇದ್ದರೆ ಕೊಡುತ್ತಾರೆ. ಇಲ್ಲವಾದರೆ ವಿದ್ಯುತ್ ಇಲ್ಲ ಅದಕ್ಕೆ ನೀರಿಲ್ಲವೆಂದು ಹೇಳುತ್ತಾರೆ.

ಶೀಘ್ರದಲ್ಲೇ ಮಕ್ಕಳ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಮಕ್ಕಳ ಪರಿಸ್ಥಿತಿಯಂತೂ ದೇವರೇ ಕಾಪಾಡಬೇಕು. ಮಕ್ಕಳ ಪಾಲಕರು ದೂರವಾಣಿ ಮಾಡುತ್ತಲೇ ಇರುತ್ತಾರೆ. ಇದು ಬಹಳ ಹಿಂಸೆಯಾಗುತ್ತದೆ. ಇದನ್ನು ಮೊದಲು ಸರಿಪಡಿಸಬೇಕು. Task-force ಗೆ ದುಡ್ಡು ಕೊಡುತ್ತೀರಿ. ದುಡ್ಡು ಕೊಟ್ಟಮೇಲೆ ಅವರಿಗೆ ಹಣ ಬಿಡುಗಡೆ ಮಾಡದೇ ಹೋದರೆ ಅದರಿಂದ ಏನು ಉಪಯೋಗ? ಕುಡಿಯುವ ನೀರಿಗೆ ತೊಂದರೆಯಿಲ್ಲ, ಬೇಕಾದಷ್ಟು ಹಣವನ್ನು ಕೊಡುತ್ತೇವೆಂದು ಹೇಳುತ್ತೀರಿ. ನಾವು ಹೋಗಿ ಅದೇ ರೀತಿ ಹೇಳುತ್ತೇವೆ. ಕುಡಿಯುವ ನೀರಿಗೆ ತೊಂದರೆಯಿದ್ದರೆ ಮೀಟಿಂಗ್ ಮಾಡೋಣ. ಈ ಸಂಬಂಧವಾಗಿ ಕಳೆದ ವಾರ ಒಂದು ಮೀಟಿಂಗ್ ಮಾಡಿ ಅಲ್ಲಿ ಏನು ಸಮಸ್ಯೆ ಇದೆ ಎಂಬುದನ್ನು ಪಟ್ಟಿ ಮಾಡಿದ್ದೇವೆ. ಆ ಪಟ್ಟಿ ಜಿಲ್ಲಾಧಿಕಾರಿಗಳ ಹತ್ತಿರ ಹೋದ ಕೂಡಲೇ ಅವರು Task-force ನಿಂದ ದುಡ್ಡು ಬಂದಿಲ್ಲ, ಸರ್ಕಾರಕ್ಕೆ ಬರೆದಿದ್ದೇವೆ, ಬಂದ ಮೇಲೆ ನೋಡೋಣವೆಂದು ಹೇಳುತ್ತಾರೆ. ನಿನ್ನೆಯಷ್ಟೇ 30 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ. ಆದರೆ ಆ ಹಣಕ್ಕೆ ನಿಬಂಧನೆಗಳನ್ನು ಹಾಕಿದ್ದೀರಿ. ಆ ಹಣದಲ್ಲಿ ಬೋರ್ ಕೊರೆಯುವ ಹಾಗಿಲ್ಲ. ಪೈಪ್‌ಲೈನ್ ಹಾಕುವ ಹಾಗಿಲ್ಲ. ಆ ದುಡ್ಡನ್ನು transport ಮಾಡುವುದಕ್ಕೆ ಹಾಗೂ ನೀರಿಗೆ ಮಾತ್ರ ಉಪಯೋಗಿಸಬೇಕು. ಬೇರೆ ಯಾವುದಕ್ಕೂ ಆ ದುಡ್ಡನ್ನು ಬಳಸಬಾರದು. ಆಗ ಅದು ಖರ್ಚಾಗುವುದಿಲ್ಲ. ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಹೋಗುತ್ತೀರಿ. ಎರಡು ಅಥವಾ ಮೂರು ಲಕ್ಷ ರೂ. ಗಳನ್ನು ಖರ್ಚು ಮಾಡಿ ಯಾವುದೋ ಕೆರೆಯಿಂದ ಪೈಪ್‌ಲೈನ್ ಹಾಕಿ ನೀರು ಕೊಟ್ಟರೆ, ಆಗ ನೀರು ಸಿಗುತ್ತದೆ. ಬೋರ್‌ವೆಲ್ ಹಾಕುವುದಕ್ಕೂ ಕೊಡುವುದಿಲ್ಲ, ಪೈಪ್‌ಲೈನ್ ಹಾಕುವುದಕ್ಕೂ ಕೊಡುವುದಿಲ್ಲ. ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ಅದು ದೊಡ್ಡ ಹಿಂಸೆ ಆಗುತ್ತದೆ. ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಯಾರೋ ಒಬ್ಬರ ಮನೆ ಹತ್ತಿರ ಹೋದರೆ

ಇನ್ನೊಬ್ಬರು ಜಗಳ ತೆಗೆಯುತ್ತಾರೆ. ಅಲ್ಲಿ ಕೊಡುತ್ತಾರೆ ಇಲ್ಲಿ ಕೊಡುವುದಿಲ್ಲವೆಂದು ಹೇಳುತ್ತಾರೆ. ಟ್ರಾನ್ಸ್‌ಪೋರ್ಟ್ avoid ಮಾಡುವುದಕ್ಕೆ Task-force ಅವರು ಸ್ಥಳೀಯವಾಗಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮಗೆ ಅಧಿಕಾರ ಕೊಡಬೇಕು. ನೀವು ಎಲ್ಲಿಯೋ ಕುಳಿತು ಇಂತಹುದಕ್ಕೆ ಬಳಸಬೇಕೆಂದು ನಿಯಮಗಳನ್ನು ಮಾಡಿ, ಹಣ ಕೊಟ್ಟರೆ ಅದನ್ನು ಯಾವಾಗ ಖರ್ಚು ಮಾಡುವುದು. ಅಲ್ಲಿ ಮೋಟರ್, ಬೋರ್, ಪೈಪ್ ಹಾಕುವುದಕ್ಕೆ ನಮಗೆ ಬಿಡಬೇಕು. ಒಟ್ಟಿನಲ್ಲಿ ಅಲ್ಲಿನ ಜನರಿಗೆ ನೀರನ್ನು ಕೊಡಬೇಕು. ಒಂದೊಂದು ಕಡೆ ಒಂದೊಂದು ರೀತಿಯ ಸಮಸ್ಯೆ ಇರುತ್ತದೆ. ಒಂದು ಕಡೆ ಬೋರ್ ಸಮಸ್ಯೆ, ಒಂದು ಕಡೆ ಪೈಪ್‌ಲೈನ್ ಹಾಕಬೇಕಾಗಿರುತ್ತದೆ. ಒಂದು ಕಡೆ ಮೋಟರ್ ಸುಟ್ಟು ಹೋಗಿರುತ್ತದೆ, ಒಂದು ಕಡೆ ಮೋಟರ್ ಖರೀದಿ ಮಾಡುವುದಿರುತ್ತದೆ ಇವೆಲ್ಲವನ್ನು ಮಾಡಬಾರದು ಎಂದರೆ, ಕುಡಿಯುವ ನೀರನ್ನು ಕೊಡುವುದು ಹೇಗೆ? ಈ ನಿಯಮಗಳನ್ನು ಹಾಕದೇ ನೀವು ದುಡ್ಡನ್ನು ರಿಲೀಸ್ ಮಾಡಿದರೆ ಆ ಕ್ಷೇತ್ರದಲ್ಲಿ ಏನು ಅವಶ್ಯಕತೆ ಇರುತ್ತದೆಯೋ, ಅದನ್ನು ನಾವು ಮಾಡುತ್ತೇವೆ. ಅಷ್ಟು ಮಟ್ಟಿಗೆ ಗೊತ್ತಾಗುವುದಿಲ್ಲವೇ ನಮಗೆ? ಎಲ್ಲಿ ಪೈಪ್‌ಲೈನ್ ಹಾಕಬೇಕು, ಮೋಟರು ಹಾಕಬೇಕು, ಟ್ರಾನ್ಸ್‌ಪೋರ್ಟ್ ಮಾಡಬೇಕು ಎನ್ನುವುದನ್ನು ನಾವು ಮಾಡುತ್ತೇವೆ. ಇಲ್ಲಿಯೇ ಕುಳಿತು ಬಿಡುಗಡೆಯಾಗಿರುವ ಹಣಕ್ಕೆ ನಿಮ್ಮ ಅಧಿಕಾರಿಗಳು ನಿಯಮಗಳನ್ನು ಹಾಕಿದರೆ ಆ ಹಣವನ್ನು ಎಂದಿಗೂ ಖರ್ಚು ಮಾಡುವುದಕ್ಕಾಗುವುದಿಲ್ಲ. ನಾಳೆಯೇ ವಿದ್ಯುಚ್ಛಕ್ತಿಯ ಬಗ್ಗೆ ಸುಧೀರ್ಘವಾಗಿ ಚರ್ಚೆಯಾಗಬೇಕು. ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ, ಯಾವಾಗ ಕೊಡುತ್ತೀರಿ ಎನ್ನುವುದನ್ನು ಸರ್ಕಾರ ಹೇಳಬೇಕು. ಆದರೆ ನೀವು ಹೇಳುವುದೊಂದು, ಮಾಡುವುದೊಂದು. ಅಲ್ಲಿ ಜನರು 5–6 ಕಿ.ಮೀ. ಗೆ ಒಂದೊಂದು ಪೈಪ್‌ಲೈನ್ ಹಾಕಿದ್ದಾರೆ. ನೀರು ಹೊಲಕ್ಕೆ ಮುಟ್ಟುವಷ್ಟರಲ್ಲಿ ಕರೆಂಟ್‌ಹೋಗುತ್ತದೆ. ಕರೆಂಟ್ ಬಂದು ಅರ್ಧಗಂಟೆ ಕಾಲ ಆಗಿರುತ್ತದೆಯೋ ಇಲ್ಲವೋ ಅಷ್ಟೊತ್ತಿಗಾಗಲೇ ಕರೆಂಟ್ ತೆಗೆಯುತ್ತಾರೆ. ಅಲ್ಲಿ ಹೋಗಿ ಕೇಳಿದರೆ ಲೆಕ್ಕ ಬರೆದಿಟ್ಟುಕೊಂಡಿದ್ದೇವೆ, ಅದನ್ನು ಆಮೇಲೆ ಕೊಡುತ್ತೇವೆಂದು

ಹೇಳುತ್ತಾರೆ. ಈ ರೀತಿ ವ್ಯವಸ್ಥೆ ಮಾಡಿದರೆ ಹೇಗೆ? ಈಗ ನಮ್ಮಲ್ಲಿ ರೈತರು ನಾಟಿ ಮಾಡಿದ್ದಾರೆ. ಸುಮಾರು ದುಡ್ಡು ಖರ್ಚು ಮಾಡಿಕೊಂಡಿದ್ದಾರೆ. ಈಗ ನೀವು ವಿದ್ಯುತ್‌ಅನ್ನು ತೆಗೆದರೆ ಹಳ್ಳದಲ್ಲಿ, ಹೊಳೆಯಲ್ಲಿ ನೀರಿದ್ದರೂ ಸಹ ಅದನ್ನು ಬಳಸಿ ಕೊಳ್ಳುವುದಕ್ಕಾಗುತ್ತಿಲ್ಲ. ಒಂದು ಕಡೆ ರೈತರಿಗೆ ನೀರು ಸಿಗುತ್ತಿಲ್ಲ, ಕುಡಿಯುವ ನೀರನ್ನೂ ಸಹ ಕೊಡುವುದಕ್ಕಾಗುತ್ತಿಲ್ಲ, ಒಂದು ಕಡೆ ಮಕ್ಕಳಿಗೂ ಸಹ ತೊಂದರೆಯಾಗಿದೆ. ರೈತರು, ಮಕ್ಕಳ ಪಾಲಕರು, ನನಗೆ ಎಲ್ಲರೂ ಫೋನ್ ಮಾಡುತ್ತಲೇ ಇರುತ್ತಾರೆ. ಯಾವುದೋ ಒಂದು ಹಳ್ಳಿಯಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದ ಕೂಡಲೇ ಗಲಾಟೆ ಮಾಡುತ್ತಾರೆ. ಇದನ್ನು ಮೊದಲು ಸರಿಪಡಿಸಬೇಕು. ಇದನ್ನು ಸರಿಪಡಿಸದೇ ಇದ್ದರೆ ತೊಂದರೆಯಾಗುತ್ತದೆ. ಇವತ್ತು ಒಂದು ಆದೇಶವನ್ನು ಕೊಟ್ಟಿದ್ದಾರೆ, ಒಂದು ವಾರದ ಹಿಂದೆಯಷ್ಟೇ ಒಂದು ಆದೇಶವನ್ನು ಕೊಟ್ಟಿದ್ದರು. ಹೀಗೆ ಎರಡು ದಿನಕ್ಕೆ ಒಂದೊಂದು ಆದೇಶವನ್ನು ಮಾಡುತ್ತಾರೆ. ಒಂದು ಆದೇಶ ಮಾಡಿದ ಮೇಲೆ ಅದು ಕನಿಷ್ಠ 1 ಅಥವಾ 2 ತಿಂಗಳುಗಳ ಕಾಲ ನಡೆಯಬೇಕಲ್ಲವೇ? Everyday ಒಂದೊಂದು ಆದೇಶ ಮಾಡುತ್ತಾರೆ, ಇಲ್ಲಿ ನಡೆಯುವುದಕ್ಕೂ ಹಾಗೂ ಅಲ್ಲಿ ಆದೇಶ ಮಾಡುವುದಕ್ಕೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. At least ಇದಕ್ಕಾದರೂ stickon ಆಗುತ್ತಾರೆಂದರೆ ಅದಕ್ಕೂ ಆಗುವುದಿಲ್ಲ. ಅಲ್ಲಿ ಹೋಗಿ ಒಂದು ಗಂಟೆ ಕಾದು ಕುಳಿತು ನೋಡಿದ್ದೇನೆ. ಇಲ್ಲಿಂದ ಫೋನ್ ಮಾಡುತ್ತಾರೆ. ಆ ಸ್ಟೇಷನ್‌ನಲ್ಲಿ ಎಷ್ಟು ಸಾರಿ ಫೋನ್ ಬಂತು, ಕರೆಂಟ್‌ನ್ನು ಎಷ್ಟು ಸಾರಿ ತೆಗೆದಿದ್ದೇನೆ, ಹಾಕಿದ್ದೇನೆ ಎಂಬುದನ್ನು ನೋಟ್ ಮಾಡಿಟ್ಟುಕೊಂಡಿದ್ದಾರೆ. ಈ ರೀತಿ ಎಲ್ಲೋ ಕುಳಿತು ಕಂಟ್ರೋಲ್ ಮಾಡುವುದಾದರೆ ಸಮಸ್ಯೆಯನ್ನು ಹೇಗೆ ಬಗೆ ಹರಿಸುತ್ತಾರೆ? ನಿರ್ದಿಷ್ಟವಾಗಿ ಇಷ್ಟು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದು ಹೇಳಬೇಕು, ಈಗ ದಿನಕ್ಕೆ 4–5 ಗಂಟೆಗಳ ವಿದ್ಯುತ್ ಕೊಡುತ್ತಾರೆ. ಕೊಡುವ 5 ಗಂಟೆಗಳ ವಿದ್ಯುತ್ ಅನ್ನೂ ಸಹ ಸರಿಯಾಗಿ ಕೊಡದೇ ಹೋದರೆ ಜನಗಳಿಗೆ ನಾವು ಹೇಗೆ ಉತ್ತರ ಹೇಳಬೇಕು? ನಿಮ್ಮ ಕೆಳಗಿನ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆ? Executive Engineer ಕೆಳಗಿರುವ

ಅಧಿಕಾರಿಗಳನ್ನು ದೇವರೇ ಕಾಪಾಡಬೇಕು. ಎಂ.ಡಿ.ಗಳು ಎಲ್ಲೋ ಕುಳಿತು ಆದೇಶ ಮಾಡುತ್ತಾರೆ, ಇವರಿಗೇನೂ ಆಗುವುದಿಲ್ಲ. ಈ ಆದೇಶಗಳನ್ನು implement ಮಾಡುವ ಅಧಿಕಾರಿಗಳ ಪರಿಸ್ಥಿತಿ ಏನು? ಅವರನ್ನು manhandle ಮಾಡುತ್ತಾರೆ, ಸಾವಿರಾರು ಜನ ರೈತರು ಹೋಗಿ ಮುತ್ತಿಗೆ ಹಾಕುತ್ತಾರೆ. ಏಕೆಂದರೆ ಅವರು ಬೆಳೆದಿರುವ ಬೆಳೆಗೆ ನಷ್ಟವಾಗುತ್ತಿರುತ್ತದೆ. ನಾವೇನಾದರೂ ಹೇಳುವುದಕ್ಕೆ ಹೋದರೆ ನಮಗೆ manhandle ಮಾಡುತ್ತಾರೆ. ಇಂತಹ ಪರಿಸ್ಥಿತಿಯಿರುವಾಗ ಇದನ್ನು ನಿಭಾಯಿಸುವುದಕ್ಕೇ ಸರ್ಕಾರ ಗಮನಹರಿಸಬೇಕು ಮತ್ತು ಇದಕ್ಕೆ ತೀಕ್ಷಣವಾಗಿ ಪರಿಹಾರವನ್ನು ಕೊಡಬೇಕು. ಹಣ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. 2 ಕೋಟಿ ಕೊಡುತ್ತೀರೋ, ಎಷ್ಟು ಕೋಟಿ ಕೊಡುತ್ತೀರೋ, ಒಟ್ಟಿನಲ್ಲಿ ಆ ದುಡ್ಡನ್ನು ಇದಕ್ಕೆ ಬಳಸಬೇಕೆಂದು ನಿರ್ಬಂಧ ಹಾಕಬೇಡಿ. ಎಲ್ಲೆಲ್ಲಿ ಯಾವುದಕ್ಕೆ ಅವಶ್ಯಕತೆ ಇದೆ ಅಲ್ಲಿ ಜನರ ಸಮಸ್ಯೆ ಪರಿಹಾರವಾಗಬೇಕು. ಆ ದುಡ್ಡನ್ನು ಬಳಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಮನವಿಯನ್ನು ಸದನದ ಮುಖಾಂತರ ಸರ್ಕಾರಕ್ಕೆ ಮಾಡಿ, ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಪುಟ್ಟರಂಗಶೆಟ್ಟಿ (ಚಾಮರಾಜನಗರ): ಇಂದು ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲ ಸಂಭವಿಸಿದೆ. ಅದರಲ್ಲೂ ನನ್ನ ಕ್ಷೇತ್ರವಾದ ಚಾಮರಾಜನಗರ ತಾಲ್ಲೂಕು ಅತ್ಯಂತ ಭೀಕರ ಬರಗಾಲಕ್ಕೆ ಬಲಿಯಾಗಿರುವುಂತಹ ತಾಲ್ಲೂಕು ಎಂದು ಹೇಳಬಯಸುತ್ತಾ, ಕುಡಿಯುವ ನೀರಿಗೆ ಇಲ್ಲಿ ಹಾಹಾಕಾರ ಕಾಣಿಸಿಕೊಂಡಿದೆ. ಸುಮಾರು ಹತ್ತಾರು ವರ್ಷಗಳ ಹಿಂದೆ ಇಲ್ಲಿ ಕೊರೆದಿರುವ ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಹೋಗಿದೆ. ಹಿಂದೆ ಕೇವಲ 200–300 ಅಡಿ ಮಾತ್ರ ಕೊರೆದಿದ್ದರು. ಹಾಗಾಗಿ ಇಂದು ಕೆರೆ ಕಟ್ಟೆಗಳಲ್ಲಿ ಒಂದು ಹನಿ ನೀರಿಲ್ಲದೆ, ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಹೋಗಿದ್ದು, ಕುಡಿಯುವ ನೀರಿಗೆ ಬಹಳ ಹಾಹಾಕಾರವಾಗಿದೆ. ಆ ದಿಕ್ಕಿನಲ್ಲಿ ನನ್ನ ಕ್ಷೇತ್ರದಲ್ಲಿ ಕಳೆದ ಬಾರಿ ನಾಲ್ಕು ಗೋಶಾಲೆಗಳನ್ನು ತೆರೆಯಲಾಗಿತ್ತು.

ಆದರೆ ನೀರಿಲ್ಲದ ಕಾರಣ ಕೆಲವು ಗೋಶಾಲೆಗಳನ್ನು ನಡೆಸುವುದಕ್ಕೆ ಆಗಲಿಲ್ಲ. ಅದಕಾರಣ ಕುಡಿಯುವ ನೀರಿಗೆ Task-force ನಲ್ಲಿ ಹೆಚ್ಚಿನ ಹಣವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಕಳೆದ ವರ್ಷ ಮೇವಿಲ್ಲದೆ ಕಬ್ಬನ್ನು ತರಿಸಿ ಗೋಶಾಲೆಗಳಿಗೆ ಕೊಟ್ಟಿದ್ದೇವೆ. ಆ ರೀತಿ ತರಿಸಿದ ಒಬ್ಬ ರೈತನಿಗೆ ಇದುವರೆವಿಗೂ 3 ಲಕ್ಷ ರೂ. ಗಳನ್ನು ಕೊಟ್ಟಿರುವುದಿಲ್ಲ. ಅನೇಕ ಬಾರಿ ಆತ ದೂರವಾಣಿ ಕರೆ ಮಾಡಿ, ಜಿಲ್ಲಾಧಿಕಾರಿಗಳು ಹಾಗೂ ತಹಶಿಲ್ದಾರ್‌ರನ್ನು ಕೇಳಿದರೂ ಹಣವಿಲ್ಲ, ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. 2011–12ನೇ ಸಾಲಿನಲ್ಲಿ ನನ್ನ ಕ್ಷೇತ್ರದಲ್ಲಿ ಬರ ಸಂಭವಿಸಿದಂತಹ ಕಾಲದಲ್ಲಿ ಸುಮಾರು ನೂರಾರು ದನಗಳು ಸತ್ತು ಹೋದವು. ದೊಡ್ಡ ಮುಡಹಳ್ಳಿ. ಬೂದಿಬಡಗ ಉಳ್ಳೂರು ಗ್ರಾಮಗಳಲ್ಲಿ ನೂರಾರು ದಿನಗಳು ಸತ್ತುಹೋದಾಗ ಅವುಗಳೆಲ್ಲವನ್ನು post mortem ಮಾಡಿ, ಪರಿಹಾರವನ್ನು ಕೊಡುತ್ತೇವೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ಅವರು ಹೇಳಿದ್ದರು. ಆದರೆ ಇದುವರೆವಿಗೂ ಯಾವ ರೈತರಿಗೂ ಸಹ ಒಂದು ರೂಪಾಯಿಯ ಸಹಾಯಧನವನ್ನು ಕೊಟ್ಟಿಲ್ಲ. ಆದ್ದರಿಂದ ತಾವು ಆ ಸಹಾಯಧನವನ್ನು ಕೊಡಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಚಾಮರಾಜನಗರ ಟೌನ್‌ನಲ್ಲಿ ಕುಡಿಯುವ ನೀರಿಗೆ ಹಾಹಾಕಾರ, ವಿದ್ಯುತ್ ಇಲ್ಲದೆ ಸುಮಾರು 31 ವಾರ್ಡುಗಳಲ್ಲಿ ಸ್ವಲ್ಪ ಭಾಗಕ್ಕೆ 3–4 ದಿವಸಗಳ ಕಾಲ ಮಾತ್ರ ಸ್ವಲ್ಪ ನೀರು ದೊರಕುತ್ತದೆ. ಅಲ್ಲಿ ಎರಡು ಕಡೆಯಿಂದ ಅಂದರೆ ಸುವರ್ಣಾವತಿ ಹಾಗೂ ಚಿಕ್ಕಹೊಳೆಯಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಸುವರ್ಣಾವತಿಗೆ ನೀರು ಬಂದು ಅಲ್ಲಿಂದ ರಾಮಸಮುದ್ರ ಮುಖಾಂತರ ಚಾಮರಾಜನಗರ ಟೌನ್‌ಗೆ ನೀರನ್ನು ಕೊಡುತ್ತಿದ್ದರು. ಬಹಶಃ ಈಗ ಅಲ್ಲಿ ನೀರು ನಿಂತು ಹೋಗಿದೆ. ಹಾಗಾಗಿ ಅಲ್ಲಿ ಮಿತಿ ವಾಟರ್ ಸಪ್ಲೈ ಯೋಜನೆ ಮಾಡಿ ಕುಡಿಯುವ ನೀರನ್ನು ಕೊಡಬೇಕಾಗಿದೆ. ಚಾಮರಾಜನಗರ ಟೌನ್‌ಗೆ ವಿಶೇಷವಾಗಿ Task-force ನಲ್ಲಿ ಹಣವನ್ನು ಕೊಡುವ ಮುಖಾಂತರ ಪ್ರತಿಯೊಂದು ವಾರ್ಡ್‌ನಲ್ಲಿಯೂ ಮಿನಿ ವಾಟರ್ ಸಪ್ಲೈ ಯೋಜನೆ ಮಾಡಿ ಕುಡಿಯುವ ನೀರಿಗೆ ಹಾಗೂ

ಸ್ನಾನಕ್ಕೆ ನೀರನ್ನು ಕೊಡುವ ಅವಶ್ಯಕತೆ ಇದೆ. ಕುಡಿಯುವ ನೀರಿನ ಸಮಸ್ಯೆ ಇರುವ ಕಾರಣದಿಂದ ಯಾರೊಬ್ಬ ಅಧಿಕಾರಿಯೂ ಅಲ್ಲಿ ವಾಸ್ತವ್ಯ ಹೂಡದೇ ಮೈಸೂರು ಮತ್ತಿತರ ನಗರಗಳಿಗೆ ಹೋಗುತ್ತಾರೆ. ಅವರು ವಾಪಸ್ಸು ಬರುವುದಕ್ಕೆ ತಡವಾಗಿ, ನಮಗೆ 11–12 ಗಂಟೆಗೆ ಸಿಗುವಂಥ ವ್ಯವಸ್ಥೆಯಾಗಿದೆ. ದಯಮಾಡಿ ಚಾಮರಾಜನಗರ ಟೌನ್‌ಗೆ ಹೆಚ್ಚಿನ ಹಣವನ್ನು ಕೊಡುವ ಮುಖಾಂತರ, ಅಲ್ಲಿ ಕೊಳವೆ ಬಾವಿ ಹಾಗೂ ಮಿನಿವಾಟರ್ ಸಪ್ಲೈ ಯೋಜನೆ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಎಲ್ಲದಕ್ಕಿಂತ ಮುಖ್ಯವಾಗಿ ಬಿಸಿಯೂಟ. ಎಲ್ಲಾ ಶಾಲೆಗಳಲ್ಲೂ ಕುಡಿಯುವ ನೀರಿಗೆ ಬಹಳ ಹಾಹಾಕಾರವಾಗಿದ್ದು ಬೆಳಗ್ಗೆ ನಮಗೆ ಬಿಸಿಯೂಟ ಮಾಡುವುದಕ್ಕಾಗಲಿಲ್ಲ, ಏಕೆಂದರೆ ಕುಡಿಯುವ ನೀರೇ ಇಲ್ಲವೆಂದು ನನಗೆ ಮೂರ್‍ನಾಲ್ಕು ಜನ ದೂರವಾಣಿ ಕರೆ ಮಾಡಿದ್ದರು. ನಮಗೆ ಕೊಳವೆ ಬಾವಿಗಳನ್ನು ಕೊರೆಯುವ ಮುಖಾಂತರ ಕುಡಿಯುವ ನೀರನ್ನು ಒದಗಿಸಿಕೊಡಿ. ಈ ಸಂಬಂಧ ಮಾತನಾಡಿದಂಥ ಮಾನ್ಯ ಸದಸ್ಯರ ಹಾಗೂ ನನ್ನ ಕ್ಷೇತ್ರಕ್ಕೂ ಹೆಚ್ಚಿನ ಅನುದಾನವನ್ನು ಕೊಡುವ ಮುಖಾಂತರ ಅದರಲ್ಲೂ ಟೌನ್‌ಗೆ ಹೆಚ್ಚಿನ ಅನುದಾನವನ್ನು ವಿಶೇಷವಾಗಿ ಕೊಡಬೇಕೆಂದು ಸರ್ಕಾರವನ್ನು ಸದನದ ಮುಖಾಂತರ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕಲ್ಪನಾ ಸಿದ್ಧರಾಜು (ಮದ್ದೂರು): ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ತೀವ್ರತರವಾದ ಬರಗಾಲ ಬಂದು, ಮದ್ದೂರಿನಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಿದ್ದು, ಅದರಲ್ಲಿಯೂ ಅಲ್ಲಿನ ಎರಡು ಹೋಬಳಿಗಳು ಮಳೆಯನ್ನೇ ಆಧರಿಸಿರುವ ಕಾರಣದಿಂದ, ಅಲ್ಲಿ ವಿಪರೀತವಾಗಿ ಕುಡಿಯುವ ನೀರಿನ ತೊಂದರೆಯಾಗಿದೆ. ಹಳ್ಳಿಗಳಲ್ಲಿ 700–800 ಅಡಿಯಲ್ಲಿ ಸುಮಾರು 6–7 ಬೋರ್‌ವೆಲ್ ಕೊರೆಸಿದರೂ ನೀರು ಬರುತ್ತಿಲ್ಲ. ಗ್ರಾಮಗಳಿಗೆ ಭೇಟಿ ನೀಡಿದಾಗ ಅಲ್ಲಿನ ಜನರು ಕುಡಿಯುವ

ನೀರನ್ನು ಮಾತ್ರ ಒದಗಿಸಿಕೊಡಿ, ನಮಗೆ ಬೇರೇನೂ ಬೇಡ ಎಂದು ಹೇಳುವ ಪರಿಸ್ಥಿತಿಯಲ್ಲಿದ್ದಾರೆ. ಕೆಲವು ಕಡೆ ಬೋರ್ ಕೊರೆಸಿದಾಗ ಅಲ್ಲಿ ನೀರು ಬರದಿದ್ದ ಸಂದರ್ಭದಲ್ಲಿ ಅಲ್ಲಿನ ಸ್ಥಳೀಯ ಜನರು ಗಲಾಟೆ ಮಾಡಿ, ಬೇರೆ ಬೋರ್ ಕೊರೆಸಿರುತ್ತಾರೆ. ಅದರೆ ಅವುಗಳಿಗೆ ಇದುವರೆವಿಗೂ ಹಣ ಬಿಡುಗಡೆಯಾಗಿಲ್ಲ. ಬೋರ್‌ನವರು ನಮಗೆ ಹಳೇ ದುಡ್ಡು ಬರದೇ ಬೇರೆ ಹೊಸ ಬೋರ್ ಕೊರೆಯುವುದಕ್ಕೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಈ ವಿಷಯವನ್ನು ಸಿ.ಇ.ಓ. ಗಮನಕ್ಕೂ ಸಹ ತಂದಿದೇವೆ. ರಾಜೀವ್‌ಗಾಂಧಿ ಸಬ್‌ಮಿಷನ್ ಯೋಜನೆಯಲ್ಲಿ 32 ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡುವ ಬಗ್ಗೆ, ಕೊಕ್ಕರೆ ಬೆಳ್ಳೂರಿಗೆ ನೀರಿನ ಯೋಜನೆ ಮಾಡುವ ಸಂದರ್ಭದಲ್ಲಿ ಶ್ರೀ ಜಯರಾಂ ಅವರು ಸಿ.ಇ.ಓ ಆಗಿದ್ದರು. ಅವರೂ ಇಲ್ಲೇ ಇದ್ದಾರೆ. 90% ಕೆಲಸ ಮುಗಿದಿದ್ದು. 10% ಕೆಲಸ ಮಾತ್ರ ಬಾಕಿಯಿದೆ. ಅದನ್ನು ಮುಗಿಸಬೇಕೆಂದು contractors ಗೆ ಎಷ್ಟು ಹೇಳಿದರೂ ಕೇಳುತ್ತಿಲ್ಲ. ಶ್ರೀ ಜಯರಾಂ ಅವರು ಇದ್ದಾಗ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿದರೂ ಕೂಡ, ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದೆ ಕೆಲಸ ಮುಗಿಸಿಲ್ಲ. ಆ ಕೆಲಸವನ್ನು ಮುಗಿಸಿ ಕೊಟ್ಟರೆ 32 ಹಳ್ಳಿಗಳಿಗೆ ಕುಡಿಯುವ ನೀರನ ತೊಂದರೆ ಎಲ್ಲಾ ಪರಿಹಾರ ಆಗುತ್ತದೆ. ವಿದ್ಯುತ್ ಅಭಾವ ಇದೆ. ಒಂದು ದಿನಕ್ಕೆ 2 ಗಂಟೆ ಮಾತ್ರ ಕೊಡುತ್ತಾರೆ. ಕುಡಿಯುವ ನೀರಿಗಾಗಿ Waterman ಗೆ ಫೋನ್ ಮಾಡಿ ನೀರು ಬಿಡಿ ಎಂದರೆ ಕರೆಂಟ್ ಇಲ್ಲದೆ ನಾವು ಎಲ್ಲಿಂದ ನೀರು ಬಿಡುವುದು ಎಂದು ಹೇಳುತ್ತಾರೆ.

ಎಲ್ಲಾ ಗ್ರಾಮಗಳಲ್ಲೂ ಗಲಾಟೆ, ಕರೆಂಟ್ ಇಲ್ಲ, ಕರೆಂಟ್ ಇಲ್ಲ, ಕರೆಂಟ್ ಕೊಡಿಸಿ ಎಂದು ಅಲ್ಲಿನ ಜನರು ನಮಗೆ ಫೋನ್ ಮಾಡಿ ಕೇಳುತ್ತಾರೆ. ಸಿಂಗಲ್ ಫೇಸ್ ಕೊಡಿ ಎಂದು ಕೇಳಿದರೂ ಕೊಡುತ್ತಿಲ್ಲ. ಕರೆಂಟ್ ಅಭಾವ ತುಂಬಾ ಆಗಿದೆ. ಅಂತರ್ಜಲ ಇಲ್ಲ. ಅಂತರ್ಜಲ ಇಲ್ಲದೆ ಇರುವುದರಿಂದ ಕುಡಿಯುವ ನೀರು ಸಿಗುತ್ತಿಲ್ಲ. ಕಟ್ಟೆಗಳಲ್ಲಿ silt ಎತ್ತಿ ಹಾಕಿಸಿ ನೀರು ತುಂಬಿಸಿದರೆ ಅಂತರ್ಜಲ ಹೆಚ್ಚಿ ಬೋರ್‌ವೆಲ್‌ಗಳಲ್ಲಿ ನೀರಾದರೂ ಸಿಗುತ್ತದೆ. ಊರುಗಳಲ್ಲಿ ಬೋರ್‌ವೆಲ್‌ಗಳಲ್ಲಿ ನೀರು ಸಿಗದೆ ಇದ್ದಾಗ ಗದ್ದೆ ಬಯಲಲ್ಲಾದರೂ ಬೋರ್‌ವೆಲ್ ತೆಗೆಸಿ ಅಲ್ಲಿಂದ ಊರಿಗೆ ಕೊಡಬೇಕಾದರೆ ಸುಮಾರು ಅರ್ಧ ಕಿಲೋಮೀಟರ್, ಒಂದು ಕಿಲೋಮೀಟರ್ ಆಗುತ್ತದೆ. ಅಲ್ಲಿಗೆ ಪೈಪ್‌ಲೈನ್ ಹಾಕಿಸಿಕೊಡಿ ಎಂದು ಅಧಿಕಾರಿಗಳಿಗೆ ಹೇಳಿದರೆ ಅವರು ಅಷ್ಟೊಂದು amount ನಮ್ಮಲ್ಲಿ ಇಲ್ಲ ಎಂದು ಹೇಳುತ್ತಾರೆ. ಆದರೆ ಸರ್ಕಾರ ನೋಡಿದರೆ ಹಣ ಬಿಡುಗಡೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಮ್ಮ ಮೇಲೆ ಅಲ್ಲಿನ ಜನರು ಗಲಾಟೆ ಮಾಡುತ್ತಾರೆ. ಆದ್ದರಿಂದ ಆದಷ್ಟು ಹೆಚ್ಚಿನ ಹಣವನ್ನು ನಮ್ಮ ತಾಲ್ಲೂಕಿಗೆ ಬಿಡುಗಡೆ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿಕೊಡಿ. ಕೊಕ್ಕರೆ ಬೆಳ್ಳೂರಿನ 32 ಹಳ್ಳಿಗಳ ಕೆಲಸವನ್ನು ಆದಷ್ಟು ಬೇಗ ಮುಗಿಸಿಕೊಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಸುರೇಶ್‌ಗೌಡ (ನಾಗಮಂಗಲ): ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಬೆಳಿಗ್ಗೆ ನಾನು ಮಂಡ್ಯ ಡಿ.ಸಿ. ಹಾಗೂ ಸಿ.ಇ.ಓ. ಅವರ ಸಮ್ಮುಖದಲ್ಲಿ ನನ್ನ

ಕ್ಷೇತ್ರದ ಬಗ್ಗೆ ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಸಭೆ ನಡೆಸಿ ಬರುತ್ತಿದ್ದೇನೆ. ಅಲ್ಲಿ ಒಂದು ವಿಷಯ ಗೊತ್ತಾಯಿತು. ಕೇವಲ ಟ್ಯಾಂಕರ್ ಮೂಲಕ ನೀರನ್ನು ಹೊಡೆಯುವುದಕ್ಕೆ ಸರ್ಕಾರದಿಂದ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದು ತಹಶೀಲ್ದಾರ್‌ಗಳು ಮಾತ್ರ ಮಾಡಬೇಕು. ಎಂ.ಎಲ್.ಎ. ಅವರ permission ತೆಗೆದುಕೊಳ್ಳುವುದು ಬೇಕಾಗಿಲ್ಲ. taskforce ಗೆ ಹೋಗುವುದು ಬೇಕಾಗಿಲ್ಲ ಎನ್ನುವ ಮಾತನ್ನು ಅಲ್ಲಿ ಡಿ.ಸಿ. ಅವರು ಹೇಳಿದರು. ಬಹುತೇಕ ತಾವು ಸರ್ಕಾರದಿಂದ ಆ ರೀತಿ ಮೌಖಿಕವಾಗಿಯೋ, ಲಿಖಿತವಾಗಿಯೋ ಆದೇಶವನ್ನು ಕೊಟ್ಟಿದ್ದರೆ ಪ್ರಜಾಪ್ರಭುತ್ವದಲ್ಲಿ ಒಂದು ದೊಡ್ಡ ಲೋಪದೋಷವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಯಾವುದಾದರೂ ಊರಿನಲ್ಲಿ ಜನರು ಕುಡಿಯುವುದಕ್ಕೆ ನೀರಿಲ್ಲವೆಂದು ಹೇಳಿದರೆ ಅವರು ಮೊದಲು ಸಂಪರ್ಕ ಮಾಡಬೇಕಾದ್ದದ್ದು ಆಯಾಯ ಶಾಸಕರನ್ನು ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ಶಾಸಕರಿಗೆ ಗೊತ್ತಿರುವ ಕಷ್ಟಸುಖ ಅಧಿಕಾರಿಗಳಿಗೆ ಗೊತ್ತಿಲ್ಲ. ಸರ್ಕಾರದಿಂದ ಬರದ ನಿರ್ವಾಹಣೆಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಅಧಿಕಾರಿಗಳು 10 ಗಂಟೆಗೆ ಬಂದು 5.00 ಗಂಟೆಗೆ ಮನೆಗೆ ಹೋಗುವುದು ಹಾಗೂ ರಜಾ ದಿನಗಳಲ್ಲಿ ಮಜಾ ಮಾಡುವುದನ್ನು ಮಾತ್ರ ಕಲಿತಿದ್ದಾರೆ. ನೀವು ಶಾಸಕರನ್ನು ಬಿಟ್ಟು ಅಧಿಕಾರಿಗಳ ಮೂಲಕ ತರುವುದಾದರೆ ಅದನ್ನು

ನಾವು ಖಂಡಿಸುತ್ತೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಇವತ್ತು ಸರ್ಕಾರ ಬೇಕೋ ಬೇಡವೋ ಹಲವಾರು ಕ್ಷೇತ್ರಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿತು. ಈಗ ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಾಗಮಂಗಲ, ಕೆ.ಆರ್.ಪೇಟೆ, ಮಳವಳ್ಳಿ ಅತ್ಯಂತ ಬರ ಇರತಕ್ಕಂಥ ಪ್ರದೇಶಗಳು. ನಂಜುಂಡಪ್ಪ ವರದಿಯಲ್ಲೂ ಅದೇ ಇದೆ. ತಾವು ಇಡೀ ತಾಲ್ಲೂಕನ್ನೇ ಬರ ಪೀಡಿತವೆಂದರೂ ನನಗೆ ಏನೂ ಬೇಜಾರು ಇಲ್ಲ. ನೀರಾವರಿ ಇಲ್ಲದೆ ಇರತಕ್ಕಂಥ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಹೇಳಿದ್ದೀರಿ. ಸಂತೋಷ. ನನಗೆ ಬೇಜಾರು ಏನೂ ಇಲ್ಲ. ಆದರೆ ನೀವು ಕೊಡತಕ್ಕಂಥ ಅನುದಾನವನ್ನು ಎಲ್ಲಾ ಕ್ಷೇತ್ರಗಳಿಗೂ ಸಮಾನವಾಗಿ ಕೊಡುತ್ತೀರಿ. ಅವರಿಗೆ ಕಷ್ಟ ಇದೆಯೋ ಇಲ್ಲವೋ ಅವರಿಗೂ ಕೊಡುತ್ತೀರಿ, ನಮಗೆ ಕಷ್ಟ ಇದ್ದರೂ ಅದನ್ನೇ ಕೊಡುತ್ತೀರಿ. ಇವತ್ತು ನಮ್ಮ ಸ್ವಂತ ದುಡ್ಡಿನಲ್ಲೋ, ನೀವು ಕೊಟ್ಟ ದುಡ್ಡಿನಲ್ಲೋ ಸುಮಾರು 250 ಬೊರೆವೆಲ್‌ಗಳನ್ನು ಕೊರೆಸಿದ್ದೇವೆ. ಎಲ್ಲೋ ಕಷ್ಟಪಟ್ಟು ನೀರು ಬಂದಿದೆ. ಆ ಬೋರ್‌ವೆಲ್‌ಗಳಿಗೆ ನಿಮ್ಮಿಂದ ಪಂಪ್ ಮಾಡಿಸುವುದಕ್ಕೆ ಆಗಿಲ್ಲ. Hand pump ಗಳನ್ನು ಹಾಕಿಸುವುದಕ್ಕೆ ಆಗಿಲ್ಲ. ಇವತ್ತು ನಮ್ಮ ಏರಿಯಾದಲ್ಲಿ 60% ಫ್ಲೋರೈಡ್ content ಇರತಕ್ಕಂಥ ನೀರು ಸಿಗುತ್ತಿದೆ. ಎಲ್ಲೋ ಒಂದು ಕಡೆ ಒಳ್ಳೆಯ ನೀರು ಸಿಕ್ಕಿದೆ ಅಂದರೂ ಸಹ ಸರ್ಕಾರ ಇರತಕ್ಕಂಥ ನೀರನ್ನು ಹೊರಗಡೆ ತೆಗೆದು ಕೊಡುವಂಥ ವ್ಯವಸ್ಥೆಯನ್ನು ಖಂಡಿತ ಮಾಡಿಲ್ಲ. ಇದನ್ನು ತಕ್ಷಣ ಮಾಡಬೇಕು. ಏಕೆಂದರೆ 2–3 ತಿಂಗಳುಗಳ ಕಾಲ ಬಹಳ

ಕಷ್ಟವಾಗಿದೆ. ಈಗಾಗಲೇ ಹಳ್ಳಿಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲ. ನಾವು ಚುನಾವಣೆ ಬರುತ್ತಿದೆ ಎನ್ನುವ ದೃಷ್ಟಿಯಿಂದ, ನಮ್ಮ ಸ್ವಂತ ದುಡ್ಡಿನಿಂದಲೋ ಏನೋ ಮಾಡುತ್ತಿದ್ದೇವೆ. ಅದರ ಜೊತೆಗೆ ನಿಮ್ಮ ಸಹಾಯವಿಲ್ಲದಿದ್ದರೆ ನಮಗೆ ಕಷ್ಟವಾಗುತ್ತದೆ. ದಯಮಾಡಿ ಇದರ ಬಗೆಗೆ ಗಮನ ಹರಿಸಬೇಕು. ಜೊತೆಗೆ ಗೋಶಾಲೆಗಳನ್ನು ತೆರೆದಿದ್ದೀರಿ. ಆ ಗೋಶಾಲೆಗಳು ಎಷ್ಟು ದಿವಸ ನಮ್ಮಲ್ಲಿ ಇದ್ದವು ಎಂದರೆ ವೀಕ್ಷಣೆಗಾಗಿ ರಾಜ್ಯ ಸರ್ಕಾರದಿಂದ ಮಂತ್ರಿಗಳು ಬರುತ್ತಿದ್ದಾರೆ ಎಂದ ತಕ್ಷಣ ಅಲ್ಲಿಗೆ ಒಂದು ಲೋಡ್ ಹುಲ್ಲು ಬರುತ್ತಿತ್ತು. ಆ ಮಂತ್ರಿಗಳು ಹೋಗುತ್ತಿದ್ದಂತೆ ಆ ಹುಲ್ಲು ಸಮೇತ ವಾಪಸ್ಸು ಹೋಗುತ್ತಿತ್ತು. ಇದು ನಿಜ ಸ್ಥಿತಿ. ವಿರೋಧ ಪಕ್ಷದ ನಾಯಕರು ವೀಕ್ಷಣೆಗೆ ಬರುತ್ತಿದ್ದಾರೆನ್ನುವ ಸಂದರ್ಭದಲ್ಲಿ ಹುಲ್ಲು ಬರುತ್ತಿತ್ತು. ಅವರು ಹೋಗುತ್ತಿದ್ದಂತೆ ಆ ಹುಲ್ಲು ಹೋಗುತ್ತಿತ್ತು. ಇವತ್ತು ನಮ್ಮಲ್ಲಿ ಹಲವಾರು ಕೆರೆಗಳು ಇದೆ. ಹೇಮಾವತಿ ಜಲಾಶಯದಿಂದ ಎಲ್ಲಾ ಕೆರೆಗಳನ್ನು ತುಂಬಿಸಬೇಕೆಂದು ನಿರ್ಣಯ ಆಗಿದೆ. ನಮ್ಮದು ಕೊನೆ ಹಂತ. ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಧೋರಣೆಯಿಂದ ನಮ್ಮ ಭಾಗದ ಒಂದು ಕೆರೆಗೆ ಒಂದೇ ಒಂದು ತೊಟ್ಟು ನೀರನ್ನು ಬಿಡುವುದಕ್ಕೆ ಆಗಿಲ್ಲ. ಇವತ್ತು ನಾಗಮಂಗಲ ಟೌನ್‌ನಲ್ಲಿ ಹೇಮಾವತಿ ನೀರನ್ನು ನಂಬಿಕೊಂಡಿರುವ ಸ್ಥಿತಿ ಇದೆ. ಆ ನೀರು ಬಂದರೆ ಮಾತ್ರ ಕುಡಿಯುವುದಕ್ಕೆ ಅನುಕೂಲ. ಆ ಕೆರೆಯಲ್ಲಿ ನೀರಿಲ್ಲ. ದನಕರುಗಳಿಗೆ ನೀರಿಲ್ಲ. ದನಕರುಗಳಿಗೆ ಆ ಕೆರೆ ಒಳಗಡೆ ಒಂದು ದೊಡ್ಡ ಹಳ್ಳ ಮಾಡಿ ನೀರು ಬರುವ ಹಾಗೆ ಮಾಡಿಸಿಕೊಳ್ಳೋಣವೆಂದರೆ ಹಣ ಕೊಡುತ್ತಿಲ್ಲ. ನಮ್ಮಲ್ಲಿ 400 ಅಡಿಗೋ,

500 ಅಡಿಗೋ, 600 ಅಡಿಗೋ, 700 ಅಡಿಗೋ ಏನೋ ನೀರು ಸಿಗುತ್ತಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕೆಲಸ ಕಾರ್ಯಗಳನ್ನು ಮಾಡಿ ಜನರಿಗೆ ಕೊಡತಕ್ಕಂಥ ಕೆಲಸಗಳು ನಡೆಯುತ್ತಿಲ್ಲ. ದಯಮಾಡಿ ಎಲ್ಲಾ ಕ್ಷೇತ್ರಗಳಿಗೆ ಕೊಟ್ಟ ಹಾಗೆ ನಮ್ಮ ಕ್ಷೇತ್ರಗಳಿಗೂ ಮಾಡುವುದಕ್ಕೆ ಆಗುವುದಿಲ್ಲ. ತಕ್ಷಣ ನಮಗೆ ಕಡಿಮೆ ಎಂದರೂ 2 ಕೋಟಿ ಹಣವನ್ನಾದರೂ ಬಿಡುಗಡೆ ಮಾಡಿ. ಈಗ 30 ಲಕ್ಷ ಕೊಟ್ಟು ಟ್ಯಾಂಕರ್‌ನಿಂದ ನೀರನ್ನು ಹೊಡೆಯುವುದಕ್ಕೆ ಹೇಳಿದ್ದೀರಿ. ಟ್ಯಾಂಕರ್‌ನಿಂದ ನೀರು ಹೊಡೆದಿರುವವರಿಗೆ ದುಡ್ಡು ಕೊಟ್ಟಿಲ್ಲ. ನೀವು ಕೊಟ್ಟಿರತಕ್ಕಂಥ ಹಣವು ನನ್ನ ಪ್ರಕಾರ ಸುಮಾರು 45 ರಿಂದ 50 ಲಕ್ಷ ರೂಪಾಯಿಗಳು ನೀರು ಹೊಡೆದಿರುವವರಿಗೆ ಕೊಡುವುದು ಬಾಕಿ ಇದೆ. ನೀವು 30 ಲಕ್ಷ ಕೊಟ್ಟಿದ್ದೀರಿ. ಯಾರಿಗೆ ಕೊಡುವುದು? ಮೊದಲು ಹೊಡೆದಿರುವವರಿಗೆ ಕೊಡುವುದೋ? ಈಗ ಹೊಡೆಯುವವರಿಗೆ ಕೊಡುವುದೋ? ಯಾರಿಗೆ ಕೊಡುವುದು ನಮಗೆ ಅರ್ಥವಾಗುತ್ತಿಲ್ಲ. ವಾಸ್ತವಿಕ ಸ್ಥಿತಿಯನ್ನು ತಮ್ಮ ಮುಂದೆ ಇಡುವುದಕ್ಕೆ ಇಷ್ಟಪಡುತ್ತಿದ್ದೇನೆ. ನಮ್ಮ ಭಾಗದಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟವಾಗುತ್ತಿದೆ. ಇದರ ಜೊತೆಗೆ ವಿದ್ಯುತ್ ಸಮಸ್ಯೆ ಎಷ್ಟಿದೆ ಎಂದರೆ, ಇವತ್ತು ನಾವು ಪಂಚಾಯತ್ ಅಧ್ಯಕ್ಷರುಗಳನ್ನು ಪಿಡಿಓಗಳನ್ನು ಎಲ್ಲಾ ಅಧಿಕಾರಿಗಳನ್ನು ಕರೆಸಿ ಕೇಳಿದ ಸಂದರ್ಭದಲ್ಲಿ ನಮಗೆ ಬೆಳಿಗ್ಗೆ 2 ಗಂಟೆ, ಸಾಯಂಕಾಲ 1 ಗಂಟೆ ವಿದ್ಯುತ್ ಇರುತ್ತದೆ ಎಂದು ಹೇಳುತ್ತಾರೆ. ಆದರೆ ಕರೆಂಟ್ ಯಾವಾಗ ಬರುತ್ತಿದೆ ಎಂಬ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇರಬಹುದು. ತಾವು ಇದನ್ನು ಯೋಚನೆ ಮಾಡಬೇಕು. ಕರೆಂಟ್ ಅಂತೂ ಬಹಳ ಕಷ್ಟವಾಗಿದೆ. ನನ್ನ

ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ತಕ್ಷಣ ಒಂದು ಗ್ರಾಮ ಪಂಚಾಯಿತಿಯೊಳಗೆ ಜನರೇಟರ್‌ಗಳನ್ನು ತೆಗೆದುಕೊಳ್ಳುವಂಥ ವ್ಯವಸ್ಥೆ ಮಾಡಿ. ಇವತ್ತಿನಿಂದಲೇ ದಯಮಾಡಿ ಒಂದು ಗ್ರಾಮ ಪಂಚಾಯಿತಿಗೆ ಟ್ಯಾಂಕರ್ ಎಂದರೆ ಟ್ರ್ಯಾಕ್ಟರ್ ಬೇಡ ಕೇವಲ ಬಾಡಿಗಳನ್ನು ಮಾಡಿಸಿ ಕೊಡಬೇಕು. ಅದಕ್ಕೆ ರೂ. 96 ಸಾವಿರ ಆಗುತ್ತದೆ. ಹಳ್ಳಿಯ ಜನ ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿ ನೀರನ್ನು ತೆಗೆದುಕೊಳ್ಳುವಂಥ ವ್ಯವಸ್ಥೆ ಆಗುತ್ತದೆ. ನಿರಂತರ ಜ್ಯೋತಿ ತಾವು ಕೊಟ್ಟಿರಿ. ನಿರಂತರ ಜ್ಯೋತಿ 2010ಕ್ಕೆ ಮುಗಿಯಬೇಕಾಗಿತ್ತು. 2011 ಆಯಿತು, 2012 ಆಯಿತು, 2013 ಬಂದರೂ ಇನ್ನೂ ನಿರಂತರ ಜ್ಯೋತಿಯನ್ನು ಮುಗಿಸಿಲ್ಲ. ಎಲ್ಲೋ ಒಂದು ಕಡೆ ಮಾಡಿರುತ್ತಾರೆ. ಆದಾದರೂ ಆದರೆ at least ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಈಗ ಮಕ್ಕಳಿಗೆ ಪರೀಕ್ಷೆ ಸಂದರ್ಭ. ಅದಾದರೂ ಆಗುತ್ತದೆ ಎಂದರೆ ಅದನ್ನೂ ಸಹ complete ಮಾಡಿಲ್ಲ. ಅಕ್ರಮ–ಸಕ್ರಮ ಯೋಜನೆಯನ್ನು ತಂದಿದ್ದೀರಿ. ಯಾರೋ ಅಸಮರ್ಪಕವಾದ ಗುತ್ತಿಗೆದಾರರಿಗೆ ಕೊಡುತ್ತೀರಿ. ಅವರೂ ಸಹ ಕೆಲಸವನ್ನು ಮಾಡುತ್ತಿಲ್ಲ. ತಾವು ದಯಮಾಡಿ ಒಂದು ಸ್ಟೋರ್ ಕೊಟ್ಟಿರಿ. ರಿಪೇರಿ ಸೆಂಟರ್ ಅನ್ನು ನೀವೇ ಕೊಟ್ಟಿರಿ. ಆದರೆ ಅಲ್ಲಿ ರಿಪೇರಿ ಮಾಡುತ್ತಿಲ್ಲ. ಈ ಪರಿಸ್ಥಿತಿ, ಅವ್ಯವಸ್ಥೆ ಈ ಆಡಳಿತದಲ್ಲಿ ಕಾಣಿಸುತ್ತಿದೆ. ಇದನ್ನು ತಾವು ತಕ್ಷಣ ಸರಿ ಮಾಡಬೇಕು. ಇದರ ಜೊತೆಗೆ ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಕ್ಷೇತ್ರಕ್ಕೆ ಏನು ಹಣವನ್ನು ಬಿಡುಗಡೆ ಮಾಡುತ್ತಾರೆ ಅದನ್ನು ತಕ್ಷಣ ಇವತ್ತೇ ಬಿಡುಗಡೆ ಮಾಡಬೇಕು.

ಅವರ ಅಧಿಕಾರಿಗಳು ಇದ್ದಾರೆ. ನಾವು ಹೇಳುತ್ತಿರುವುದು ಸುಳ್ಳೋ, ಸತ್ಯನೋ ಎಂದು ಅವರಿಂದ ಮಾಹಿತಿ ತರಿಸಿಕೊಳ್ಳಲಿ. ಇವತ್ತು ನೀವು ಎಲ್ಲಾ ಕ್ಷೇತ್ರಕ್ಕೆ ಮಾಡಿದ ಹಾಗೆ ನಮ್ಮ ಕ್ಷೇತ್ರಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ತಾವು ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನವನ್ನು ಕೊಡಲೇಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಇದರ ಜೊತೆಗೆ ನಮ್ಮಲ್ಲಿ ಈಗಾಗಲೇ ಬರದಿಂದ ಹಲವಾರು ತೆಂಗಿನ ಮರಗಳನ್ನು ನೋಡುವುದಕ್ಕೆ ಆಗುತ್ತಿಲ್ಲ. ಎಲ್ಲಾ ತೆಂಗಿನ ಮರಗಳು ನೀರು ಇಲ್ಲದೆ ಸುಟ್ಟು ಒಣಗಿ ಹೋಗುತ್ತಿರುವುದನ್ನು ನೋಡಿದ್ದೇವೆ. ದಯಮಾಡಿ ಏನಾದರೂ ಪರಿಹಾರವನ್ನು ರೈತಾಪಿ ಜನರಿಗೆ ಕೊಡಿ. ನೀವು ರೈತರ ಬಗ್ಗೆ ವಿಶೇಷವಾದ ಬಜೆಟ್ ಅನ್ನು separate ಆಗಿ ಮಾಡಿದ್ದೀರಿ. ಏನು ಕೊಡುತ್ತೀರಿ ಎನ್ನುವುದನ್ನು ಘೋಷಣೆ ಮಾಡಿ, ಇದು ಕೊನೆ ಅಧಿವೇಶನ. ಸುಮ್ಮನೆ 1 ಲಕ್ಷ ಚಿಲ್ಲರೆ, 2 ಲಕ್ಷ ಚಿಲ್ಲರೆ ಬಜೆಟ್ ಮಾಡಿ ನಮಗೆ ದುಡ್ಡು ಕೊಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಶಾಸಕರ ಗೌರವ ನಿಮ್ಮ ಕೈಯಲ್ಲಿದೆ. ದಯಮಾಡಿ ನಮ್ಮ ಗೌರವವನ್ನು ಕಾಪಾಡುವಂಥ ಕೆಲಸವನ್ನು ತಾವು ಮಾಡಬೇಕು. ಇಲ್ಲವಾದರೆ ನಮ್ಮ ಕ್ಷೇತ್ರಕ್ಕೆ ನಾವುಗಳು ಹೋಗುವುದಕ್ಕೆ ಆಗುವುದಿಲ್ಲ. ಸಭಾಧ್ಯಕ್ಷರು ನಿರ್ದೇಶನ ಕೊಟ್ಟು ಇದರ ಬಗ್ಗೆ ತುರ್ತಾಗಿ ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಇದರ ಜೊತೆಗೆ ನಮ್ಮಲ್ಲಿ submission scheme ಗಳನ್ನು ತಾವು ಮಾಡಿದ್ದೀರಿ. ಆದರೆ ಕಾರಣಾಂತರಗಳಿಂದ ಟೆಂಡರ್ ಆಗುವುದು ಮತ್ತೊಂದು ಆಗುವುದು ಮುಂದೆ ಹೋಗುತ್ತಿದೆ. ಅದನ್ನು ತಕ್ಷಣ

ಕಾರ್ಯರೂಪಕ್ಕೆ ತರಿಸಬೇಕು. ಕೊಪ್ಪಳ ಭಾಗದಲ್ಲಿ 49 ಹಳ್ಳಿಗಳು ಮತ್ತು ಆದಿಚುಂಚನಗಿರಿ ಕ್ಷೇತ್ರದಿಂದ 128 ಹಳ್ಳಿಗಳಿಗೆ ಟೆಂಡರ್‌ಗಳನ್ನು ಕರೆದಿದ್ದೀರಿ. ಆದರೆ ಇನ್ನೂ ಸಹ ಕೆಲಸ ಮಾಡಿಲ್ಲ. ಏಕೆಂದರೆ ಅದು ನಮ್ಮ ದಿವಂಗತ ಆದಿಚುಂಚನಗಿರಿ ಶ್ರೀಗಳ ಕನಸಿನ ಕೂಸು. ಅದಕ್ಕೆ ತಾವೇ ಬಂದು ಪೂಜೆಯನ್ನು ಮಾಡಿಕೊಡಬೇಕು. ನನಗೆ ಸಹಾಯವನ್ನು ಮಾಡಿದ್ದೀರಿ. ಅಪ್ರೂವಲ್ ಮಾಡಿದ್ದೀರಿ. ಮಾನ್ಯ ಸದಾನಂದಗೌಡರು ರಾಜೀನಾಮೆ ಕೊಡುವುದಕ್ಕೆ ಮುಂಚೆ ಅದಕ್ಕೆ ಸೈನ್ ಮಾಡಿ ಹೋದರು. ಅದಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆದರೆ ಈ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ತಾವು ಮಾಡಿಸಿಕೊಡಬೇಕೆಂದು ಕೇಳುತ್ತೇನೆ. ಇವತ್ತು ನಾನು ನನ್ನ ಮತಕ್ಷೇತ್ರದಲ್ಲಿ ಅಧಿವೇಶನಕ್ಕೆ ಹೋಗುತ್ತಿದ್ದೇವೆ, ಏನಾದರೊಂದು ಪರಿಹಾರ ಮಾಡುತ್ತೇವೆ ಎನ್ನುವಂಥ ಮಾತನ್ನು ಕೊಟ್ಟು ಬಂದಿದ್ದೇನೆ. ದಯಮಾಡಿ ಮುಂದಿನ ದಿನಗಳಲ್ಲಿ ತಕ್ಷಣ ನಮಗೆ ಏನು ಹಣ ಕೊಡುತ್ತೀರೋ ಅದನ್ನು ಬಿಡುಗಡೆ ಮಾಡಬೇಕು. ಇದು ಚುನಾವಣೆ ಸಂದರ್ಭ, ಖಂಡಿತವಾಗಿಯೂ ಭ್ರಷ್ಟಾಚಾರ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮ ರಾಜಕೀಯ ಜೀವನದ ಪ್ರಶ್ನೆ ಇರುತ್ತದೆ. ನಿಜವಾಗಿಯೂ ನಾವು ಪೈಸೆ ಪೈಸೆಗೂ ಲೆಕ್ಕ ಕೊಡುತ್ತೇವೆ. ನಾವೇನೂ ಖರ್ಚು ಮಾಡುವುದಿಲ್ಲ, ಅಧಿಕಾರಿಗಳೇ ಖರ್ಚು ಮಾಡಲಿ. ಆದರೆ, ನಮಗೆಸ್ವಲ್ಪ ಅಧಿಕಾರ ಕೊಡಿ. ಇದ್ದಕ್ಕಿದ್ದಂತೆ ನೀವು ತಹಸೀಲ್ದಾರರುಗಳಿಗೆ ಖರ್ಚು ಮಾಡಿ ಎಂದು ಹೇಳಿದರೆ ನಾವು ಎಲ್ಲಿಗೆ ಹೋಗೋಣ? ದಯವಿಟ್ಟು ಇದನ್ನೆಲ್ಲಾ ತಾವು ಮನಗಂಡನೆ ಮಾಡಿಕೊಂಡು

ಆದಷ್ಟು ಬೇಗ ನಮ್ಮ ಕ್ಷೇತ್ರಗಳಿಗೆ ಅನುದಾನವನ್ನು ಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

ಉಪಾಧ್ಯಕ್ಷರು: ಶ್ರೀ ದಿನಕರ ಶೆಟ್ಟಿ.

ಶ್ರೀ ಕೆ. ದಿನಕರ ಶೆಟ್ಟಿ (ಕುಮಟಾ): ಸನ್ಮಾನ್ಯ ಉಪಾಸಭಾಧ್ಯಕ್ಷರೆ, ಬರಗಾಲದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಧನ್ಯವಾದಗಳು. 175 ತಾಲ್ಲೂಕುಗಳಲ್ಲಿ ಸುಮಾರು 150 ತಾಲ್ಲೂಕುಗಳು ಈಗಾಗಲೇ ಬರಗಾಲ ಪೀಡಿತವೆಂದು ಘೋಷಣೆಯಾಗಿದೆ. ಆದರೆ ನನ್ನ ಕ್ಷೇತ್ರವಾದ ಕುಮಟಾ ಮತ್ತು ಹೊನ್ನಾವರ ತಾಲ್ಲೂಕು ಬರಗಾಲಪೀಡಿತ ಪ್ರದೇಶಕ್ಕೆ ಒಳಪಡುತ್ತಿಲ್ಲ. ನಮ್ಮಲ್ಲಿ ಸಾಕಷ್ಟು ಮಳೆ ಆಗುತ್ತಿದ್ದು, ಅತಿವೃಷ್ಟಿ ಆಗುತ್ತಿದೆ. ಆದರೆ ಬಂದಂಥ ಮಳೆಯ ನೀರು ಸಮುದ್ರಕ್ಕೆ ಸೇರುವಂಥದ್ದು ತಮಗೂ ಗೊತ್ತಿದೆ. ತಾವು ಸಹ ಕರಾವಳಿ ಪ್ರದೇಶದ ಶಾಸಕರಾಗಿದ್ದವರು. ಹೀಗಾಗಿ ನಮಗೆ ಮೇವಿಗೆ ಅಷ್ಟು ಬರಗಾಲ ಇಲ್ಲವೆಂದು ತಿಳಿದು, ಸರ್ಕಾರ ನಮ್ಮ ಕ್ಷೇತ್ರವನ್ನು ಬರಗಾಲಪೀಡತ ಪ್ರದೇಶ ಎಂದು ಘೋಷಣೆ ಮಾಡಿಲ್ಲ. ಆದರೆ, ನೀರಿಗೆ ಬಹಳಷ್ಟು ಹಾಹಾಕಾರ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ನಮ್ಮಲ್ಲಿ ಬಾವಿಗಳನ್ನು ತೆಗೆದಂಥ ಸಂದರ್ಭದಲ್ಲಿ ಸುಮಾರು 15 ರಿಂದ 20 feet ತನಕ ಸಿಹಿ ನೀರು, ಕುಡಿಯುವುದಕ್ಕೆ ಯೋಗ್ಯವಾದಂಥ ನೀರು ಸಿಗುತ್ತದೆ. ಕ್ರಮೇಣವಾಗಿ ಅದನ್ನು ಮತ್ತೆ ಆಳವನ್ನು ಮಾಡಿದಾಗ ಉಪ್ಪು ಅಂಶದ ನೀರು ಜಾಸ್ತಿಯಾಗಿ ಬರುವಂಥದ್ದು, ಹೀಗಾಗಿ ನಮ್ಮಲ್ಲಿ ಎಲ್ಲಾ ಕಡೆ ಇವತ್ತು ಸಾಕಷ್ಟು ಗ್ರಾಮಗಳಿಗೆ ನಾನು ಗ್ರಾಮ ವಾಸ್ತವ್ಯ ಮಾಡುತ್ತಿರುವಂಥ ಸಂದರ್ಭದಲ್ಲಿ ಪ್ರತಿಯೊಬ್ಬರೂ

ಕುಡಿಯುವ ನೀರಿನ ವ್ಯವಸ್ಥೆಯನ್ನು ಮೊದಲು ಮಾಡಿಕೊಟ್ಟು ನಂತರ ನಮ್ಮ ಊರಿಗೆ ಬರಬೇಕು ಎನ್ನುವ ಮಾತುಗಳನ್ನು ಆಡುತ್ತಿದ್ದಾರೆ. ಇವತ್ತು ಕೇವಲ ಬರಗಾಲಪೀಡಿತ ಪ್ರದೇಶಗಳಿಗೆ ಮಾತ್ರ ರೂ. 30 ಲಕ್ಷಗಳನ್ನು ಬಿಡುಗಡೆ ಮಾಡಿದ್ದೀರಿ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಅದರ ಜೊತೆಗೆ ಈಗಾಗಲೇ ಎಲ್ಲಾ ಸದಸ್ಯರು ರೂ. 30 ಲಕ್ಷ ಸಾಕಾಗುತ್ತಿಲ್ಲ. ರೂ. 2 ಕೋಟಿ ಹಣವನ್ನು ಟಾಸ್ಕ್‌ಫೋರ್ಸ್ ಮೂಲಕ ಬಿಡುಗಡೆ ಮಾಡಬೇಕು ಎನ್ನುವಂಥ ವಿನಂತಿಯನ್ನು ಮಾಡಿದ್ದಾರೆ. 4 ವರ್ಷದಿಂದ ಸತತವಾಗಿ ತಾವುಗಳು ಎಲ್ಲಾ ಸಂದರ್ಭದಲ್ಲೂ ಟಾಸ್ಕ್‌ಫೋರ್ಸ್‌ಗೆ ಹಣವನ್ನು ಬಿಡುಗಡೆ ಮಾಡಿದ್ದೀರಿ. ಆದರೆ ಕೊನೆಗಳಿಗೆಯಲ್ಲಿ ನಮ್ಮ ಅವಧಿ ಮುಗಿಯುತ್ತಿರುವಂಥ ಈ ಸಂದರ್ಭದಲ್ಲಿ ಏತಕ್ಕಾಗಿ ಅಧಿಕಾರಿಗಳ ಕೈಯಲ್ಲಿ ಈ ಹಣವನ್ನು ಕೊಡುತ್ತಿದ್ದೀರಿ ಎನ್ನುವುದು ನಮಗ್ಯಾರಿಗೂ ಅರ್ಥವಾಗುತ್ತಿಲ್ಲ. ನಮ್ಮ ಕ್ಷೇತ್ರವನ್ನೂ ಸಹ ಅದರಲ್ಲಿ ಬರಗಾಲ ಇಲ್ಲ ಎನ್ನುವುದನ್ನು ತಿಳಿಯದೇ ಕುಡಿಯುವ ನೀರಿನ ಸಮಸ್ಯೆ ತೀವ್ರವಾದಂಥ ಸಮಸ್ಯೆ ಇದೆ. ಈಗಾಗಲೇ ಹೈಕೋರ್ಟ್ ಶಾಲೆಗಳಲ್ಲಿ ಶೌಚಾಲಯ ಕಟ್ಟಬೇಕೆಂದು ಹೇಳಿದೆ. ಈಗಾಗಲೇ ಶೌಚಾಲಯ ಎಲ್ಲಾ ಶಾಲೆಗಳಲ್ಲೂ ನಿರ್ಮಾಣವಾಗಿದೆ. ಆದರೆ ಈ ಶೌಚಾಲಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವಂಥ ಅವಶ್ಯಕತೆ ಸಹ ಇವತ್ತು ಸಾಕಷ್ಟು ಶಾಲೆಗಳಲ್ಲಿದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಒಟ್ಟಾರೆಯಾಗಿ ಏನು ಬರಗಾಲಪೀಡಿತ ಪ್ರದೇಶಗಳಿಗೆ ಬಿಡುಗಡೆ ಮಾಡುವಂಥ ಹಣ ಕ್ಷೇತ್ರವಾದ ಕುಮಟಾ ಮತ್ತು ಹೊನ್ನಾವರ ಕ್ಷೇತ್ರದಲ್ಲಿ

ಬರಗಾಲ ಇರದೇ ಇದ್ದರೂ ಸಹ ನೀರಿಗೆ ಬರಗಾಲ ಇದೆ. ಆದ್ದರಿಂದ ನಮ್ಮ ಕ್ಷೇತ್ರಕ್ಕೂ ಹಣವನ್ನು ಬಿಡುಗಡೆ ಮಾಡಬೇಕು. ಟಾಸ್ಕ್‌ಫೋರ್ಸ್ ಮೂಲಕವೇ ಆ ಹಣವನ್ನು ಖರ್ಚು ಮಾಡುವಂಥ ವ್ಯವಸ್ಥೆಗೆ ಆದೇಶವನ್ನು ನೀಡಬೇಕು ಎನ್ನುವುದನ್ನು ಹೇಳುವುದರ ಜೊತೆಗೆ ಈಗಾಗಲೇ ಕೆ.ಇ.ಬಿ.ಯವರ ಬಗ್ಗೆ ಸಾಕಷ್ಟು ವಿಷಯ ಚರ್ಚೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಕರೆಂಟ್ ಉತ್ಪಾದನೆಯಾದರೂ ಸಹ ನಮಗೆ ಕರೆಂಟ್‌ನ ಖೋತಾ ಬಹಳಷ್ಟು ಇದೆ. ಅದು ಆಗಕೂಡದು. ನಮಗೆ ವಿನಾಯಿತಿಯನ್ನು ನೀಡಬೇಕು. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಶ್ರೀ ಎಸ್.ಎಂ.ಯಾಹ್ಯಾರವರು ಮಂತ್ರಿಯಾಗಿದ್ದಾಗ ನಮ್ಮ ಜಿಲ್ಲೆಗೆ ವಿನಾಯಿತಿಯನ್ನು ಕೊಟ್ಟಿದ್ದನ್ನು ಈ ಒಂದು ಸಂದರ್ಭದಲ್ಲಿ ನಾನು ನೆನೆಸಿಕೊಳ್ಳಬೇಕಾಗುತ್ತದೆ. ಆ ರೀತಿಯಲ್ಲಿ ನಮ್ಮ ಜಿಲ್ಲೆಗೆ ಕರೆಂಟ್‌ನ ರಿಯಾಯಿತಿಯನ್ನು ಕೊಡಬೇಕೆನ್ನುವ ವಿನಂತಿಯನ್ನು ಮಾಡುತ್ತಾ ಮತ್ತೊಮ್ಮೆ ನಮ್ಮ ತಾಲ್ಲೂಕಿಗೂ ಟಾಸ್ಕ್ ಫೋರ್ಸ್ ಮೂಲಕ ಹಣ ಬಿಡುಗಡೆ ಮಾಡಿ ಎನ್ನುವ ಮಾತನ್ನು ಕೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

ಸಭಾಧ್ಯಕ್ಷರು: ಶ್ರೀ ಯು.ಟಿ. ಖಾದರ್.

ಶ್ರೀ ಯು.ಟಿ. ಖಾದರ್ (ಮಂಗಳೂರು): ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಬರಗಾಲ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಆಗಿದೆ. ನನ್ನ ಕಳಕಳಿಯ ಕೋರಿಕೆ ಸರ್ಕಾರ ಮತ್ತು ಸಚಿವರಲ್ಲಿ ಏನೆಂದರೆ, ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಪ್ರದೇಶದ ಬಗ್ಗೆ ವಿಶೇಷವಾದ ಕಾಳಜಿ ವಹಿಸಬೇಕು.

ನಮ್ಮ ಗ್ರಹಚಾರ ಏನು ಎಂದು ಗೊತ್ತಿಲ್ಲ. ನಾವು ಈ ಕಡೆ ಬರಗಾಲದಲ್ಲಿಯೂ ಇಲ್ಲ. ಇಲ್ಲಿ ನಂಜುಂಡಪ್ಪನವರ ವರದಿ ನಮ್ಮ ಕಡೆ ಇಲ್ಲ. ಕಳೆದ ಬಾರಿ ಸಹ ಅಧಿವೇಶನ ನಡೆದ ಸಂದರ್ಭದಲ್ಲಿ ಎಲ್ಲಾ ಕ್ಷೇತ್ರಗಳಿಗೆ ರೂ. 30 ಲಕ್ಷಗಳ ಅನುದಾನವನ್ನು ಕೊಡುತ್ತೇವೆಂದು ಹೇಳಿ ಶ್ರೀ ಶ್ರೀ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಾಗ ಮಾತನ್ನು ಕೊಟ್ಟಿದ್ದರು. ಆದರೆ ಅನುದಾನ ಬಿಡುಗಡೆಯಾದಾಗ, ಕರಾವಳಿ ಪ್ರದೇಶದ ಯಾವ ಕ್ಷೇತ್ರಗಳಿಗೂ ಅನುದಾನ ಬಿಡುಗಡೆ ಮಾಡಿಲ್ಲ. ಬರೇ ಬರಗಾಲ ಪೀಡಿತ ಪ್ರದೇಶಗಳಿಗೆ ಮಾತ್ರ ಎಂದು ಹೇಳಿ ನಮ್ಮ ಕ್ಷೇತ್ರದ ಜನರು ಇಂಥ ಶಿಕ್ಷೆ ಅನುಭವಿಸಲಿಕ್ಕೆ ಏನು ತಪ್ಪು ಮಾಡಿದ್ದಾರೆ? ಆದರೆ ಅನುದಾವನ್ನು ನೀಡುವುದನ್ನು ನೀವು ಯಾವ ರೀತಿ ನಿಭಾಯಿಸುತ್ತೀರಿ? ಅದನ್ನು ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ನಮ್ಮ ಕ್ಷೇತ್ರಕ್ಕೂ ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ ಕರಾವಳಿ ಪ್ರದೇಶದಲ್ಲೂ ಬಹುಶಃ ಕುಡಿಯುವ ನೀರಿನ ಸಮಸ್ಯೆಯಿದೆ. ನಾವು ನೇತ್ರಾವತಿ ನದಿ ಮಟ್ಟದಲ್ಲಿ ಜೀವಿಸಿದರೂ ಸಹ ನಾವು ಸಹ ಕುಡಿಯುವ ನೀರಿಗೆ ಬಹಳಷ್ಟು ಕಷ್ಟ ಪಡುತ್ತಿದ್ದೇವೆ. ಇವತ್ತು ತಾವು ಅನುದಾನ ಕೊಟ್ಟರೂ ಸಹ ನಮಗೆ ಕೆ.ಇ.ಬಿ.ಯವರದ್ದು, ಬೆಸ್ಕಾಂನವರದ್ದು ದೊಡ್ಡ ಸಮಸ್ಯೆಯಾಗಿದೆ. ಅವರು ದೊಡ್ಡ ಟ್ರಾನ್ಸ್‌ಫಾರ್ಮರ್‌ಗೆ ರೂ. 1 ಲಕ್ಷ ಕಟ್ಟಿ ನಂತರ connection ಕೊಡುತ್ತೇವೆಂದು ಹೇಳುತ್ತಾರೆ. ಹಿಂದೆ ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ಬರಗಾಲ ಸಂದರ್ಭದಲ್ಲಿ ಟಾಸ್ಕ್‌ಫೋರ್ಸ್‌ನಿಂದ ಬಿಡುಗಡೆ ಮಾಡುವ ಹಣದಲ್ಲಿ ಹಾಕಿಸುವಂಥ ಬೋರ್‌ವೆಲ್‌ಗೆ ಟ್ರಾನ್ಸ್‌ಫಾರ್ಮರ್‌ಗೆ

ಡೆಪಾಸಿಟ್ ಕಟ್ಟುವುದಕ್ಕೆ ಇಲ್ಲ. ತಕ್ಷಣ ಡೈರೆಕ್ಟ್ ಆಗಿ connectionಕೊಡಬೇಕೆನ್ನುವ ಆದೇಶವನ್ನು ಹೊರಡಿಸಿದ್ದರು. ಅದನ್ನು ಮತ್ತೆ ಊರ್ಜಿತಗೊಳಿಸಬೇಕೆಂದು ನಾನು ಇವತ್ತು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಇಚ್ಛಿಸುತ್ತೇನೆ.

ಎರಡನೆಯದಾಗಿ, ಡಾ: ನಂಜುಂಡಪ್ಪ ವರದಿಯ ಪ್ರಕಾರ ಎಲ್ಲಿ ಹಿಂದುಳಿದ ಪ್ರದೇಶಗಳಿವೆಯೋ ಅಲ್ಲಿಗೆ ಕೊಡಿ. ಆದರೆ ಇವತ್ತು ನಾವು ಎಲ್ಲಿ ಮುಂದುವರೆದಿದ್ದೇವೆ? ಅಲ್ಲಿ ಇನ್ನೂ ಜಾಸ್ತಿ ಮುಂದುವರೆಯುವುದಕ್ಕೆ ಬೇರೆ ಯಾರಿಂದಲಾದರೂ ತನಿಖೆ ಮಾಡಿಸಿ ವರದಿ ತಯಾರಿಸಿ ನಮಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಈ ಹಿಂದುಳಿದ ಪ್ರದೇಶ ಮುಂದೆ ಹೋಗುವುದಿಲ್ಲ. ನಾವು ಹಿಂದೆ ಹೋಗುತ್ತೇವೆ. ನಮ್ಮ ಜಿಲ್ಲೆ ಹಿಂದೆ ಹೋಗುವಂಥ ಪರಿಸ್ಥಿತಿಯಾಗುತ್ತದೆ. ಅನ್ಯಾಯವಾಗಿ ಹಿಂದೆ ಹೋಗುವುದನ್ನು ತಪ್ಪಿಸಬೇಕು. ಯಾವ ರೀತಿ ಕುಡಿಯುವ ನೀರಿಗೆ ಬೇರೆ ಕ್ಷೇತ್ರಗಳಿಗೆ ಅನುದಾನ ಕೊಡುತ್ತೀರೋ, ಅದೇ ರೀತಿ ನಮ್ಮ ಕ್ಷೇತ್ರಕ್ಕೂ ಸಹ ಅನುದಾನ ಕೊಡಬೇಕು. ಅದೇ ರೀತಿ ಉಪ್ಪಿನಹಾಳ ಎನ್ನುವ ನದಿಯನ್ನು ತಿರುಗಿಸುವ ಯೋಜನೆಯನ್ನು ಕೈಬಿಡಬೇಕು ಎನ್ನುವುದನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

ಸಭಾಧ್ಯಕ್ಷರು: ಎ.ಎಸ್. ಪಾಟೀಲ್.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ): ಸನ್ಮಾನ್ಯ ಅಧ್ಯಕ್ಷರೆ, ಬರಗಾಲ, ಕುಡಿಯುವ ನೀರಿನ ಬಗ್ಗೆ ಬಹುಶಃ ಕಳೆದ 2 ವರ್ಷದಿಂದ ಭೀಕರವಾದ ಬರಗಾಲವಿದೆ. 2 ವರ್ಷಗಳಿಂದಲೂ ಕೂಡ ಕರ್ನಾಟಕ

ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ 100ಕ್ಕೆ 80% ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಆದರೆ ಮನುಷ್ಯನಿಗೆ ಮೂಲಭೂತವಾಗಿ ಬೇಕಾಗಿರುವುದು ಕುಡಿಯುವ ನೀರು. ಇವತ್ತು ಕುಡಿಯುವ ನೀರನ್ನು ಕೂಡಾ ಒದಗಿಸದೆ, ಇರುವಂಥ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಒಂದು ಕನಿಷ್ಠ ಅವಧಿಯಲ್ಲಿ ಇಡೀ ರಾಜ್ಯದ ಪ್ರತಿಯೊಂದು ಗ್ರಾಮಕ್ಕೆ ಪರಿಶುದ್ಧವಾದಂಥ, ಉತ್ತಮವಾದಂಥ ಕುಡಿಯುವ ನೀರನ್ನು ಕೊಡುತ್ತೇವೆ. ಅದಕ್ಕೆ ಎಷ್ಟೇ ಹಣ ಖರ್ಚಾಗಲಿ ಒಂದು plan of action ಮಾಡುತ್ತೇವೆ ಎನ್ನುವಂಥ ಸಂದೇಶ ವಿಧಾನಸಭೆಯಿಂದ ಹೋಗಬೇಕು. ಏಕೆಂದರೆ, ಇಷ್ಟು ವರ್ಷಗಳಾದರೂ ಕೂಡ ನಾವು ಕುಡಿಯುವುದಕ್ಕೇ ನೀರನ್ನು ಕೊಡುವುದಕ್ಕೆ ಆಗಿಲ್ಲವೆಂದರೆ ನಾವೇನು ಆಡಳಿತ ಮಾಡುತ್ತಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇದು ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾದಂಥ ವಿಚಾರ ಅಲ್ಲ. ಇಡೀ ರಾಜ್ಯದ ಬಹಳ ಗಂಭೀರವಾದಂಥ ಸಮಸ್ಯೆ. ಕುಡಿಯುವ ನೀರಿನ ಬಗ್ಗೆ ಒಂದು plan of action ಬೇಕು. ಎಲ್ಲೋ emergencyಗೆ ಸ್ವಲ್ಪ ದುಡ್ಡು ಕೊಡುವುದು, ನಾವು ಅಲ್ಲಿ ಬೋರ್ ಕೊರೆಸುವುದು, ಇಷ್ಟಕ್ಕೇ ಸೀಮಿತ ಅಲ್ಲ. ಇವತ್ತು ನಾವು 1 ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡನೆ ಮಾಡುವ ಸಂದರ್ಭದಲ್ಲೂ ಕೂಡ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುಂಥ ಜನರಿಗೆ ಕುಡಿಯುವ ನೀರನ್ನು ಕೊಡುವಂಥ ಒಂದು plan of action ನ್ನು ಕೂಡಾ ಮಾಡುತ್ತಿಲ್ಲವೆಂದರೆ ನಾವು ಯಾವ ರೀತಿ ಆಡಳಿತ ಮಾಡುತ್ತಿದ್ದೇವೆ? ನಮ್ಮ

ಮುಂದಾಲೋಚನೆ ಹೇಗಿದೆ ಎನ್ನುವುದನ್ನು ಕೂಡಾ ಇಲ್ಲಿ ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಎಲ್ಲದ್ದಕ್ಕೂ ದುಡ್ಡನ್ನು ಕಡಿಮೆ ಮಾಡಿ ಪರವಾಗಿಲ್ಲ, ಆದರೆ emergencyfirst ಕುಡಿಯುವ ನೀರಿಗೆ ಮಾತ್ರ ಮುಂದಿನ 2 ಅಥವಾ 3 ವರ್ಷಗಳಲ್ಲಿ ಇಡೀ ರಾಜ್ಯದ ಪ್ರತಿಯೊಂದು ಗ್ರಾಮಕ್ಕೆ ಪ್ರತಿಯೊಬ್ಬ ವ್ಯಕ್ತಿಗೆ ಅತ್ಯಂತ ಪರಿಶುದ್ಧವಾದಂಥ ಫಿಲ್ಟರ್ ನೀರನ್ನು, ಆರೋಗ್ಯಕ್ಕೆ ಒಳ್ಳೆಯದಾದಂಥ ನೀರನ್ನು ಕೊಡುತ್ತೇವೆ ಎನ್ನುವಂಥ ಸಂದೇಶವನ್ನು ನಾವು ವಿಧಾನಸಭೆಯಿಂದ ಜನರಿಗೆ ಕೊಡಬೇಕು ಎನ್ನುವಂಥ ಮೊದಲನೇ ಆಗ್ರಹವನ್ನು ನಾನು ಈ ಸರ್ಕಾರಕ್ಕೆ ಮಾಡುತ್ತಿದ್ದೇನೆ. ಎರಡನೆಯದಾಗಿ ಬರಗಾಲ ಬಂದು 2 ವರ್ಷಗಳಾಗಿದ್ದರೂ ಕೂಡ ಪಾಪ ರೈತರೆಲ್ಲಾ ಏನೋ ಬರಗಾಲ ಬಂದು ನಮ್ಮ ಬೆಳೆ ಹೋದರೆ ಕಷ್ಟ ಕಾಲದಲ್ಲಿ ಆ ಬೆಳೆ ವಿಮೆ ಹಣ ಬರುತ್ತದೆ ಎಂದು ಹೇಳಿ ಆ ಬೆಳೆ ವಿಮೆ ಹಣ ಕಟ್ಟಿದ್ದಾರೆ. ಆದರೆ 2 ವರ್ಷಗಳಿಂದಲೂ ಸಹ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡಿಲ್ಲ. ಏನಾಗಿದೆ ಸರ್ಕಾರ? ಸರ್ಕಾರ ಏನು ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ.

ಮೂರನೆಯದಾಗಿ ಇವರು ರೈತರ ಸಾಲ ಮನ್ನಾ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅವರಿಗೆ ಈವರೆಗೆ ಪರಿಹಾರ ಸಿಕ್ಕಿಲ್ಲ. ಸರ್ಕಾರ ಸುಮ್ಮನೆ ಘೋಷಣೆ ಮಾತ್ರ ಮಾಡುತ್ತಿದ್ದೆ. 3600 ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದೇವೆಂದು ಮೊನ್ನೆ ಕೂಡ ರಾಜ್ಯ ಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಈ ಬಗ್ಗೆ ನೀವು ಡಿ.ಸಿ.ಸಿ. ಬ್ಯಾಂಕ್ ಗಳಿಗೆ,

ಕೋ–ಆಪರೇಟಿವ್ ಬ್ಯಾಂಕ್‌ಗಳಿಗೆ instructions ಕೊಡಬೇಕಲ್ಲ? ನೀವು ದುಡ್ಡು ಕೊಡಬೇಕಲ್ಲ? ಇಲ್ಲದಿದ್ದರೆ ಪಾಪ ಅವರು ಮುಂದೆ ರೈತರಿಗೆ ಸಾಲ ಹೇಗೆ ಕೊಡುತ್ತಾರೆ? ಅವರಿಗೆ ಸಾಲ ಕೊಡಬೇಕಲ್ಲ, 25 ಸಾವಿರ ಸಾಲ ಮನ್ನಾ ಎಂದು ಘೋಷಣೆ ಮಾಡಿ ಬಿಟ್ಟಿರಿ. ಆ ಹಣವನ್ನು ನೀವು ಕೋ–ಆಪರೇಟಿವ್ ಸೊಸೈಟಿಗಳಿಗೆ ಕೊಟ್ಟಾಗ ಮಾತ್ರ ಅವರು ಮತ್ತೆ ಹೊಸ ಸಾಲವನ್ನು ರೈತರಿಗೆ ಕೊಡಲು ಸಾಧ್ಯವಾಗುತ್ತದೆ. ಅದನ್ನು ಈ ಸರ್ಕಾರ ಇವತ್ತಿಗೂ ಕೊಟ್ಟಿಲ್ಲ. ಮೂರನೆಯದಾಗಿ, ಕುಡಿಯುವ ನೀರು, ವಿಶೇಷವಾಗಿ ಕುಡಿಯುವ ನೀರು ಬಹಳ ಗಂಭೀರವಾದ ಸಮಸ್ಯೆ. ನನ್ನ ಕ್ಷೇತ್ರದಲ್ಲಿ ಈಗಾಗಲೇ ಪ್ರಾರಂಭವಾಗಿದೆ. ದೇವರ ಹಿಪ್ಪರಗಿ ನನ್ನ headquarters. ದೇವರ ಹಿಪ್ಪರಗಿ ಎಂಬ ಊರಿನಲ್ಲಿ ದೊಡ್ಡ ಗ್ರಾಮ ಅದು. ಆ ಊರಿನಲ್ಲಿ ಹೋದ ಸಾರಿ ನಾವು 28 ಬೋರ್‌ವೆಲ್ ಕೊರೆಸಿದ್ದೇವೆ. ಆದರೂ ಕೂಡ ಸಂಪೂರ್ಣವಾಗಿ ಕುಡಿಯುವ ನೀರು ಕೊಡಲು ಸಾಧ್ಯವಾಗಿಲ್ಲ. ಈ ಬಾರಿ ಈಗಾಗಲೇ ನೀರಿನ ಸಮಸ್ಯೆ ಪ್ರಾರಂಭವಾಗಿದೆ. ನಿಮ್ಮ multi-village schemes ಗಳಿಗೆ ಏಕೆ ಐದ್ಯೆದು ವರ್ಷ ತೆಗೆದುಕೊಳ್ಳುತ್ತೀರಿ? Multi-village schemes, ರಾಜೀವ್ ಗಾಂಧಿ ಬಹು ಹಳ್ಳಿಗಳ ಕುಡಿಯುವ ನೀರಿನ ಯೋಜನೆ ಮಾಡಿ ಮುಗಿಸುವುದಕ್ಕೆ ಐದ್ಯೆದು ವರ್ಷ ಬೇಕೇನು? ಮಾನ್ಯ ಮಂತ್ರಿಗಳಾದ ಈಶ್ವರಪ್ಪ ರವರನ್ನು ಕೇಳುತ್ತೇನೆ. ಏಕೆಂದರೆ, ಅವರಿಗೆ ನೀರಾವರಿಯ ಬಗ್ಗೆ ಬಹಳ ಕಳಕಳಿ ಇದೆ. ಕೆರೆಗಳನ್ನು ತುಂಬಿಸುವ ಯೋಜನೆಗಳ ಬಗ್ಗೆ ಆಗ ಇಚ್ಛಾಶಕ್ತಿ ಅವರಿಗಿತ್ತು. ಅವರಲ್ಲಿ ನಾನು ವಿನಂತಿ

ಮಾಡುತ್ತೇನೆ. Multi-village schemes ನನ್ನ ಕ್ಷೇತ್ರದಲ್ಲಿ 9 project ಗಳಿಗೆ ಮಂಜೂರಾತಿ ಇದೆ. 9 project ಗಳಲ್ಲಿ 1 project ನಲ್ಲಿ ಒಂದು ಜಾಗ ಇಲ್ಲಿಂದ ಮಂಜೂರಾತಿ ಆಗಿ ಬರಬೇಕಾದರೆ 3 ವರ್ಷ ಬೇಕಾ ಸ್ವಾಮಿ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಸೆಕ್ರೆಟರಿ ಮಟ್ಟದಲ್ಲಿ ಏನು ಕೆಲಸ ಮಾಡುತ್ತಿದ್ದಾರೆ? ಒಂದು ಜಾಗ, Narayanapura left bank canal ಬರುತ್ತದೆ, canal ಪಕ್ಕದಲ್ಲಿ KBJNL 50 ಎಕರೆ land ಇದೆ. ಅದನ್ನು ಕೂಡಲು ಮೂರುವರೆ ವರ್ಷ ತೆಗೆದುಕೊಂಡರು. ಮೊನ್ನೆ ಮೊನ್ನೆ ಕೊಟ್ಟಿದ್ದಾರೆ. ಇನ್ನೂ ಹಣಕಾಸು ಇಲಾಖೆಯಲ್ಲಿ ಇಟ್ಟುಕೊಂಡು ಕುಳಿತಿದ್ದಾರೆ. ಯಾವ ಯುಗದಲ್ಲಿದ್ದೇವೆ ನಾವು? ನನ್ನ ಕ್ಷೇತ್ರದಲ್ಲಿ 219 ಕೋಟಿ ರೂ.ಗಳ multi-village scheme projects sanction ಆಗಿದೆ. ಒಂದೇ ಒಂದು project ಅನ್ನು ಕೂಡಾ 5 ವರ್ಷದಲ್ಲಿ ಮಾಡುವುದಕ್ಕೆ ಆಗಿಲ್ಲ. ಹೋದ ಬಾರಿ ಹಿಂದಿನ ಸರ್ಕಾರ ಇದ್ದಾಗ ಏನೋ sanction ಮಾಡಿದ project ನಲ್ಲಿ 23 ಹಳ್ಳಿಗಳಿಗೆ ಇವತ್ತೂ ನಾನು ಕುಡಿಯುವ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ನಿಮ್ಮ ಮೇಲ್ಮಟ್ಟದ ಅಧಿಕಾರಿಗಳು ಏನಿದ್ದಾರೆ ಇಲ್ಲೆಲ್ಲಾ ಅವರಿಗೆ ಒಂದು letter ಬಂದರೆ 3 ವರ್ಷ ಬೇಕು ಆ ಅಪ್ರೂಲ್ ಕೊಡಲು. Multi-village scheme ಅನ್ನು ತಕ್ಷಣ ಕೊಡಲಿ ಒಂದು ವರ್ಷದಲ್ಲಿ ಮಾಡುತ್ತೇವೆಂದರೆ, ಅದಕ್ಕೆ ಪರಿಹಾರ ಸಿಗುತ್ತದೆ. ನಮ್ಮ ಭಾಗದಲ್ಲಿ Indi left canal ಎಂದು ಬರುತ್ತದೆ. ಅದು ಮೇಲ್ಭಾಗದಲ್ಲಿದೆ. ಕೆಳಭಾಗದಲ್ಲಿ ಕೆಲವು ಕೆರೆಗಳಿವೆ. ಅಲ್ಲಿ ಸಿಂಧಗಿ ಭಾಗದವರಾದ ಭೂಸನೂರವರಿಗೆ ಮತ್ತು ನನಗೆ

ಸೇರಿ ಇಬ್ಬರ ಕ್ಷೇತ್ರಕ್ಕೂ ಬರುತ್ತದೆ. ಅವರಿಗೆ ಗೊತ್ತಿದೆ. ಅಲ್ಲಿ ಕೆರೆಗಳ ಮೇಲೆ ಕಾಲುವೆ ಹೋಗುತ್ತದೆ. ಕಾಲುವೆಯ ತುಂಬಾ ನೀರು ಹೋಗುತ್ತದೆ. ಆದರೂ ಇಲ್ಲಿ ಕುಡಿಯುವ ನೀರಿಲ್ಲ. ಜನರು ಈಗ 2-3 ಕಿ.ಮೀ. ಇದೆ ನಾವೇ ಕಾಲುವೆ ಮಾಡಿಕೊಂಡು ಕೆರೆ ತುಂಬಿಸಿಕೊಳ್ಳುತ್ತೇವೆ, ನಮಗೆ ಕುಡಿಯುವ ನೀರು ಬೇಕು ಎಂಬ ಮಟ್ಟಕ್ಕೆ ಬಂದಿದ್ದಾರೆ. ಅಂತಹ ಕಡೆ ನಾನು approval ಕೇಳಿದ್ದೇನೆ. ದಯಮಾಡಿ ಸಣ್ಣದೊಂದು pipeline ಮಾಡಿ ಕೊಡಿ. ಬೇಸಿಗೆಯಲ್ಲಿ ಆ ಕೆರೆಗಳನ್ನು ತುಂಬಿ ಕೊಟ್ಟು ಬಿಡಿ ಸಾಕು. ಅದರಿಂದ ಸುತ್ತಮುತ್ತಲ 20 ಹಳ್ಳಿಗಳಿಗೆ ಕುಡಿಯುವ ನೀರಾಗುತ್ತದೆ. ಅದಕ್ಕೆ KBJNL ಅಧಿಕಾರಿಗಳು 'No, ಮಾಡಲಾಗುವುದಿಲ್ಲ' ಎನ್ನುತ್ತಾರೆ. ಈ ರೀತಿಯಾದ ಕಾನೂನು ಪಾಠಗಳನ್ನು ಹೇಳುತ್ತಾ ಜನರಿಗೆ ಕುಡಿಯುವುದಕ್ಕೆ ನೀರು ಕೊಡದಿದ್ದರೆ ಜನ ಒಂದು ದಿನ ಏನು ಮಾಡುತ್ತಾರೆ ಗೊತ್ತೇನು? ಜನರು ಕಾಲುವೆಗಳನ್ನು ಅವರೇ ಹೊಡೆದು ಕುಡಿಯುವ ನೀರನ್ನು ತೆಗೆದುಕೊಳ್ಳುವ ಸ್ಥಿತಿ ಬರುತ್ತದೆ. ನಾನು ಅದಕ್ಕಾಗಿ ಈಶ್ವರಪ್ಪ ರವರಲ್ಲಿ ವಿನಂತಿ ಮಾಡುತ್ತೇನೆ. ನಿಮ್ಮ ಎಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಸ್ಥಳೀಯ ಎಂ.ಎಲ್.ಎ.ಗಳನ್ನು ಕರೆದು ಸಭೆ ಮಾಡಲು ಹೇಳಿ, ಆ ರೀತಿ ಒಂದು ಸಭೆಯನ್ನಾದರೂ ಮಾಡಿದ್ದಾರಾ ಕೇಳಿ? ಎರಡು ತಿಂಗಳಾಯಿತು. ಯಾವ ಉಸ್ತುವಾರಿ ಸಚಿವರು ಸಭೆ ಕರೆದಿದ್ದಾರೆ? ನಮ್ಮನ್ನೂ ಕರೆಸಿ, ಡಿ.ಸಿ. ಹಾಗೂ ತಹಶೀಲ್ದಾರ್ ರವರುಗಳನ್ನು ಕರೆಯಿರಿ. ಯಾವ-ಯಾವ ಊರಿನಲ್ಲಿ ಏನು ಸಮಸ್ಯೆ ಇದೆ, ಎಂಬ ಪಟ್ಟಿ ತೆಗೆದುಕೊಳ್ಳಿ-ಕ್ಷೇತ್ರವಾರು, ಒಂದು ಕ್ಷೇತ್ರದಲ್ಲಿ

ಹೆಚ್ಚು ಒಂದು ಕ್ಷೇತ್ರದಲ್ಲಿ ಕಡಿಮೆ ಬೇಕಾಗಬಹುದು. ಒಂದು ಕ್ಷೇತ್ರಕ್ಕೆ 2 ಕೋಟಿ ರೂ. ಬೇಕಾ? ಕೊಡಿ. ಇನ್ನೊಂದು ಕ್ಷೇತ್ರಕ್ಕೆ ಒಂದು ಕೋಟಿ ರೂ. ಬೇಕಾ? ಕೊಡಿ. ಏಕೆಂದರೆ, ಮುಂದೆ ನಾವು ಚುನಾವಣೆಗೆ ಹೋಗಬೇಕಾಗಿದೆ. ನಾವು ನೀವು ಜನರ ಬಳಿ ಹೋಗಿ ಮತ ಕೇಳಬೇಕು. ಜನರು ಯಾವ ಪರಿಸ್ಥಿತಿಗೆ ಬರುತ್ತಾರೆಂದರೆ, ಮತ ಕೇಳಲು ಹೋದರೆ ನಮ್ಮನ್ನು ಉಗಿದು ಮೊದಲು ನೀರು ಕೊಡಿ, ನಂತರ ಮತ ಕೇಳಲು ಬನ್ನಿ ಎಂದು ಓಡಿಸುತ್ತಾರೆ. ಕೇವಲ ಕಾಂಗ್ರೆಸ್ ಪಕ್ಷದ ಶಾಸಕರಷ್ಟೆ ಅಲ್ಲ. ಇಡೀ ರಾಜ್ಯದ ಜನರು ಇವತ್ತು ಏನು ಅನುಭವಿಸುತ್ತಿದ್ದಾರೆ, ಅದಕ್ಕೆ ಪರಿಹಾರ ಸಿಗಬೇಕಾದರೆ ತಕ್ಷಣ ಯಾವ ಯಾವ ಕ್ಷೇತ್ರದಲ್ಲಿ ಸಮಸ್ಯೆ ಇದೆ, ಆಯಾ ಜಿಲ್ಲೆಯ ಉಸ್ತುವಾರಿ ಸಚಿವರು ಒಂದು ಸಭೆ ಕರೆದು ಪರಿಹಾರ ಮಾಡಿ ತಕ್ಷಣ ದುಡ್ಡು ಕೊಡಬೇಕು. ಈ ಅಧಿವೇಶನ ಮುಗಿದ ಮೇಲೆ ನಿಮ್ಮನ್ನು ಮಾತನಾಡಿಸಲು ಸಮಯ ಸಿಗುವುದಿಲ್ಲ. ಏಕೆಂದರೆ, ನಾವುಗಳೆಲ್ಲಾ ಚುನಾವಣೆಗೆ ಹೋಗಬೇಕು. ನೀವು ಹೋಗಬೇಕು. ಇನ್ನೊಂದು ಇದೆ. ನಮ್ಮ ಸಾಹೇಬರು ನಮ್ಮ ಜಿಲ್ಲೆಗೆ ಬರುತ್ತಾರೆಂದು ತಿಳಿಯಿತು. ಆದ್ದರಿಂದ ನಾನು ಈಶ್ವರಪ್ಪ ಸಾಹೇಬರಲ್ಲಿ ಹೇಳುತ್ತೇನೆ. ನೀವು ನಮ್ಮ ಜಿಲ್ಲೆಗೆ ಬರುವುದಾದರೆ, ಮೊದಲು ಕುಡಿಯುವುದಕ್ಕೆ ನೀರು ಜಾಸ್ತಿ ಕೊಟ್ಟು ಬಂದರೆ ನಿಮ್ಮನ್ನು ಜನರು ಸ್ವಾಗತ ಮಾಡಬಹುದು. ನಮಗೆ ಕುಡಿಯುವ ನೀರಿನ ಗಂಭೀರ ಸಮಸ್ಯೆ ಇದೆ. ಕನಿಷ್ಠ 2–2 ಕೋಟಿ ರೂ. ನಮ್ಮ ಕ್ಷೇತ್ರಗಳಿಗೆ ಕೊಡಬೇಕೆಂಬ ವಿನಂತಿಯನ್ನು ಅವರಲ್ಲಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಶ್ರೀ ಗೋಪಾಲ ಭಂಡಾರಿ ಯವರು ಮಾತನಾಡಿ,

ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರಾದ ಶ್ರೀ ಖಾದರ್ ರವರು ಮಾತನಾಡಿದರು. ನಮ್ಮ ಕರಾವಳಿ ಜಿಲ್ಲೆಯನ್ನು ನಂಜುಂಡಪ್ಪ ವರದಿಯ ಆಧಾರದಲ್ಲಿ ಮುಂದುವರೆದ ತಾಲ್ಲೂಕು ಎಂದು ತಮ್ಮ ಜಿಲ್ಲೆಯನ್ನು ಕೂಡಾ ಅವರ ಪಟ್ಟಿಯಲ್ಲಿ ಸೇರಿಸಿಕೊಂಡಿದ್ದಾರೆ. ನಮಗೆ ವಿಶೇಷ ಅನುದಾನ ಇಲ್ಲ. ಬರ ಪ್ರಸ್ತಾಪವೇ ಇಲ್ಲ. ಆದರೂ ನಮ್ಮಲ್ಲಿದ್ದಷ್ಟು ಬರ ಬೇರೆಲ್ಲಿಯೂ ಇಲ್ಲ ನನ್ನ ದೃಷ್ಟಿಯಲ್ಲಿ. ನಮ್ಮ ಜಿಲ್ಲೆಯಲ್ಲಿ ವಿಪರೀತ ಮಳೆ ಬರುತ್ತದೆಂಬುದನ್ನು ನಾನು ಒಪ್ಪುತ್ತೇನೆ.

ಈ ಕಡೆ ಒಂದು ವರ್ಷ ಬರುವಷ್ಟು ಮಳೆ ನಮ್ಮ ಕಡೆ ಒಂದು ದಿವಸದಲ್ಲಿ ಬರುತ್ತದೆ. ಆದರೆ ಶೇಕಡ 95 ರಷ್ಟು ನೀರು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಿದೆ. ಕುಡಿಯುವುಕ್ಕೆ ನೀರು ಸಿಗುತ್ತಿಲ್ಲ. ಕರಾವಳಿ ಪ್ರದೇಶದಲ್ಲಿ ಎಲ್ಲಿ ಬಾವಿ ತೋಡಿದರೂ ಉಪ್ಪು ನೀರು ಸಿಗುತ್ತದೆ. ಅದನ್ನು ಕುಡಿಯಲು ಆಗುವುದಿಲ್ಲ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾದ್ಯಂತ ಈ ಸಮಸ್ಯೆ ಇದೆ. ನಮ್ಮಲ್ಲಿ ಜನವರಿ ಪ್ರಾರಂಭವಾದ ಕೂಡಲೆ ಎಲ್ಲಾ ಬಾವಿಗಳಲ್ಲಿ ನೀರಿಲ್ಲ. ನಮ್ಮ ಜಿಲ್ಲೆಯಲ್ಲಿ ತೆರೆದ ಬಾವಿಯ ನೀರನ್ನು ಬಹಳ ಉಪಯೋಗ ಮಾಡುತ್ತೇವೆ. ಯಾವ ತೆರೆದ ಬಾವಿಯಲ್ಲಿಯೂ ಕೂಡಾ ಕುಡಿಯಲು ನೀರು ಇಲ್ಲದ ಪರಿಸ್ಥಿತಿ ಆಗಿದೆ. ಅದಕ್ಕೆ ತಕ್ಷಣ ವ್ಯವಸ್ಥೆ ಮಾಡೋಣವೆಂದರೆ, taskforce ನಲ್ಲಿ ನಮ್ಮ ಜಿಲ್ಲೆಗೆ ಕನಿಷ್ಠ ಅನುದಾನ ಕೊಟ್ಟಿದ್ದಾರೆ. ಮಳೆ ಬರುತ್ತದೆ ಎಂಬ ಕಾರಣಕ್ಕೆ ನಮಗೆ ಕುಡಿಯುವ ನೀರು ಸಿಗುತ್ತದೆ ಎಂಬುದನ್ನು ಖಂಡಿತ ಒಪ್ಪಿಕೊಳ್ಳುವುದಕ್ಕೆ

ಸಾಧ್ಯವಿಲ್ಲ. ಮಳೆ ಬರುತ್ತದೆ ನಿಜ. ನಮ್ಮ ಜಿಲ್ಲೆಯಲ್ಲಿ ಮಳೆಯ ನೀರೆಲ್ಲವೂ ವ್ಯರ್ಥವಾಗುತ್ತದೆ. ನಮ್ಮ ಜಿಲ್ಲೆಗೆ ಪಶ್ಚಿಮ ವಾಹಿನಿ ಎಂಬ ನದಿಗಳನ್ನು ಜೋಡಣೆ ಮಾಡುವ ಒಂದು ವ್ಯವಸ್ಥೆ ಇತ್ತು. ಕೆಲವು ವರ್ಷಗಳ ಹಿಂದೆ ಅದಕ್ಕಾಗಿ ಒಂದು ಅಂದಾಜು ಪಟ್ಟಿ ತಯಾರು ಮಾಡಿ ಒಂದು ದೊಡ್ಡ plan ಮಾಡಿ ಭಾರತ ಸರ್ಕಾರ ಅನುದಾನವನ್ನು ಪಡೆಯುವ ಮುಖೇನ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಈ ಎರಡು ಮೂರು ಜಿಲ್ಲೆಯ ನದಿಗಳನ್ನು ಜೋಡಣೆ ಮಾಡುವ ಮುಖಾಂತರ ಅಂತರ್ಜಲ ಮಟ್ಟವನ್ನು ಎತ್ತರಿಸುವುದರ ವ್ಯವಸ್ಥೆಯ ಜೊತೆಗೆ ಕುಡಿಯುವ ನೀರು ಹಾಗೂ ಕೃಷಿಗೆ ಕೂಡಾ ವ್ಯವಸ್ಥೆ ಮಾಡುವ ಯೋಜನೆ ಇತ್ತು. ಅದನ್ನಾದರೂ ಮಾಡಬಹುದಾಗಿತ್ತು. ಯಾವುದೇ ಭಾರಿ ನೀರಾವರಿ ಯೋಜನೆ ನಮ್ಮ ಈ ಮೂರು ಜಿಲ್ಲೆಗಳಲ್ಲಿ ಇಲ್ಲವೇ ಇಲ್ಲ. ಆದರೆ ಕನಿಷ್ಠ ಈ ಯೋಜನೆಯನ್ನು ಮಾಡಿದ್ದರೆ ಕುಡಿಯುವ ನೀರಿಗೆ ಪ್ರಯೋಜನ ಬರುತ್ತಿತ್ತು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಕೊಳವೆ ಬಾವಿಗಳಲ್ಲಿ ನಿನ್ನೆ ನೀರು ಬಂದರೆ ಇವತ್ತು ಬರುವುದಿಲ್ಲ. ಪಂಚಾಯಿತಿಗಳಲ್ಲಿರುವ ಎಲ್ಲಾ ನೀರು ಸರಬರಾಜು ಯೋಜನೆಗಳು ಬರಿ ಕೊಳವೆ ಬಾವಿಗಳನ್ನು ಅವಲಂಬಿಸಿಕೊಂಡಿರುತ್ತವೆ. ಕೊಳವೆ ಬಾವಿಗಳು sudden ಆಗಿ dry ಆಗಿ ಬಿಡುತ್ತವೆ. Alternative well ಕೊಡೋಣ ಎಂದರೆ, ನಮ್ಮಲ್ಲಿ ಹಣವಿಲ್ಲ. ನಮಗೆ ಹಣ ಬಹಳ ಕಡಿಮೆ ಬರುತ್ತದೆ. ಅದಕ್ಕೇನಾದರೂ ತಕ್ಷಣ ವ್ಯವಸ್ಥೆ ಮಾಡಬೇಕು. ಕಳೆದ ಬಾರಿ ನಮ್ಮ ಗ್ರಾಮೀಣ ಭಾಗದ ಪ್ರದೇಶಗಳಿಗೆ

ಟ್ಯಾಂಕರ್‌ನಲ್ಲಿ ನೀರು ಕೊಟ್ಟಿದ್ದೇವೆ. ಗ್ರಾಮ ಪಂಚಾಯಿತಿಯವರು ಟ್ಯಾಂಕರ್ ಮೂಲಕ ನೀರು ಕೊಟ್ಟರೆ, ಅದಕ್ಕೆ ಹಣ ಕೊಡಲು ಈವರೆಗೆ ಆಗಲಿಲ್ಲ. ಜೊತೆಗೆ ನಮ್ಮ ತಾಲ್ಲೂಕಿನಲ್ಲಿ ಎರಡು ಬಹುಗ್ರಾಮ ಯೋಜನೆಗಳಿವೆ. ಒಂದು ನಿಟ್ಟೆ ಮತ್ತು ಇನ್ನೊಂದು ಹೆಬ್ರಿ. ಎರಡೂ ಯೋಜನೆಗಳನ್ನು ಕೂಡಾ ನಮ್ಮ ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗದವರ ಮಜ್ರಿಯಲ್ಲಿ ಆ ಕಾಮಗಾರಿಗಳು ಕಳೆದ ಮೂರ್ನಾಲ್ಕು ವರ್ಷಗಳಿಂದ ಆಗದೆ, ಒಬ್ಬ ಗುತ್ತಿಗೆದಾರನು ಓಡಿ ಹೋಗಿ ಎರಡೂ ಕಾಮಗಾರಿಗಳು ಅರ್ಧಂಬರ್ಧವಾಗಿದೆ. ಎರಡನೆ ಹಂತದ ಯೋಜನೆಯನ್ನು ಕೂಡಾ ಮಂಜೂರಾತಿ ಪ್ರಸ್ತಾಪನೆ ಆಗಿ ಸರ್ಕಾರದ ಮುಂದೆ ಮಂಜೂರಾತಿ ಆಗದೆ ಇನ್ನೂ ಕೂಡಾ pending ಇದೆ ಮಂಜೂರಾಗಿದೆ, ಮಂಜೂರಾಗಿದೆ ಎಂಬ ಮಾತನ್ನು ಹೇಳುತ್ತಾ ಬರುತ್ತಿದ್ದಾರೆ. ಅದು ಏನೇ ಇದ್ದರೂ ಕೂಡಾ 10 ಬಹುಗ್ರಾಮ ಯೋಜನೆಗಳನ್ನು, ನಮ್ಮಲ್ಲಿ natural sources ಇದೆ. ಪಶ್ಚಿಮ ಘಟ್ಟದಿಂದ ಹರಿಯುವ ನದಿಗಳನ್ನು, ಅದರಿಂದ ಬಹು ಗ್ರಾಮ ಯೋಜನೆಗಳನ್ನು ಮಾಡಿ, ಬಹುತೇಕ ಗ್ರಾಮಗಳಿಗೆ ಕುಡಿಯುವ ನೀರನ ಯೋಜನೆ ಕೊಡಬಹುದು ಎಂದು ಯೋಜನೆ ತಯಾರು ಮಾಡಿ ಕಳುಹಿಸಿದರೆ, ಅದು ಇವತ್ತು ಸರ್ಕಾರದ ಮುಂದೆ pending ಇದೆ. 10 ಬಹು ಗ್ರಾಮ ಯೋಜನೆಗಳು ಕೂಡಾ pending ಇದೆ. ನಮ್ಮ ಜಿಲ್ಲೆಯಲ್ಲಿ ಒಂದೂ ಕೂಡಾ ಮಂಜೂರಾಗಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ ಆ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆವು. ತಕ್ಷಣ

ಮಾಡಿಸುತ್ತೇವೆ, ಅದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದರು. ಅದು ಕೂಡಾ ಆಗಿಲ್ಲ. ಇದರ ಜೊತೆಗೆ ವಿದ್ಯುತ್ ನಮ್ಮ ತಾಲ್ಲೂಕಿನಲ್ಲಿ U.P.C.L ಯಿಂದ ಬರುವಂಥದ್ದು, ಹೋಗುವಂಥದ್ದು, 11–12 line ಇದೆ. ನಮ್ಮ ತಾಲ್ಲೂಕಿನ ಬಹುತೇಕ ಜಾಗವೆಲ್ಲಾ ಈ ಲೈನ್‌ಗಳಿಗೆ ಹೋಗಿದೆ. ಅಲ್ಲಿಂದ ಬರುವ distribution line, supply line ಗಳಿಗೆ ಹೋಗಿದೆ. ಜಾಗವಿಲ್ಲ. ಎಲ್ಲವೂ ಕೂಡಾ ನಮ್ಮಲ್ಲಿ KMR sub-station ಇರುವುದರಿಂದ UPCL ಯಿಂದ ಬರುವಂತಹುದು. ಅಲ್ಲಿಗೆ ಬಂದು ಹಾಸನಕ್ಕೆ ಇರಬಹುದು. ಬೇರೆ ಬೇರೆ ಭಾಗಗಳಿಗೆ ಹೋಗುವಂತಹುದು ಬರುತ್ತಿದೆ. ಆದರೆ, ಅಲ್ಲಿಯೂ ಕೂಡಾ ವಿದ್ಯುತ್ ಸ್ಥಗಿತವಾಗಿದೆ.

ಒಂದೆರೆಡು ಗಂಟೆಗಳ ಕಾಲವೂ ವಿದ್ಯುತ್ ಸರಬರಾಜು ಇರುವುದಿಲ್ಲ. ಕುಡಿಯುವ ನೀರನ್ನು ಸರಬರಾಜು ಮಾಡಲಿಕ್ಕೆ ಯಾವ ಬೋರ್‌ವೆಲ್‌ಗಳ ಮೋಟರ್‌ಗಳೂ ಕೂಡ ಚಾಲೂ ಆಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಹೀಗಿದ್ದಾಗ ನಾವು ಏನು ಮಾಡಬೇಕು? ಇದಕ್ಕೆ ನನ್ನದೊಂದು ಸಲಹೆ ಇದೆ. ಕುದುರೆ ಮುಖ ಕಬ್ಬಿಣ ಅದಿರು ಕಾರ್ಖಾನೆ ಸ್ಥಗಿತಗೊಂಡಿದೆ. ಅಲ್ಲಿ ಲಕ್ಯಾ ಡ್ಯಾಮ್ ಇದೆ. ಅದರ ಬಗ್ಗೆ ಬಹುಶಃ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಆ ಲಕ್ಯಾ ಡ್ಯಾಮ್‌ನಿಂದ ಮಂಗಳೂರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕೆಂದು ಕಳೆದ ಬಾರಿ ಮಂಗಳೂರು ಮಹಾನಗರ ಪಾಲಿಕೆಯವರು ಕೇಳಿದ್ದರು. ಆ ಸರಬರಾಜು

ಮಾರ್ಗ ನಮ್ಮ ಮತಕ್ಷೇತ್ರದ ಮೂಲಕವೇ ಹೋಗುತ್ತದೆ. ಕಾರ್ಕಳ, ಬೆಳ್ತಂಗಡಿ, ಮೂಡಬಿದರೆ ಮಾರ್ಗವಾಗಿ ಅದು ಹೋಗುತ್ತದೆ. ಈಗಾಗಲೇ ಈ ಭಾಗದಲ್ಲಿ ಅವರು ಹಾಕಿದಂತಹ ಲೈನ್ ಇದೆ. ಆದ್ದರಿಂದ, ಅಲ್ಲಿಂದ ನೇರವಾಗಿ ಕುಡಿಯುವ ನೀರು ಸರಬರಾಜು ಆದರೆ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸರಬರಾಜಿನಲ್ಲಿ ಸುಧಾರಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ನೀರು ಇದೆ. ಆ ನೀರನ್ನು ಕುಡಿಯಲಿಕ್ಕೆ ಸರಬರಾಜು ಮಾಡುವಂತಹ ವ್ಯವಸ್ಥೆ ಮಾಡಲಿಕ್ಕೆ ಯೋಚನೆ ಮಾಡಿದರೆ, ಮಂಗಳೂರು ಮಹಾನಗರ ಪಾಲಿಕೆ, ಕಾರ್ಕಳ, ಬೆಳ್ತಂಗಡಿ ಮತ್ತು ಮೂಡಬಿದರೆಯ ಕೆಲವು ಭಾಗಗಳಿಗಾದರೂ ಕುಡಿಯುವ ನೀರನ್ನು ಸರಬರಾಜು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಾಗ, 10 ಬಹು ಗ್ರಾಮ ಯೋಜನೆಯ ಪ್ರಸ್ತಾವನೆ ಏನಿದೆಯೋ, ಅದಕ್ಕೆ ತಕ್ಷಣವೇ ಮಂಜೂರಾತಿ ಕೊಡುತ್ತೇನೆಂದು ಹೇಳಿದ್ದರು. ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಅದನ್ನು ಮಂಜೂರು ಮಾಡಬೇಕು. ನಮ್ಮಲ್ಲಿ ಈಗಾಗಲೇ ಜಾರಿಯಲ್ಲಿ ಇರುವಂತಹ ನಿಟ್ಟೆ ಮತ್ತು ಹೆಬ್ರಿ ಯೋಜನೆಗಳಲ್ಲಿ ಶೇಕಡ 75 ರಷ್ಟು ಕೆಲಸವಾಗಿದೆ. ಒಂದು ಯೋಜನೆಯಲ್ಲಿ ಶೇಕಡ 30ರಷ್ಟು ಕೆಲಸವಾಗಿ ಗುತ್ತಿಗೆದಾರ ಪರಾರಿಯಾಗಿದ್ದಾನೆ. ಬದಲಿ ಗುತ್ತಿಗೆದಾರರನ್ನು ನೇಮಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅನೇಕ ಬಾರಿ ಕಳುಹಿಸಿದ್ದೇವೆ. ಇರುವ ಟೆಂಡರ್ ಅನ್ನು cancel ಮಾಡಿ, ಹೊಸದಾಗಿ ಟೆಂಡರ್ ಕರೆದರೆ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಲ್ಲಿಯಾದರೂ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ಹೇಳಬಯಸುತ್ತೇನೆ. ಕರಾವಳಿ

ಬರಗಾಲ ಪೀಡಿತ ಪ್ರದೇಶವಲ್ಲ ಎನ್ನುವ ಒಂದೇ ಒಂದು ಕಾರಣಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಸಮಸ್ಯೆ ಉಂಟು ಮಾಡಬಾರದು. ನಮ್ಮಲ್ಲಿ ಇರುವಷ್ಟು ಕುಡಿಯುವ ನೀರಿನ ಸಮಸ್ಯೆ ಬೇರೆಲ್ಲೂ ಕೂಡ ಇಲ್ಲ. ಆದ್ದರಿಂದ, ದಯವಿಟ್ಟು Task-force ಗೆ ಕನಿಷ್ಠ 2 ಕೋಟಿ ರೂ. ಗಳನ್ನು ಈ ವರ್ಷವಾದರೂ ಬಿಡುಗಡೆ ಮಾಡಬೇಕು. ಇನ್ನೂವರೆಗೂ ಅದನ್ನು ಕೊಟ್ಟಿಲ್ಲ. ಈ ಬಾರಿಯಾದರೂ ನಮ್ಮ ಪ್ರದೇಶಕ್ಕೆ ಸರ್ಕಾರ ತಕ್ಷಣ ಹಣ ಬಿಡುಗಡೆ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಹಾಯ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ವಿನಂತಿಯನ್ನು ಮಾಡುತ್ತೇನೆ. ಪಶ್ಚಿಮ ವಾಹಿನಿ ಯೋಜನೆ ಏನಿದೆ, ಆ ಯೋಜನೆಯನ್ನು ಪುನಃ ಸರ್ಕಾರ ಮಂಜೂರು ಮಾಡಿ, ಅದಕ್ಕೆ ಅನುದಾನವನ್ನು ಕೊಟ್ಟು, ನಮ್ಮ ಜಿಲ್ಲೆಗೆ ಸ್ವಲ್ಪ ಹಸಿರು ಕ್ರಾಂತಿ ಮತ್ತು ಕುಡಿಯುವುದಕ್ಕೆ ನೀರನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ. ನಮ್ಮ ಜಿಲ್ಲೆಯ ಜನ ಬೇರೇನೂ ಕೇಳುವುದಿಲ್ಲ. ನಮ್ಮ ಜಿಲ್ಲೆಯ ಜನ ಕುಡಿಯುವ ನೀರು, ರಸ್ತೆ ಮತ್ತು ಶಾಲೆಗಳು, ಇಷ್ಟನ್ನು ಮಾತ್ರವೇ ಕೇಳುತ್ತಾರೆ. ಆದ್ದರಿಂದ ಇದನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ (ಕುಷ್ಟಗಿ):- ಮಾನ್ಯ ಅಧ್ಯಕ್ಷರೆ, ಬರದ ವಿಷಯದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಪ್ರಥಮದಲ್ಲಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ರಾಜ್ಯ ಎರಡು ವರ್ಷಗಳಿಂದ ಸತತ ಬರಗಾಲವನ್ನು ಅನುಭವಿಸುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿರುವುದೇ ಆಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಅಧಿಕಾರಿಗಳಿಗಾಗಲಿ ಮತ್ತು ಸರ್ಕಾರದ ಆಡಳಿತವನ್ನು ನಡೆಸತಕ್ಕವರಿಗಾಗಲಿ ಚಿಂತನೆ ಇಲ್ಲವೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ, ಇಡೀ ರಾಜ್ಯದಲ್ಲಿ ಇಷ್ಟೊಂದು ಭೀಕರ ಬರಗಾಲ ಇದ್ದಾಗ, ನಾವು ಜನರಿಗೆ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಕುಡಿಯುವ ನೀರನ್ನು ಕೊಡದೇ ಹೋದರೆ, ಮತ್ತೆ ಇನ್ಯಾವ ಸೌಕರ್ಯವನ್ನು ಕೊಡಲಿಕ್ಕಾಗುತ್ತದೆ? ಆ ಬಗ್ಗೆ ಸರ್ಕಾರ ಸ್ವಲ್ಪ ಚಿಂತನೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ ಮಳೆಯಾಗಿದೆ. ರಾಜ್ಯದಲ್ಲಿ ಇಡೀ 154 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಗುರುತಿಸಿದ್ದಾರೆ, ಅದರಲ್ಲಿ ಕುಷ್ಟಗಿ ತಾಲ್ಲೂಕು ಕೊನೆಯ ತಾಲ್ಲೂಕಾಗಿದೆ. ರಾಜ್ಯದಲ್ಲಿಯೇ ಕುಷ್ಟಗಿ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆ ಮಳೆಯಾಗಿದೆ. ಇವತ್ತು ಇಷ್ಟೊಂದು ಬರಗಾಲ ಇದೆ. ನಾನೂ ಕೂಡ 18 ವರ್ಷಗಳಿಂದ ಸತತವಾಗಿ ಶಾಸಕನಾಗಿದ್ದೇನೆ. ರಾಜ್ಯದಲ್ಲಿ ಬರ ಇದ್ದಾಗ, ಕುಡಿಯುವ ನೀರಿಗೆ ಯಾವ ಸರ್ಕಾರ ಕೂಡ ಹಣವನ್ನು ಕಡಿಮೆ

ಕೊಟ್ಟಿರತಕ್ಕದ್ದನ್ನು ನಾವು ನೋಡಿಯೇ ಇಲ್ಲ. ಜಿಲ್ಲಾಧಿಕಾರಿಗಳ ಹತ್ತಿರ 2-3 ಕೋಟಿ ರೂ. ಗಳ ಹಣ ಹೆಚ್ಚುವರಿಯಾಗಿ ಉಳಿಯುತ್ತಿದ್ದುದ್ದನ್ನು ನಾವು ಕಂಡಿದ್ದೇವೆ. ಆದರೆ ಇವತ್ತು ನಮ್ಮ ಜಿಲ್ಲೆಯಲ್ಲಿ ಬರ ಪರಿಹಾರ ಯೋಜನೆ ಅಡಿಯಲ್ಲಿ ತೆಗೆದುಕೊಂಡಂತಹ ಕಾಮಗಾರಿಗಳಿಗೆ 8 ಕೋಟಿ ರೂ.ಗಳನ್ನು ಕೊಡತಕ್ಕದ್ದು ಬಾಕಿ ಇದೆ. ಇವತ್ತು ಸನ್ಮಾನ್ಯ ಕಂದಾಯ ಸಚಿವರು ಆ ವಿವರಗಳನ್ನು ತರಿಸಿ ನೋಡಬಹುದು. ಅದರಲ್ಲಿ ಮೊನ್ನೆ 4 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಿದರು. ಅದರೆ ಇವತ್ತು ಇಷ್ಟೊಂದು ಭೀಕರ ಬರಗಾಲದ ನಡುವೆ ನಾವು ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ, ನಮ್ಮ ಹತ್ತಿರ ಒಂದು ರೂಪಾಯಿ ಕೂಡ ಇಲ್ಲ, ಕುಡಿಯುವ ನೀರಿಗಾಗಲಿ, ಮೇವಿಗಾಗಲಿ ಯಾವುದಕ್ಕೂ ನೀವು ಹಣವನ್ನು ಕೇಳಬಾರದು ಎಂಬ ನೇರ, ನಿಷ್ಠುರ ನುಡಿಯನ್ನು ಆಡತಕ್ಕಂಥ ಜಿಲ್ಲಾಧಿಕಾರಿಗಳು ನಮ್ಮಲ್ಲಿದ್ದಾರೆ. ಅವರದೇನೂ ತಪ್ಪಿಲ್ಲ. ಏಕೆಂದರೆ, ಸರ್ಕಾರ ಹಣ ಕೊಟ್ಟರೆ ಮಾತ್ರ ಇವತ್ತು ಆ ಜಿಲ್ಲಾಧಿಕಾರಿಗಳು ಕೆಲಸ ಮಾಡುತ್ತಾರೆ. ಇಲ್ಲವೆಂದೆ ಆಗುವುದಿಲ್ಲ. ಜಿಲ್ಲಾಧಿಕಾರಿಗಳು ಹಣವನ್ನು ಎಲ್ಲಿಂದ ತರಬೇಕು? ನಮ್ಮ ಕೊಪ್ಪಳ ಜಿಲ್ಲೆಗೆ ವಿಶೇಷವಾದಂತಹ ಪ್ಯಾಕೇಜ್ ಅನ್ನಾದರೂ ಈ ಬರ ಪರಿಹಾರ ಕಾಮಗಾರಿಗಳಿಗಾಗಿ ಮಂಜೂರು ಮಾಡತಕ್ಕ ಕೆಲಸವನ್ನು ಈ ಸರ್ಕಾರ ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದು, ಎಲ್ಲಾ ಕೆಲಸಗಳ ಬಗ್ಗೆ ಸಭೆಯೊಂದನ್ನು ನಡೆಸಿದರು. ಆಗ ಅವರು, ಪ್ರತಿ ಶಾಸಕರ ಕ್ಷೇತ್ರಗಳಿಗೂ ವಿಶೇಷವಾಗಿ 1 ಕೋಟಿ ರೂ. ಗಳ ಹಣವನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಕೊಟ್ಟಿದ್ದೇವೆ, ನಿಮ್ಮ ಕೊಪ್ಪಳ ಜಿಲ್ಲೆಯಲ್ಲಿಯೂ ಸಹಾ

ಅದೇ ರೀತಿ ಕೊಡುತ್ತೇವೆಂದು ಹೇಳಿದ್ದರು. ಆದರೆ, ಇವತ್ತಿನವರೆಗೂ ಕೂಡ ಆ ಹಣ ಬಿಡುಗಡೆಯಾಗಿಲ್ಲ. ಈ ಬಗ್ಗೆ ಬೇಕಾದರೆ ಆಡಳಿತ ಪಕ್ಷದಲ್ಲಿ ಇರತಕ್ಕಂಥ ಶಾಸಕರಾದ ಸನ್ಮಾನ್ಯ ಸಂಗಣ್ಣನವರನ್ನು, ಮಾನ್ಯ ಪರಣ್ಣನವರನ್ನು ನೀವು ಕೇಳಿ ನೋಡಿ. ಅವರಾದರೂ ಇದಕ್ಕೆ ಉತ್ತರ ಹೇಳಲಿ. ಏಕೆಂದರೆ, ಸನ್ಮಾನ್ಯ ಪರಣ್ಣನವರನ್ನು ನೀವು ಕೇಳಿ ನೋಡಿ. ಅವರಾದರೂ ಇದಕ್ಕೆ ಉತ್ತರ ಹೇಳಲಿ. ಏಕೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದೆರೆಡು ತಿಂಗಳ ಅಂತರದಲ್ಲಿ ಸುಮಾರು ನಾಲ್ಕು ಪತ್ರಗಳನ್ನು ನಾನು ಬರೆದಿದ್ದೇನೆ. ಅದರ ಮೇಲೆ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಅಥವಾ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಇಲಾಖೆ ಈ ರೀತಿ ಅಡ್ರೆಸ್ ಮಾಡಿ 'ಕೂಡಲೇ ಕ್ರಮ ತೆಗೆದುಕೊಳ್ಳುವುದು' ಎಂದು ಬರೆಯುತ್ತಾರೆಯೇ ಹೊರತು, ಇಲ್ಲಿಯವರೆಗೂ ಒಂದು ರೂಪಾಯಿಯೂ ಕೂಡ ಈ ಕ್ಷೇತ್ರಕ್ಕೆ ಮತ್ತು ನಮ್ಮ ಜಿಲ್ಲೆಗೆ ಬಿಡುಗಡೆಯಾಗಿಲ್ಲ. ಆದ್ದರಿಂದ, ಇವತ್ತು ಈ ಬರ ಪರಿಹಾರಕ್ಕಾಗಿ ಕೂಡಲೇ ಹಣವನ್ನು ಸರ್ಕಾರ ಬಿಡುಗಡೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರ ಒಟ್ಟಾಗಿ 60 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ, ನೇರವಾಗಿ ಇದನ್ನು ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕಾಗಲಿ ಅಥವಾ ಇತರೆ ಯಾವುದೇ ಬರ ಪರಿಹಾರದ ಉದ್ದೇಶಕ್ಕೆ ಉಪಯೋಗ ಮಾಡಿ ಎಂದು ಹೇಳಿದೆ. ಈ ಹಣವನ್ನು ಉಪಯೋಗಿಸಿಕೊಂಡು, ನಾವು ಎಷ್ಟು ಬೋರ್‌ವೆಲ್‌ಗಳನ್ನು ಕೊರೆದೆವೋ, ಅವುಗಳಲ್ಲಿ ಶೇಕಡ 80ರಷ್ಟು ಬೋರ್‌ವೆಲ್‌ಗಳು fail ಆಗಿರುವುದರನ್ನು ನಮ್ಮ ಜಿಲ್ಲೆಯಲ್ಲಿ ಕಾಣಬಹುದು.

ತಾವು ದಯವಿಟ್ಟು ಆ ಅಂಕಿ ಅಂಶಗಳನ್ನು ತರಿಸಿ ನೋಡಬೇಕು. ಏಕೆಂದರೆ, ಮಳೆಯೋ ಎರಡು ವರ್ಷಗಳು ಆಗಿಲ್ಲವೆಂದರೆ, ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಿದರೆ ಏನು ಪ್ರಯೋಜನ? ಅದಕ್ಕೆ ವಿಶೇಷವಾದಂತಹ ಕಾನೂನು ಮಾಡಬೇಕು. ಇವತ್ತು ರೈತರ ಹೊಲದಲ್ಲಿ ಇರತಕ್ಕಂಥ ಬೋರ್‌ವೆಲ್‌ಗಳಿಂದ ಅವರ ಮನವೊಲಿಸಿ, ಆ ನೀರು ಇತರರಿಗೂ ದಕ್ಕುವಂತೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಮತ್ತು ನಮ್ಮ ತಾಲ್ಲೂಕಿನಲ್ಲಿ ಹಲವಾರು ಕಡೆ ಆ ರೀತಿ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 10 ಗ್ರಾಮಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದಾರೆ. ಅವರಿಗೆ ತಿಂಗಳಿಗೆ 5–10 ಸಾವಿರ ರೂ.ಗಳನ್ನು ಕೊಟ್ಟು ಆ ಬೋರ್‌ವೆಲ್‌ಗಳನ್ನು ತೆಗೆದುಕೊಂಡು, ಬರ ಮುಗಿಯುವವರೆಗೆ, ಕನಿಷ್ಠ ನಮಗೆ ಜೂನ್–ಜುಲೈ ತಿಂಗಳವರೆಗೆ ಈ ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅನುಕೂಲ ಆಗುತ್ತದೆ. ಆ ನಿಟ್ಟಿನಲ್ಲಿ ಇವತ್ತು ಕುಡಿಯುವ ನೀರಿಗೆ ಹೆಚ್ಚು ಒತ್ತು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಮೇವಿನ ಬಗ್ಗೆ ಎರಡು ನಿಮಿಷ ಮಾತನಾಡುತ್ತೇನೆ. ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕು. ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ಗೋಶಾಲೆಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ತೆರೆಯಲಾಗಿದೆ. ಆಗಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಂತಹ ಲಕ್ಷ್ಮಣ ಸವದಿಯವರು ಸ್ವತಃ ನೋಡಿ, ನನ್ನ ಕ್ಷೇತ್ರದಲ್ಲಿಯೇ 8 ಗೋಶಾಲೆಗಳನ್ನು ತೆರೆದಿದ್ದರು. ಇವತ್ತೇನೋ ಸ್ವಲ್ಪ ಮಳೆ ಬಂತು, ನಮಗೆ ಸ್ವಲ್ಪ ಅನುಕೂಲವಾಯಿತು, ಆ ಗೋಶಾಲೆಗಳನ್ನು ಮುಚ್ಚಿದಿರಿ. ಆದರೆ ಮಾರ್ಚ್, ಏಪ್ರಿಲ್, ಮೇ ಮತ್ತು ಜೂನ್, ಈ ನಾಲ್ಕು ತಿಂಗಳುಗಳಲ್ಲಿ ನಮಗೆ ಮೇವಿನ ಭೀಕರವಾದಂತಹ ಸಮಸ್ಯೆ ಎದುರಾಗಲಿದೆ.

ನೀವು ಅದಕ್ಕೆ ಈಗಲೇ ಏನಾದರೊಂದು ತಯಾರಿಯನ್ನು ಮಾಡಿಕೊಳ್ಳತಕ್ಕಂಥದ್ದು ಅಗಬೇಕು. ನಮ್ಮ ಪಕ್ಕದ ತಾಲ್ಲೂಕಿನಲ್ಲಿ, ಈಗಾಗಲೇ ನೀರಾವರಿ ಇರತಕ್ಕಂಥ ಗಂಗಾವತಿ, ಸಿಂಧನೂರು, ರಾಯಚೂರು ಇಂತಹ ಕಡೆಗಳಲ್ಲಿ ಹುಲ್ಲು ಸಿಗುತ್ತದೆ. ರೈತರು ಅಲ್ಲಿಂದ ಹುಲ್ಲನ್ನು ತರಲಿಕ್ಕೆ ನೀವು ಸಾಗಾಣಿಕೆ ವೆಚ್ಚವನ್ನು ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕು. ಹಿಂದೆ ಮಾನ್ಯ ರಾಮಕೃಷ್ಣ ಹೆಗ್ಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಸಾಗಾಣಿಕೆ ವೆಚ್ಚವನ್ನು ಕೊಟ್ಟಿರತಕ್ಕಂಥ ಉದಾಹರಣೆಗಳಿವೆ. ಇವತ್ತು ಗೋಶಾಲೆಗಳನ್ನು ಮಾಡುತ್ತೇವೆ, ಮೇವು ಬ್ಯಾಂಕ್‌ಗಳನ್ನು ತೆರೆಯುತ್ತೇವೆಂದು ಹೇಳಿ, 50 ಟ್ರಿಪ್ಪೋ, 100 ಟ್ರಿಪ್ಪೋ ಹುಲ್ಲು ತಂದು ಮೇವಿನ ಬ್ಯಾಂಕ್ ಮಾಡಿದರೆ ಸಾಲುವುದಿಲ್ಲ. ನೀವು ಎಲ್ಲಿಂದಲಾದರೂ ಮೇವನ್ನು ತೆಗೆದುಕೊಂಡು ಬನ್ನಿ ದುಡ್ಡಾದರೂ ಕೊಟ್ಟು ತೆಗೆದುಕೊಂಡು ಬನ್ನಿ, ನಿಮ್ಮ ಬಂಧು ಬಳಗದವರಿಂದಲಾದರೂ ಮೇವನ್ನು ತೆಗೆದುಕೊಂಡು ಬನ್ನಿ, ಒಟ್ಟಿನಲ್ಲಿ ಹುಲ್ಲು ತೆಗೆದುಕೊಂಡು ಬನ್ನಿ ನಿನಗೆ ಅದರ ಸಾಗಾಣಿಕೆ ವೆಚ್ಚವನ್ನು ಕೊಡುತ್ತೇವೆ ಎನ್ನುವ ಮಾತನ್ನು ಸರ್ಕಾರ ಪ್ರತಿಯೊಬ್ಬ ರೈತರಿಗೂ ಹೇಳಬೇಕಾಗುತ್ತದೆ. ಸಾಗಾಣಿಕೆ ವೆಚ್ಚವನ್ನಾದರೂ ನೀವು ಕೊಡಲಿಲ್ಲವೆಂದರೆ ಆ ರೈತನ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಆ ನಿಟ್ಟಿನಲ್ಲಿ ಇವತ್ತು ತಾವು ಅದಕ್ಕೂ ಕೂಡ ಒತ್ತು ಕೊಡಬೇಕು. ಇನ್ನು ವಿದ್ಯುತ್ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸರ್ಕಾರದವರಿಗೆ ಈ ಬಗ್ಗೆ ನಾನು ಒತ್ತಾಯ ಮಾಡುವುದೇನೆಂದರೆ, ಬೇರೆ ರಾಜ್ಯಗಳಿಗಂದ ವಿದ್ಯುತ್ ಅನ್ನು ಖರೀದಿ

ಮಾಡುವಂಥದ್ದು ಆಗಬೇಕು. ಈ ಹಿಂದೆ ವಿದ್ಯುತ್ ಕೊರತೆ ಸಮಸ್ಯೆ ಉದ್ಭವಿಸಿದಾಗ, ಹಲವಾರು ಸರ್ಕಾರಗಳು ವಿದ್ಯುತ್ ಅನ್ನು ಖರೀದಿ ಮಾಡಿರತಕ್ಕಂಥ ಉದಾಹರಣೆ ಕೂಡ ಇದೆ, ಅದನ್ನು ಮಾಡಬೇಕು. ಇವತ್ತು ನಮ್ಮ BTPS, Bellary ಬಂದ್ ಆಗಿದೆ. ಏಕೆ ಬಂದ್ ಆಗಿದೆ ಎಂದು ನಾವು ಅಲ್ಲಿಯ ಅಧಿಕಾರಿಗಳನ್ನು ಪ್ರಶ್ನೆ ಮಾಡಿದರೆ, ಅಲ್ಲಿ ಕಲ್ಲಿದ್ದಲೇ ಇಲ್ಲ. ರಾಯಚೂರಿನಲ್ಲೂ ಪದೇ ಪದೇ ಬಂದ್ ಆಗುತ್ತಿದೆ. ಅಲ್ಲಿ ತಾಂತ್ರಿಕ ದೋಷಗಳಿಲ್ಲ, ಅಲ್ಲಿ ಸಹ ಕಲ್ಲಿದ್ದಲು ಇಲ್ಲ. ಇವತ್ತು ನಮಗೆ ಮನೆಯಲ್ಲಿ ಹಿಟ್ಟು ಇದ್ದರೆ ರೊಟ್ಟಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವುದಾದರೆ, ನಾವು ಹಿಟ್ಟು ಇದ್ದರೆ ರೊಟ್ಟಿ ಮಾಡುತ್ತೇವೆ. ಹಿಟ್ಟು ಇಲ್ಲದೆ ರೊಟ್ಟಿ ಮಾಡಿ ಎಂದರೆ ಮನೆಯವರು ಹೇಗೆ ತಾನೇ ಮಾಡುತ್ತಾರೆ? ನಮ್ಮ ಪರಿಸ್ಥಿತಿ ಆ ರೀತಿಯಾಗಿದೆ. ಹಿಟ್ಟನ್ನು ತಯಾರು ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಆ ನಿಟ್ಟಿನಲ್ಲಿ ಆಗದೇ ಹೋದರೆ ಬಹಳ ಕಷ್ಟವಾಗುತ್ತದೆ. ಈಗ ಏನಾಗಿದೆ ಎಂದರೆ, 3 ತಾಸು ಫೇಸ್, 6 ತಾಸು ಸಿಂಗಲ್ ಫೇಸ್ ವಿದ್ಯುತ್ ಮಾತ್ರ ಕೊಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ pilot programme ,ಆಗಿ ತೆಗೆದುಕೊಂಡ 'ನಿರಂತರ ಜ್ಯೋತಿ' ಯೋಜನೆ ಇವತ್ತಿನವರೆಗೂ ಮುಗಿದಿಲ್ಲ. ಇಂತಹ ಹಲವಾರು ಯೋಜನೆಗಳ ಬಗ್ಗೆ ಇವತ್ತು ಸರ್ಕಾರ ಏನೂ ಮಾಡದೇ ಇರತಕ್ಕದ್ದು ಸರಿಯಲ್ಲ. ಒಂದು ತಾಲ್ಲೂಕಿಗೆ ಈ ಹಿಂದೆ 120 ಮೆಗಾವ್ಯಾಟ್ ವಿದ್ಯುತ್ ಅನ್ನು ಪೂರೈಸುತ್ತಿದ್ದರು.

ಇವತ್ತು ನಮ್ಮ AEEಅವರನ್ನು ಕೇಳಿದರೆ ಕೇವಲ 31 ಮೆಗಾ ವ್ಯಾಟ್ ವಿದ್ಯುತ್ ಪೂರೈಕೆಯಾಗಿದೆ ಅಂದರೆ, ಇವತ್ತು ಯಾವ ರೀತಿಯಲ್ಲಿ ಸರ್ಕಾರ ವಿದ್ಯುತ್ ಕಡಿತ ಮಾಡಿದೆ ಎನ್ನುವುದನ್ನು ಗಮನಿಸಬೇಕು. ಇನ್ನು ಕುಡಿಯುವ ನೀರಿನದನ್ನು ZP ಗೆ ಕೊಡುವುದನ್ನು ಹಿಂದಿನ ಸರ್ಕಾರ ಮಾಡಿದೆ. ಉಸ್ತುವಾರಿ ಮಾಡುವಂಥ ಅಧಿಕಾರಿಗಳು ಸರಿಯಾಗಿ ಉಸ್ತುವಾರಿ ಮಾಡುತಿಲ್ಲ. ಬಹಳಷ್ಟು ಹಣ ಅಪವ್ಯಯವಾಗುತ್ತದೆ. ಈ ವರ್ಷ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಸಾಕಷ್ಟು ಹಣವನ್ನು ಕೊಡುತ್ತಿದೆ. ಆದರೆ ನಾವು ಖರ್ಚು ಮಾಡುವುದು 20% ದಾಟಿಲ್ಲ, ನನಗನಿಸಿದಂತೆ ಯಾವ ಜಿಲ್ಲಾ ಪಂಚಾಯಿತಿಯೂ ಕೂಡ ಆಯಾ ವರ್ಷದಲ್ಲಿ 50% ಖರ್ಚು ಮಾಡಿರುವ ಉದಾಹರಣೆ ಇಲ್ಲ. ಒಂದು ಸಬ್ ಡಿವಿಜನ್ ಅಥವಾ ಗುಲ್ಬರ್ಗಾದಂಥ ಜಿಲ್ಲೆಗೆ ಎರಡೆರಡು ಸಬ್ ಡಿವಿಜನ್ ಮಾಡಿದರೂ ಚಿಂತೆ ಇಲ್ಲ. ಅದು ಹಿಂದೆ ಇತ್ತು, ಅದನ್ನು ಪುನಃ ಜಾರಿಗೆ ತರುವ ಕೆಲಸವನ್ನು ಮಾಡಬೇಕು. ಇನ್ನು ರಾಜೀವ್ ಗಾಂಧಿ ಸಬ್ ಮಿಷನ್, ನಮ್ಮ ಜಿಲ್ಲೆಯ ತಾಲ್ಲೂಕು ಮತ್ತು ಯಲಬುರ್ಗಾ ತಾಲ್ಲೂಕು ನಡುವೆ ರೂ. 250 ಕೋಟಿ ಮೊತ್ತದ ಯೋಜನೆಯನ್ನು ನಿರ್ಮಾಣ ಮಾಡಿರುವುದು. ರೂ. 250 ಕೋಟಿ ಯೋಜನೆಯನ್ನು ಟೆಂಡರ್ ಕರೆದಾಗ ರೂ. 350 ಕೋಟಿಗೆ ಹಾಕಿದರು. ಈ 100 ಕೋಟಿಯನ್ನು ಹೆಚ್ಚುವರಿಯಾಗಿ ರಾಜ್ಯ ಸರ್ಕಾರವೇ ಭರಿಸಬೇಕೆಂದು ಕೇಂದ್ರ ಸರ್ಕಾರ ನಿರ್ದೇಶನ ಕೊಟ್ಟಿತು. ನಿರ್ದೇಶನ ಕೊಟ್ಟ ತಕ್ಷಣ ಆ ಯೋಜನೆಯನ್ನೇ ಡ್ರಾಪ್ ಮಾಡಿರತಕ್ಕಂಥದ್ದು. ಇವತ್ತು

ಯಲಬುರ್ಗಾ ತಾಲ್ಲೂಕಿನ 65 ಹಳ್ಳಿಗಳು, ಕುಷ್ಟಗಿ ತಾಲ್ಲೂಕಿನ 72 ಹಳ್ಳಿಗಳು ಇವತ್ತು ಆ ಸೌಲಭ್ಯದಿಂದ ವಂಚಿತವಾಗಿರುವುದನ್ನು ಸರ್ಕಾರ ಗಮನಿಸಬೇಕಾಗುತ್ತದೆ. ಇದಲ್ಲದೆ ಕೇಂದ್ರ ಸರ್ಕಾರದಿಂದ ಬಂದಿರುವ ಬೆಳೆ ಪರಿಹಾರ ನೀಡುವಲ್ಲಿ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ತಾರತಮ್ಯವಾಗಿರತಕ್ಕಂಥದ್ದು. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ ಒಂದು ಎಕರೆಗೆ ಒಬ್ಬ ರೈತನಿಗೆ ಕನಿಷ್ಠ ರೂ. 250 ಗರಿಷ್ಠ ರೂ. 500. ಪಕ್ಕದ ನಮ್ಮ ರಾಯಚೂರು ಜಿಲ್ಲೆಯಲ್ಲಿ ಕನಿಷ್ಠ ರೂ. 250 ರಿಂದ 1,000ವರೆಗೆ ಪರಿಹಾರವನ್ನು ವಿತರಿಸಿರುವುದನ್ನು ನಾವು ಗಮನಿಸಿದ್ದೇವೆ. ಆದುದರಿಂದ ಇದರ ಬಗ್ಗೆ ಕಾರ್ಯದರ್ಶಿ, ಮಂತ್ರಿಗಳಿಗೂ ನಾನು ಪತ್ರವನ್ನು ಬರೆದಿದ್ದೇನೆ, ಅದು ಸರಿಪಡಿಸುವುದಾಗಬೇಕು. ಏಕೆಂದರೆ, ಇವತ್ತು ಕೇಂದ್ರ ಸರ್ಕಾರದಿಂದ ವಿಶೇಷವಾಗಿ ರೂ. 630 ಕೋಟಿ ಬೆಳೆ ಪರಿಹಾರ ಬಂದಿದೆ, ಇದನ್ನು ಎಲ್ಲಾ ಜಿಲ್ಲೆಗಳಿಗೆ ಸರಿಯಾಗಿ ಹಂಚಿ ಆ ರೈತರಿಗೆ ಅನುಕೂಲ ಮಾಡಿಕೊಡುವ ಕೆಲಸ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ, ಈ ಬರ ಪರಿಹರಿಸುವಲ್ಲಿ ನಾವೆಲ್ಲಾ ಶಾಸಕರು ವಿಫಲರಾಗಿದ್ದೇವೆ. ಬಹುಶಃ ಈಗಿರುವ sitting ಎಂ.ಎಲ್.ಎ.ಗಳು, ಈ ಸಾರಿ ಗ್ರಾಮಾಂತರ ಪ್ರದೇಶದಲ್ಲಿ ಚುನಾವಣೆಗೆ ಹೋಗುವಂತಿಲ್ಲ. ಈ ಸಾರಿ ನೋಡಿ 224 ರಲ್ಲಿ ಸುಮಾರು 150 ಜನ ಹೊಸಬರು ಬರುತ್ತಾರೆ. ಏಕೆಂದರೆ, ಮಾತನಾಡಿದರೆ, ನಮ್ಮನ್ನು ನೀರು ಕೇಳುತ್ತಾರೆ. 'ಏನು ನೀನು ನೀರು ಕೊಡಲಾರದವ ಇನ್ನೇನು ಕೊಡುತ್ತೀಯಪ್ಪ? ನಿನ್ನ ನೋಡಿದ್ದೇವೆ, ಹೊಸಬರನ್ನು ಆರಿಸುತ್ತೇವೆ' ಎನ್ನುತ್ತಾರೆ. ಆ ಪರಿಸ್ಥಿತಿ ನಿರ್ಮಾಣವಾಗಿದೆ,

ಅದರಲ್ಲಿ ತಾವು ಸೇರಿದ್ದೀರೇನೊ ನನಗೆ ಗೊತ್ತಿಲ್ಲ, ಏಕೆಂದರೆ, ನಮ್ಮ ಭಾಗದಲ್ಲಿ ನೀರೇ ಇಲ್ಲ. ಮತ್ತೆ ನಂಜುಡಪ್ಪ ವರದಿ ಎಂದೆಲ್ಲಾ ಹೇಳುತ್ತಾರೆ, ಸರ್ಕಾರ ನಮ್ಮ ಹಿಂದುಳಿದ ಪ್ರದೇಶಗಳಿಗೆ ಮಾಡತಕ್ಕಂಥ ಒಂದು ದೊಡ್ಡ ಮೋಸ ಇದು. ಇದರಲ್ಲಿ ವಿಶೇಷವಾದ ಅನುದಾನವನ್ನು ಯಾವ ತಾಲ್ಲೂಕಿಗೂ ಕೊಟ್ಟಿಲ್ಲ. ಸ್ವಾಮಿ, ನಂಜುಡಪ್ಪ ವರದಿಯಲ್ಲಿ ನೀವು ವರದಿಯನ್ನು ಕೊಟ್ಟಿದ್ದೀರಿ. KBJNL ಬಾಕಿ ಕಟ್ಟುವುದಕ್ಕೆ ನಂಜುಂಡಪ್ಪ ವರದಿಯಲ್ಲಿ ದುಡ್ಡು ಬೇಕೇ? ಹೌಸಿಂಗ್ ಲೋನ್ ತೆಗೆದುಕೊಂಡಿರುವ ಇವತ್ತು ನಮ್ಮ ಆಶ್ರಯ ಮನೆಗಳಿಗೆ 10–20 ವರ್ಷದಿಂದ ಲೋನ್ ತೆಗೆದುಕೊಂಡಿರುವ ಹಣ ಕಟ್ಟಲು ಈ ನಂಜುಡಪ್ಪ ವರದಿಯಲ್ಲಿ ಹಣವನ್ನು ಭರಿಸತಕ್ಕಂಥ ಕೆಲಸವನ್ನು ಇವತ್ತು ಮಾಡಿದ್ದಾರೆ. ಇವತ್ತು ಕೇವಲ ಹಿಂದುಳಿದ ಜಿಲ್ಲೆಗಳಿಗೆ ತಾಲ್ಲೂಕುಗಳಿಗೆ ಸಂಬಂಧಪಟ್ಟಿದ್ದಲ್ಲ, ನಂಜುಡಪ್ಪ ವರದಿಯಲ್ಲಿ ಉತ್ತರ ಕರ್ನಾಟಕವಷ್ಟೆ ಇಲ್ಲ, ಚಾಮರಾಜನಗರ ಜಿಲ್ಲೆ ಇದೆ, ಕೋಲಾರ ಜಿಲ್ಲೆ ಇದೆ, ತುಮಕೂರು ಜಿಲ್ಲೆ ಇವೆಲ್ಲಾ ಇವೆ. ಆದರೆ ಅವರಿಗೆ ಮಾಡತಕ್ಕಂಥ ಒಂದು ಮೋಸ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ, ರೂ. 2,500 ಕೋಟಿಯಲ್ಲಿ ಎಷ್ಟು ಕೋಟಿಯನ್ನು ನಂಜುಡಪ್ಪ ವರದಿಗೆ ಬಿಡುಗಡೆ ಮಾಡಿದ್ದೇವೆನ್ನುವುದನ್ನು ಹೇಳಬೇಕಾಗುತ್ತದೆ. ಕೊನೆಯದಾಗಿ, ಬಹುಶಃ ಈ ಸರ್ಕಾರ ದೇವರನ್ನು ನಂಬಿದೆ, ದೇವಸ್ಥಾನಕ್ಕೆ ಕೊಟ್ಟಷ್ಟು ಹಣ, ಹಿಂದಿನ 3 ಸರ್ಕಾರಗಳನ್ನು ನಾನು ನೋಡಿದ್ದೇನೆ, ಇವತ್ತು ಅಂಕಿಅಂಶಗಳನ್ನು ತರಿಸಿ, ದೇವಸ್ಥಾನಕ್ಕೆ ಇವರಷ್ಟು ಕೊಟ್ಟಷ್ಟು ಹಣವನ್ನು ಯಾರೂ ಕೊಟ್ಟಿಲ್ಲ. ಸ್ವಾಮಿ, ದೇವಸ್ಥಾನಕ್ಕೆ ಹಣ ಕೊಡುವುದು ಬೇಡ, ನಮ್ಮ

ಜನರೇ ನಮ್ಮ ದೇವರು. ಮತದಾರರೇ ನಮ್ಮ ದೇವರೆಂದು ನಾವು ಭಾಷಣ ಮಾಡುತ್ತೇವೆ, ಅವರಿಗೆ ಕುಡಿಯುವುದಕ್ಕೆ ನೀರು ಕೊಡಿ ಸ್ವಾಮಿ, ದೇವಸ್ಥಾನಕ್ಕೆ ಹಣ ಬಿಡುಗಡೆ ಮಾಡಿದ್ದೀರಿ, ಇವತ್ತು ಅಂಕಿಅಂಶಗಳನ್ನು ತರಿಸಿ 4 ಸರ್ಕಾರಗಳಲ್ಲಿ ಅತ್ಯಂತ ಹೆಚ್ಚು ಹಣವನ್ನು ದೇವಸ್ಥಾನಕ್ಕೆ ಈ ಸರ್ಕಾರ ಬಿಡುಗಡೆ ಮಾಡಿದೆ. ಒಂದೊಂದು ಕ್ಷೇತ್ರಕ್ಕೆ 10–15 ಕೋಟಿ, ಇದೇನು ಸ್ವಾಮಿ? ಇದು ಯಾರ ಹಣ? ಇವತ್ತು ಸಾಮಾನ್ಯ ಜನರಿಂದ ತೆರಿಗೆಯನ್ನು ವಸೂಲು ಮಾಡಿ ಇಲ್ಲಿ ದೇವಸ್ಥಾನ ಕಟ್ಟುವುದಕ್ಕೆ ಕೊಡುವುದಲ್ಲ. ದೇವಸ್ಥಾನ ಕಟ್ಟುವುದು ಸರ್ಕಾರದ ಜವಾಬ್ದಾರಿ ಅಲ್ಲ, ಅವರ ವೈಯಕ್ತಿಕ ಜವಾಬ್ದಾರಿ, ಅವನು ತನ್ನ ಗ್ರಾಮದಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡಲಿ. ಶಾಲೆ ನಿರ್ಮಾಣ ಮಾಡಿ, ಕುಡಿಯುವ ನೀರಿಗೆ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿ, ಆ ರೈತರಿಗೆ ಸಹಾಯ ಮಾಡಿ. ಇವತ್ತು ದೇವಸ್ಥಾನಕ್ಕೆ ಹಣ ಕೊಟ್ಟಿರುವುದು ಬಹಳ ಖಂಡನೀಯ ವಿಷಯ. ಆದುದರಿಂದ ಈ ಬರ ಪರಿಹಾರಕ್ಕೆ ನಮ್ಮ ಜಿಲ್ಲೆಗೆ ಬಾಕಿ ಇರುವ ರೂ. 8 ಕೋಟಿಯ ಜೊತೆಗೆ ಕನಿಷ್ಠ 8 ಕೋಟಿ ಹಣ ಬಿಡುಗಡೆ ಮಾಡಿ ನಮ್ಮನ್ನು ಬಂಧಮುಕ್ತರನ್ನಾಗಿ ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಮನವಿಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸತ್ಯನಾರಾಯಣ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಎಲ್ಲಾ ಕ್ಷೇತ್ರಗಳಲ್ಲೂ ಗೋಶಾಲೆಗಳನ್ನು ಮುಚ್ಚಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ನನ್ನ ಕ್ಷೇತ್ರದಲ್ಲಿ 2 ಗೋಶಾಲೆ ನಡೆಯುತ್ತಿದೆ, ಅಧಿಕಾರಿಗಳ ದೃಷ್ಟಿಯಿಂದ ಮೇವಿಗೆ ಕೊರತೆ ಮಾಡಿಲ್ಲ, ನಮ್ಮ ತಹಸೀಲ್ದಾರ್

ಸಾಲ ಮಾಡಿ ಮೇವನ್ನು ತಂದು ಹಾಕಿದ್ದಾರೆ, ವಾಪಸ್ ಕೊಡುವುದಕ್ಕೆ ಅವರಿಗೆ ದುಡ್ಡಿಲ್ಲ. ನಾನು ಕೇಳಿಕೊಳ್ಳುವುದೇನೆಂದರೆ, ಮಳೆ ಬರುವವರೆವಿಗೂ ಆ ಗೋಶಾಲೆಗಳು ಮುಂದುವರೆಯಲಿ, ದಯವಿಟ್ಟು ಹಣವನ್ನು ಬಿಡುಗಡೆ ಮಾಡಿಕೊಡಬೇಕು. ಒಂದು ಸಾರಿ ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಪಟ್ಟಿದ್ದರು, ಅದನ್ನು ಮುಂದುವರೆಸಬೇಕೆಂದು ಕೇಳಿದಾಗ, ಒಂದು ಗೋಶಾಲೆಯಲ್ಲಿ 1200 ರಾಸುಗಳಿವೆ, ಇನ್ನೊಂದು ಗೋಶಾಲೆಯಲ್ಲಿ 200 ರಾಸುಗಳಿಗೆವೆ. ಒಂದು ಸಾರಿ ಇವನ್ನು ಮುಚ್ಚಬೇಕೆಂದಾಗ ಜನರೆಲ್ಲಾ ನಮ್ಮ ಮನೆ ಹತ್ತಿರ ಬಂದು, ಮುಚ್ಚಿಬಿಟ್ಟರೆ ಎಲ್ಲವನ್ನು ಮಾಡಿಬಿಡುತ್ತೇವೆ. ದನಗಳನ್ನು ಮಾರಿದಾಗ ಇನ್ನು ದನಗಳು ಸಿಗುವುದಿಲ್ಲವೆಂದು ಘೆರಾವ್ ಮಾಡಿದರು. ಪುನಃ ನಮ್ಮ ರೆವಿನ್ಯೂ ಅಧಿಕಾರಿಗಳು ಮೈಸೂರಿಗೆ ಬಂದಿದ್ದಾಗ ಅವರೊಡನೆ ಪ್ರಸ್ತಾಪ ಮಾಡಿದಾಗ ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಟ್ಟರು. ನಾನು ಕೇಳುವುದೇನೆಂದರೆ, ಆ ಗೋಶಾಲೆಗಳು ಮಳೆ ಬರುವವರೆಗೂ ಮುಂದುವರೆಯುವುದಕ್ಕೆ ಹಣದ ನೆರವನ್ನು ಕೊಡಬೇಕು ಮತ್ತು ಅಲ್ಲಿ ಸಂಬಂಧಪಟ್ಟ ವೈದ್ಯರೇನು ವಿಮೆ ಮಾಡಿದ್ದಾರೋ, ವಿಮೆಯ ಹಣವನ್ನು ಕಟ್ಟಿಲ್ಲ. ಒಂದು ರಾಸು ಸತ್ತಿದೆ, claim ಮಾಡುವುದಕ್ಕೆ ಸರ್ಕಾರ ಹಣ ಕೊಟ್ಟಿಲ್ಲ. ನಾನು ಹಣ ಕಟ್ಟಿಲ್ಲವೆನ್ನುವುದಾಗುತ್ತದೆ ದಯವಿಟ್ಟು, ಅದನ್ನು ಮಾಡುವುದು ಬೇಡ. ಜೊತೆಗೆ ನನ್ನ ಭಾಗದಲ್ಲಿ ಅರ್ಧಭಾಗ wet land ಇದೆ, ಅರ್ಧಭಾಗ dry land ಇದೆ, ಎರಡು ಹೋಬಳಿ ಖುಷ್ಕಿ ಭೂಮಿಯಾಗಿದೆ. ಒಂದು ಇಲುವಾಲ ಭಾಗದಲ್ಲಿ ಮಾನ್ಯ ಜಗದೀಶ್ ಶೆಟ್ಟರ್

ಅವರು 54 ಹಳ್ಳಿಗಳ ಕುಡಿಯುವ ನೀರನ್ನು ಉದ್ಘಾಟನೆ ಮಾಡಿದರು. ಅದನ್ನು ಮಾಡದಿದ್ದರೆ 8 ತಿಂಗಳ ಹಿಂದೆ ಅವರೆಲ್ಲ ಗುಳೆ ಹೋಗಿಬಿಡುತ್ತಿದ್ದರು, ಊರು ಬಿಡಬೇಕಾದಂಥ ಪರಿಸ್ಥಿತಿ ಇತ್ತು. ಅದೇ ರೀತಿಯಲ್ಲಿ ಜೈಪುರ ಭಾಗಕ್ಕೆ ಈಗ ನರ್ಮ್ ಯೋಜನೆಯಲ್ಲಿ ಮೈಸೂರು ನಗರಕ್ಕೆ ನೀರು ಬರುತ್ತಿರುವುದರಲ್ಲಿ 33 ಹಳ್ಳಿಗೆ ಕುಡಿಯುವ ನೀರು ಕೊಟ್ಟಿದ್ದೀರಿ ಇನ್ನು 43 ಹಳ್ಳಿಗಳು ಬಾಕಿ ಇವೆ. ಒಂದೊಂದು ಹಳ್ಳಿಯಲ್ಲಿ 5–6 ಬೋರ್ ವೆಲ್‌ಗಳನ್ನು request ಮಾಡಿ ತೆಗೆಸಿದ್ದೇನೆ, ಆದರೆ ನೀರೇ ಇಲ್ಲ. ಅಂಥದ್ದರಲ್ಲಿ ಒಂದು ಕಡೆ ಕಾವೇರಿ, ಇನ್ನೊಂದು ಕಡೆ ಕಪಿಲಾ ನದಿ ಇದೆ, ದಯವಿಟ್ಟು ಹೊಳೆ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಎಲ್ಲಿ ಈ ವೆಟ್ ಲ್ಯಾಂಡ್ ಇದೆ ಆದರೆ ಕುಡಿಯುವ ನೀರನ್ನು ಬಳಕೆ ಮಾಡಲು ವಿದ್ಯುತ್ ಇಲ್ಲ, ವಿದ್ಯುತ್ ಸಮಸ್ಯೆ ಬಗೆಹರಿಸಿದರೆ ಬೋರ್‌ವೆಲ್ ಮೂಲಕ ಕುಡಿಯುವ ನೀರನ್ನು ಬಳಸಲು ಅನುಕೂಲವಾಗುತ್ತದೆ, ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು, ಇದಕ್ಕೆಲ್ಲಾ ಮುಖ್ಯವಾಗಿ ಆ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಬಹಳಷ್ಟು ಅನುಕೂಲ ಮಾಡಿಕೊಡಲು ಹಣ ಕೊಡಬೇಕು, ಹಣ ಬಿಡುಗಡೆ ಮಾಡಬೇಕು. ಏಕೆಂದರೆ, ನಾವು ಇಲ್ಲಿಂದ ನಮ್ಮ ಕ್ಷೇತ್ರಕ್ಕೆ ಹೋಗುತಿದ್ದಂತೆ, ಬಿಲ್ ಮಾಡಿಲ್ಲವೆಂದರೆ ನಮ್ಮನ್ನು ಮುತ್ತಿಕೊಳ್ಳುತ್ತಾರೆ. ದಯವಿಟ್ಟು ಇದಕ್ಕೆ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತಿದ್ದೇನೆ. ಈ ಪರಿಸ್ಥಿತಿ ಸರ್ಕಾರದ್ದಲ್ಲ, ಇದನ್ನು ದೇವರೇ ಬಗೆ ಹರಿಸಬೇಕಾದಂಥದ್ದು. ಇದು ಎಲ್ಲರಿಗೂ ಬಂದಿರುವುದು. 45 ವರ್ಷಕ್ಕೆ ಪ್ರಥಮ ಬಾರಿಗೆ ಬಂದಂಥ ಬರ

ಇದಾಗಿದೆ, ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆಗಳು.

ಶ್ರೀ ಜೆ.ಡಿ. ನಾಯಕ್ (ಭಟ್ಕಳ): ಮಾನ್ಯ ಅಧ್ಯಕ್ಷರೆ, ಕರಾವಳಿ, ಹೊನ್ನಾವರ ಹಾಗೂ ಭಟ್ಕಳ ಭಾಗದ ಬಗ್ಗೆ ನಾನು ಕೇಳುತ್ತಿದ್ದೇನೆ. ಹೋದ ವರ್ಷ ಬಿದ್ದಂತಹ ಮಳೆಯ ಪ್ರಮಾಣ ಬಹಳ ಕಡಿಮೆ ಇರುವುದರಿಂದ ವಿಶೇಷವಾಗಿ ಕರಾವಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಈಗಾಗಲೇ ಕರಾವಳಿ ಭಾಗದ ಶಾಸಕರಾದ ಮಾನ್ಯ ದಿನಕರ ಶೆಟ್ಟಿಯವರು, ಗೋಪಾಲ ಭಂಡಾರಿಯವರು ಹಾಗೂ ಯು.ಟಿ. ಖಾದರ್‌ರವರು ತಮ್ಮ ಮೂಲಕ ಪ್ರಸ್ತಾವನೆ ಮಾಡಿದರು. ಕರಾವಳಿ ಭಾಗದಲ್ಲಿ ಬೋರ್‌ವೆಲ್‌ಗಳನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲಿ ನೀರಿನ ಸೋರ್ಸ್ ಇದೆ. ಅಲ್ಲಿಂದ ಕೊಳಾಯಿಗಳ ಮೂಲಕ ತರತಕ್ಕಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಮುಖ್ಯವಾಗಿ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡುತ್ತೇನೆ, ನಮ್ಮ taskforce committee ಏನಿದೆ ಆ taskforce committee ಗೆ ಒಂದು ಕೋಟಿ ರೂ. ಅನುದಾನ ಕೊಟ್ಟರೆ ಎಲ್ಲಿ ನೀರಿನ ಲಭ್ಯತೆ ಇದೆ, ಆ ನೀರನ್ನು ಪೈಪ್‌ಗಳ ಮೂಲಕವಾಗಲಿ ಅಥವಾ ಮಿನಿ ವಾಟರ್ ಸಪ್ಲೈ ಮೂಲಕವಾಗಲಿ ಆ ಭಾಗಕ್ಕೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ. ಎಲ್ಲೆಲ್ಲಿ ನೀರಿನ ಕೊರತೆ ಇದೆ ಅಂತಹ ಕಡೆಗಳಲ್ಲಿ ಸಾಧ್ಯವಾದರೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿದರೂ ಅನುಕೂಲವಾಗುತ್ತದೆ. ಈಗಾಗಲೇ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ

30 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ, ಅದೆಲ್ಲವನ್ನು ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಜಿಲ್ಲಾದಿಕಾರಿಗಳ ನೇತೃತ್ವದಲ್ಲಿ ಕೊಡುವಂತಹ ವ್ಯವಸ್ಥೆ ಮಾಡಿದ್ದೀರಿ. ದಿನ ಬೆಳೆಗಾದರೆ ನಮಗೆ ಅನೇಕ ಮನವಿಗಳು ಬರುತ್ತವೆ. ಅನೇಕ ಜನ ಬಂದು ಶಾಸಕರಲ್ಲಿ ಮನವಿ ಮಾಡುತ್ತಾರೆ. ದಯಮಾಡಿ ನನ್ನ ಮನವಿ ಇಷ್ಟೆ, ಆದಷ್ಟು ಬೇಗ ಪ್ರತಿ taskforce committee ಗೆ ಹೆಚ್ಚಿನ ಹಣ ರಿಲೀಸ್ ಮಾಡಬೇಕು, ಅದನ್ನು implement ಮಾಡುವ ಅನುಕೂಲ taskforce committee ಗೆ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸುಭಾಶ್ ಗುತ್ತೇದಾರ್ (ಆಳಂದ): ಮಾನ್ಯ ಅಧ್ಯಕ್ಷರೆ, ಆಳಂದ ತಾಲ್ಲೂಕು ಗುಲ್ಬರ್ಗ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅದರಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಬಹಳ ತೀವ್ರವಾಗಿದೆ. 600 ರಿಂದ 700 ಫೀಟ್ ಬೋರ್‌ವೆಲ್ ಕೊರೆದರೂ ಕೂಡ ನೀರು ಬರುತ್ತಿಲ್ಲ. ಒಂದು ಊರಿಗೆ ಒಂದು ಭೋರ್‌ವೆಲ್ ಮೆಷಿನ್ ಕಳುಹಿಸಿ ಒಂದು ಬೋರ್ ಹೊಡೆಯಿರಿ ಎಂದರೆ, ನೀರು ಬೀಳಲಿಲ್ಲವೆಂದರೆ ಊರಿನವರು ಬಿಡುವುದಕ್ಕೆ ತಯಾರಿಲ್ಲ. ಮತ್ತೊಂದು ಬೋರ್ ಕೊರೆಯಲೇ ಬೇಕೆಂದು ಹೇಳುತ್ತಾರೆ. ಒಂದೊಂದು ಊರಿನಲ್ಲಿ ಎರಡೆರಡು ಬೋರ್‌ವೆಲ್‌ಗಳನ್ನು ಕೊರೆಸಿದರೂ ನೀರು ಸಿಗುತ್ತಿಲ್ಲ. ಇವತ್ತು ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಎಲ್ಲಿ ಕರೆ ಇದೆ? ಎರಡು ಕಿ.ಮೀ. ಮೂರು ಕಿ.ಮೀ. ದೂರ ಇರುವ ಕಡೆ ಬಾವಿಗಳನ್ನು ತೋಡಿ ನೀರು ತಂದು ಕೊಡುತ್ತಿದ್ದೇವೆ.

ಅಂತಹ ಊರುಗಳನ್ನು ನೋಡಿಕೊಂಡು ನೀವು ಹೆಚ್ಚಿನ ಹಣ ಬಿಡುಗಡೆ ಮಾಡಬೇಕು. ಒಂದು ಕಿ.ಮೀ. ದೂರದಲ್ಲಿರುವ ಬಾವಿಯಿಂದ ಪೈಪ್‌ಲೈನ್ ತರಬೇಕಾದರೆ ಅಲ್ಲಿ ಜನರೇಟರ್ ಅಳವಡಿಸಬೇಕಾಗುತ್ತದೆ. ಏಕೆಂದರೆ ಅಲ್ಲಿ ಕರೆಂಟ್ ಸಮಸ್ಯೆ ಬಹಳಷ್ಟು ಇದೆ. ಕಿನಿ ಸುಲ್ತಾನ್ ಎಂದು ಊರು ಇದೆ, ಅಲ್ಲಿ ಎಷ್ಟು ಬೋರ್‌ಗಳನ್ನು ಕೊರೆದರೂ ನೀರು ಸಿಗುತ್ತಿಲ್ಲ. ನೀರಿಗೆ ಬಹಳ ಹಾಹಾಕಾರ ಇದೆ, ಟ್ಯಾಂಕರ್‌ನಿಂದ ನೀರು ಪೂರೈಸಿ ಎಂದು ಹೇಳುತ್ತಾರೆ, ಟ್ಯಾಂಕರ್‌ನಿಂದ ನೀರು ತರಬೇಕಾದರೂ ಬಹಳಷ್ಟು ಸಮಸ್ಯೆ ಇದೆ. ಹೊನ್ನಾಳಿ ಕೆರೆ ಎಂದು ಮೂರು ಕಿ.ಮೀ. ಅಂತರದಲ್ಲಿ ಇದೆ, ಅಲ್ಲಿಂದ ನೀರು ತಂದು ಕೊಡಬೇಕೆಂದು ವಿಚಾರ ಮಾಡಿದ್ದೇವೆ. ಕುಡಿಯುವ ನೀರಿನ ಸಲುವಾಗಿ ಸರ್ಕಾರ ಬಹಳಷ್ಟು ಆದ್ಯತೆ ಕೊಡಬೇಕಾಗಿದೆ. ಹಣವಾದರೆ ಎಲ್ಲಿಂದ ಬೇಕಾದರೂ ತಂದು ಕೊಡಬಹುದು. ನೀರು ಎಲ್ಲಿಂದ ತಂದು ಕೊಡುವುದು? ಶಾಸಕರಿಗೆ ದಿನಾಲೂ ಬೆಳಿಗ್ಗೆ ರಾತ್ರಿ ಫೋನ್ ಮಾಡಿ ಇವತ್ತು ನೀರು ಬಂದಿಲ್ಲ ನೀರು ಬೇಕು, ನಮ್ಮ ಬೋರ್ ಒಣಗಿತು ಎಂದು ಹೇಳುತ್ತಾರೆ. ನಾವು taskforce ಗೆ ಅಧ್ಯಕ್ಷರಾಗಿದ್ದೇವೆ, ಡಿಸಿಯವರು 75% ಅಷ್ಟೇ ಹಣ ಬಿಡುಗಡೆ ಮಾಡಿರುವುದು ಇನ್ನು 25% ಗೆ 3rd party inspection ಮಾಡಬೇಕು ಎಂದು ಹೇಳಿ ಡಿಲೇ ಮಾಡುತ್ತಿದ್ದಾರೆ. ಕೆಲಸ ಮಾಡಿದರೂ ಕೂಡ ಡಿಸಿಯವರು ಬೇಗ ಬಿಲ್ ಕೊಡುತ್ತಿಲ್ಲ. ಅದರ ಬಗ್ಗೆ ತಾವು ಹೇಳಬೇಕಾಗಿದೆ. ನಮ್ಮಲ್ಲಿ ಮಳೆ ಕಡಿಮೆ ಬಂದಿರುವುದರಿಂದ ತೊಗರಿ ಬೆಳೆ ಸೇರಿ ಎಲ್ಲಾ ಬೆಳೆಗಳ ಇಳುವರಿ ಬಹಳ ಕಡಿಮೆ ಬಂದಿದೆ.

ಸರ್ಕಾರದವರು ತೊಗರಿ ಬೆಳೆಗೆ 5,000 ರೂ. ಆದರೂ ಬೆಂಬಲ ಬೆಲೆ ಕೊಡಬೇಕು. insurance ಬಗ್ಗೆ ಹಾಗೂ ರೈತರ ಬಗ್ಗೆ ತಾವು ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ನಮ್ಮ ಮಂತ್ರಿಗಳು ಗುಲ್ಬರ್ಗ ಬೀದರ್‌ನಲ್ಲಿ ದನಗಳ ಮೇವಿನ ಕೊರತೆ ಇಲ್ಲವೆಂದು ಹೇಳುತ್ತಾರೆ. ಇಲ್ಲಿಯವರೆಗೆ ಒಂದೂ ಗೋಶಾಲೆಯನ್ನು ತೆರೆದಿಲ್ಲ. ಒಂದು ವಿಷಯ ಏನೆಂದರೆ, ಬಹು ಗ್ರಾಮ ಯೋಜನೆ ಏನು ಮಾಡುತ್ತಿದ್ದೀರಿ, ನಮ್ಮಲ್ಲಿ ಕೂಡ ಬಹು ಗ್ರಾಮ ಯೋಜನೆ ಎರಡು ಇವೆ. ಅದರಲ್ಲಿ ಮಂತ್ರಿಗಳ ಅರ್ಧ ಊರು ಬರುತ್ತದೆ. ನಮ್ಮದು ಅರ್ಧ ಊರು ಬರುತ್ತವೆ. ಅಮರ್ಜಾದಿಂದ ಮಾದನ ಹಿಪ್ಪರಗಿ ಇಲ್ಲಿ ನಾಲ್ಕೈದು ಹಳ್ಳಿಗಳು ಕೂಡಿಕೊಂಡು ಏನು ಬರುತ್ತವೆ ಅದನ್ನು ಕೂಡ ತಾವು ಆದಷ್ಟು ಬೇಗ ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡಿ, ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಕೊಟ್ಟು, ಶಾಸಕರನ್ನು ಏನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಅವರ ಮುಖಾಂತರವೇ ಕೊಡಬೇಕು. ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ರವರು ಮಾಡಿದರೆ ಅಲ್ಲಿ ಜನ ನಮಗೆ ಕೇಳುತ್ತಾರೆ. ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಕೇಳುವುದಿಲ್ಲ. ಡಿಸಿಯವರಿಗೂ ಕೇಳುವುದಿಲ್ಲ ಯಾರಿಗೂ ಕೇಳುವುದಿಲ್ಲ. ನೀರಿನ ಸಲುವಾಗಿ ಶಾಸಕರಿಗೇ ಕೇಳುತ್ತಾರೆ. ಹಾಗಾಗಿ ಎಲ್ಲರ ಬೇಡಿಕೆಯಂತೆ ಈ ಸಾರಿ taskforce committee ಗೆ ಎರಡು ಕೋಟಿ ರೂ.ಗಳನ್ನಾದರೂ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ಬರದ ಛಾಯೆ ನಗರವನ್ನೂ ಸಹ ಸಂಪೂರ್ಣವಾಗಿ ಆವರಿಸಿದೆ ಎನ್ನತಕ್ಕಂಥದ್ದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಮುಖ್ಯವಾಗಿ ಇವತ್ತು ಬೆಂಗಳೂರಿನ ಜೀವ ಜಲ ಕಾವೇರಿ 4ನೇ ಹಂತ, ಎರಡನೇ ಫೇಸ್ ಉದ್ಘಾಟನೆ ಆಯಿತು. ಇವತ್ತಿಗೂ ಸಹ ಬೆಂಗಳೂರು ನಗರದ ಬಹಳಷ್ಟು ಬಡಾವಣೆಗಳಲ್ಲಿ ನೀರಿನ ಹಾಹಾಕಾರ ಇದೆ. ಒಂದು ದಿವಸ ನೀರು ಬಂದರೆ ನಾಲ್ಕು ದಿವಸ ನೀರು ಬರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಕಂಠೀರವ ನಗರ ಎಂದು ಒಂದು ಸ್ಲಂ ಇದೆ. ಅದು ಅಧಿಕಾರಿಗಳಿಗೆ ಒಂದು ತರಹ ದಿನಾ ಸಾಯುವವರಿಗೆ ಅಳುವವರು ಯಾರು ಎಂದು ಹೇಳುವ ಹಾಗೆ ನಾವು ಎಷ್ಟು ಸಾರಿ ಹೇಳಿದರೂ ಅದು ಹೋಗುವುದಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲಿಯೇ ಇದ್ದಾರೆಂದು ಅಂದುಕೊಂಡಿದ್ದೇನೆ. ನಿರಂತರವಾಗಿ ಅವರ ಗಮನಕ್ಕೆ ತರುತ್ತಿದ್ದೇವೆ. ಬೆಂಗಳೂರು ನಗರದಲ್ಲಿ ಅಂತರ್ಜಲ ಹಾಳಾಗುವುದಕ್ಕೆ ಪ್ರಮುಖವಾದ ಕಾರಣ, ಬೆಂಗಳೂರನ್ನು ಮೂಲಭೂತವಾಗಿ ಕಟ್ಟಿದ್ದೇ ಕೆರೆಗಳ ಆಧಾರದ ಮೇಲೆ. ಆದರೆ ಇವತ್ತು ಕೆರೆಗಳು ಸಂಪೂರ್ಣವಾಗಿ ನಾಶವಾಗಿವೆ. ಈ ಸದನದಲ್ಲಿ ನಾನು ಬಹಳಷ್ಟು ಸಾರಿ ಗಮನಿಸಿದ್ದೇನೆ. ಪ್ರತಿ ವರ್ಷ ಬರ, ಅತಿ ವೃಷ್ಟಿ ಇಲ್ಲ ಅನಾವೃಷ್ಟಿ ಬಗ್ಗೆ ಚರ್ಚೆ ಆಗುತ್ತಲೇ ಇರುತ್ತದೆ. ನಾವು 'ಸಂಕಟ ಬಂದಾಗ ವೆಂಕಟರಮಣ' ಎಂದ ಹಾಗೆ ಈ ತರಹ ಸಮಸ್ಯೆಗಳು ಬಂದಾಗ ಚರ್ಚೆ ಮಾಡುತ್ತೇವೆ. ಆದರೆ ದೂರದೃಷ್ಟಿಯ ಕಾರ್ಯಕ್ರಮಗಳನ್ನು ಯೋಚನೆ ಮಾಡುವುದಕ್ಕೆ ಸಮಯವೂ ಇರುವುದಿಲ್ಲ. ಚರ್ಚೆಗೂ ನಾವು ಹೆಚ್ಚಿನ ಒತ್ತು ಕೊಡುವುದಿಲ್ಲ.

ನಾನು ಇಲ್ಲಿರತಕ್ಕಂತಹ ಸದಸ್ಯರಿಗೆ ಮತ್ತು ಸರ್ಕಾರಕ್ಕೆ ಹಾಗೂ ಪ್ರಧಾನ ಕಾರ್ಯದರ್ಶಿಗಳಿಗೆ ವಿನಂತಿ ಮಾಡುವುದೇನೆಂದರೆ, ದೂರದೃಷ್ಟಿ ಯೋಜನೆಗಳನ್ನು ಹಾಕಿಕೊಂಡು, ಬಹುಶಃ ಸದನದ ಸದಸ್ಯರಿಗೆ ಮತ್ತು ಬರತಕ್ಕಂತಹ ಸಚಿವರಿಗೆ ಈ ದಿಕ್ಕಿನಲ್ಲಿ ಯೋಜನೆ ಆಗತಕ್ಕಂಥದ್ದು ಬಹಳ ಮುಖ್ಯ. ಬೆಂಗಳೂರಿನ ಬಗ್ಗೆ ನಾನು ಈ ಸಂದರ್ಭದಲ್ಲಿ ಒತ್ತು ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಸುರೇಶ್ ಕುಮಾರ್‌ರವರು 21.08.2012ರಲ್ಲಿ ಒಂದು ಪತ್ರ ಬರೆದು BTM ನ 6ನೇ ಹಂತ, ಒಂದನೇ ಘಟ್ಟದಲ್ಲಿ ಮಂಜೂರಾಗಿರುವ 152ನೇ ಸಂಖ್ಯೆ ನಿವೇಶನದಲ್ಲಿ ಬಿಡಿಎ ಯಿಂದ ಅನುಮೋದನೆಗೊಂಡಿರುವ ನಕ್ಷೆ ಪ್ರಕಾರ ಮನೆ ನಿರ್ಮಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಮೂರು ವರ್ಷಗಳಾದರೂ ನೀರಿನ ಸೌಕರ್ಯ ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಈ ಲೇಔಟ್‌ನಲ್ಲಿರುವ ಮನೆಗಳಿಗೆ ನೀರಿನ ಸೌಕರ್ಯ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ ಎಂದು ತಿಳಿಸಿರುತ್ತಾರೆ. ಇದೇ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಮುಖ್ಯಮಂತ್ರಿಗಳೂ ಸಹ ಜಲ ಮಂಡಳಿಗೆ ಪತ್ರ ಬರೆದಿದ್ದಾರೆ. ಅದೂ ಅಲ್ಲದೆ ಸುಜಲ ಎನ್ನತಕ್ಕಂತಹ ಒಂದು ಯೋಜನೆ ಅಡಿಯಲ್ಲಿ ಶಂಕರನಾರಾಯಣ ರವರ ಅರ್ಜಿಯನ್ನು ತಮ್ಮ ಮುಖೇನ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಜನಗಳಿಗೆ ನೀರು ಕೊಡುತ್ತೇವೆಂದು 3,000 ರೂ. ಕಟ್ಟಿಸಿಕೊಂಡು ಎಷ್ಟು ದಿವಸಗಳಾಗಿವೆ ಎಂಬ ಮಾಹಿತಿಯನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಡುತ್ತೇನೆ. ಇದು ಯಾವ ರೀತಿಯಾದ ಯೋಜನೆ? ಬಿಡಿಎದವರು ಒಂದು ಲೇಔಟ್ ಮಾಡಿದ ಮೇಲೆ, ನೀವು ಆ ಲೇಔಟ್

ಮಾಡುವಾಗಲೇ ಕುಡಿಯುವ ನೀರು ಇಂತಹ basic amenities ಕೊಡಿ ಎಂದು ಕೋರ್ಟ್ ಹೇಳುತ್ತದೆ. ಆರನೇ ಹಂತದ ಲೇಔಟ್ ಯಾವಾಗ ಆಗಿದೆ, ಮನೆಗಳು ಕಟ್ಟಿ ಎಷ್ಟು ವರ್ಷಗಳಾಗಿವೆ ಇಂದಿಗೂ ಇಂತಹ ಸ್ಥಿತಿ ಇದೆ. ಬೆಂಗಳೂರು ನಗರದಲ್ಲಿ ನಿರಂತರವಾಗಿ ಬರ ಎದುರಿಸತಕ್ಕಂತಹ ದುಸ್ಥಿತಿಯಲ್ಲಿ ನಾವು ಇದ್ದೇವೆ. ನನ್ನ ಪತ್ರಿಕಾ ಸ್ನೇಹಿತರಾದ ಹಿರಿಯರಾದ ರಂಗಣ್ಣರವರು ಹೇಳುತ್ತಿದ್ದರು, ಬೆಂಗಳೂರು ನಗರದಲ್ಲಿ ಬೇಸಿಗೆ ಬಂದಾಗ water borne disease ಹೇಗೆ ಆಗುತ್ತದೆ ಎನ್ನುವುದಕ್ಕೆ ಅವರ ರಸ್ತೆಯನ್ನೇ ಉದಾಹರಣೆ ಕೊಡುತ್ತಿದ್ದರು. ಬೆಂಗಳೂರು ನಗರದಲ್ಲಿ ಸ್ಯಾನಿಟರಿ ನೀರು ಅವರ ಮನೆಗೆ ನುಗ್ಗಿ ಕೊನೆಗೆ ಯಾರೂ ಬರದೆ ಅವರೇ ದುರಸ್ತಿ ಮಾಡಿ ಒಂದೊಂದು ಮನೆಗೆ ಐದ್ಯೆದು ಸಾವಿರ ಖರ್ಚು ಮಾಡಿ ಆಯಿತು. ನಾವೇನೋ ಸ್ಥಿತಿವಂತರು ಹೇಗೋ ಕಷ್ಟಪಟ್ಟು ಮಾಡುತ್ತೇವೆ. ಬೇರೆಯವರ ಗತಿ ಏನು? ಅವರು ಇನ್ನೂ ಒಂದು ಉದಾಹರಣೆ ಕೊಟ್ಟರು. Water borne disease ನಲ್ಲಿ ಕಳೆದ ಕೆಲವು ವರ್ಷಗಳ ಹಿಂದೆ ನಾನು ನನ್ನ ತಂಗಿಯನ್ನು ಕಳೆದುಕೊಂಡೆ ಎಂದು ಹೇಳಿದರು. ನಾನು ಏಕೆ ಇದನ್ನು ಉಲ್ಲೇಖ ಮಾಡುತ್ತೇನೆಂದರೆ, ಬೆಂಗಳೂರು ನಗರದಲ್ಲಿ ಒಂದು ಕಡೆ ಹೈರೈಸ್ ಬಿಲ್ಡಿಂಗ್ ಕೊಡುತ್ತಿದ್ದೀರಿ. ಅವರಿಗೂ water ensure ಮಾಡುತ್ತೀರಿ, ನನ್ನ ಬಳಿ ಇಂತಹ 20 ಪ್ರಕರಣಗಳು ಇವೆ, ಇವನ್ನು ತಮಗೆ ಕಳುಹಿಸಿ ಕೊಡುತ್ತೇನೆ. ನಾವು ಮುಂದಿನ ನಾಲ್ಕನೇ ಹಂತ, 2ನೇ ಫೇಸ್ ನಲ್ಲಿ ನೀರು ಕೊಡುತ್ತೇವೆಂದು ಒಂದು ಕಡೆ assurance ಕೊಡುತ್ತೀರಿ,

core ಬೆಂಗಳೂರಿನಲ್ಲಿ ಹೈರೈಸ್ ಬಿಲ್ಡಿಂಗ್‌ಗಳನ್ನು ಕೊಡುವುದನ್ನು ದಯವಿಟ್ಟು ನಿಲ್ಲಿಸಿ: Outskirts ನಲ್ಲಿ ಮಾಡಿ. ಬೆಂಗಳೂರು ನಗರದಲ್ಲಿ sanitary congestion ಆಗುತ್ತಿದೆ, water scarcity ಜಾಸ್ತಿಯಾಗುತ್ತಿದೆ. Traffic congestion ಆಗುತ್ತಿದೆ. ಬೆಂಗಳೂರು ನಗರದಲ್ಲಿ ಬರ ಬರಲಿಕ್ಕೆ ನಮ್ಮ ಅವೈಜ್ಞಾನಿಕ ನಗರದ ಸ್ಥಿತಿಯೇ ಕಾರಣ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ಕಾಡಾನೆಗಳು ನಾಡಿಗೆ ನುಗ್ಗುತ್ತಿವೆ ಎಂದು ಓದುತ್ತಿದ್ದೇವೆ. ಬಂಡೀಪುರ ಅರಣ್ಯದಲ್ಲಿ ಟ್ಯಾಂಕರ್‌ಗಳಲ್ಲಿ ನೀರು ಹೊಡೆಯುತ್ತಿದ್ದಾರೆಂದು ನಾನು ಪತ್ರಿಕೆಗಳಲ್ಲಿ ಓದಿದೆ. ಎಂತಹ ಸ್ಥಿತಿಗೆ ಬಂದಿದ್ದೇವೆ?

ಟ್ಯಾಂಕರ್‌ಗಳಲ್ಲಿ ನೀರನ್ನು ಬಂಡೀಪುರ ಫಾರೆಸ್ಟ್‌ಗೆ ಪೂರೈಕೆ ಮಾಡುತ್ತಿದ್ದಾರೆ ಎಂದು ಹೇಳಿರತಕ್ಕಂಥದ್ದನ್ನು ನಾವು ಪೇಪರ್‌ನಲ್ಲಿ ಓದಿದೆವು. ಎಂಥ ಸ್ತಿತಿಗೆ ನಾವು ಬಂದಿದ್ದೇವೆ ನೋಡಿ? ಬಹುಶಃ ಬೆಂಗಳೂರಿನ ಸುತ್ತಮುತ್ತ ಬೀಳುತ್ತಿರಕ್ಕಂಥ ಮಳೆ ಪ್ರಮಾಣದ ಬಗ್ಗೆ ನಾನು ಕಳೆದ 50 ರಿಂದ 60 ವರ್ಷಗಳ ಅಂಕಿ ಅಂಶಗಳನ್ನು ತೆಗೆದುನೋಡಿದಾಗ ಅಂಥದ್ದೇನೂ ಬದಲಾವಣೆಯಾಗಿಲ್ಲ. ಇವತ್ತು ಬೆಂಗಳೂರು ನಗರದ ಸುತ್ತಮುತ್ತ ಬರತಕ್ಕಂಥ ಮಳೆ ಬಂದಾಗ ಕೆರೆಗಳಲ್ಲಿ ಏನು ನೀರು ಸಂಗ್ರಹಣೆಯಾಗುತ್ತಿತ್ತೋ ಅಂಥ ಕೆರೆಗಳನ್ನೇ ನಾಶ ಮಾಡಿರುವುದರಿಂದ ಇವತ್ತು ನಾವು ಇಂಥ ಸ್ಥಿತಿಗೆ ಬರುತ್ತಿದ್ದೇವೆ. ನೀರಾವರಿ ಸಚಿವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ಈಗ ಸದನದಲ್ಲಿ ಇಲ್ಲವೆಂದು ನಾನು

ತಿಳಿದುಕೊಂಡಿದ್ದೇನೆ. ಆದುದರಿಂದ ಅವರಿಗೆ ತಮ್ಮ ಮುಖೇನ ವಿನಂತಿ ಮಾಡುವುದೇನೆಂದರೆ, ಈ ಬೆಂಗಳೂರು ನಗರವನ್ನು 874 ಚ.ಕಿ.ಮೀ. ವರೆಗೂ ಬೆಳೆಸಿರುವುದರಿಂದ ಬಹುಶಃ ಅಲ್ಲೆಲ್ಲಾ ಆಗಿರತಕ್ಕಂಥ ಮತ್ತು ಅಗತಕ್ಕಂಥ ಬಡಾವಣೆಗಳಲ್ಲಿ ಮುಂದಿನ ದಿನಗಳಲ್ಲಿ ನಿರ್ಮಾಣವಾಗುವ ಮನೆಗಳಿಗೆ ನೀರನ್ನು ಪೂರೈಕೆ ಮಾಡಲು ಅಗತ್ಯವಿರುವ ನೀರನ್ನು ಹೇಗೆ ತರುತ್ತೀರ? ಈಗ ಫೆಬ್ರವರಿ ತಿಂಗಳಿನಲ್ಲಿಯೇ ನೀರಿನ ಬವಣೆ ಕಿತ್ತು ತಿನ್ನುತ್ತಿದೆ. ಇಂಥ ಒಂದು ಬರದ ಸ್ಥಿತಿಯಲ್ಲಿ ನೀರನ್ನು ಪೂರೈಕೆ ಮಾಡುವ ವಿಚಾರದಲ್ಲಿ ಒಂದು ಶಾಶ್ವತವಾದ ನೆಲೆಗಟ್ಟನ್ನು ಹಾಕಿ ಇಲ್ಲದೇ ಹೋದರೆ ನೀವು ನಗರವನ್ನು ಸೀಝ್ ಮಾಡಿ. ಗ್ರೋತ್‌ನ್ನು ಸೀಝ್ ಮಾಡಿ, ವರ್ಟಿಕಲ್ ಗ್ರೋತ್‌ನ್ನು ಕೊಡಬೇಡಿ. ಕೋರ್ ಬೆಂಗಳೂರಿನಲ್ಲಿ ದಯವಿಟ್ಟು ಕೊಡಬೇಡಿ. ಬೆಂಗಳೂರಿನಲ್ಲಿ ಈಗಾಗಲೇ ನಾಲ್ಕೈದು ಲಕ್ಷ ಫ್ಲ್ಯಾಟ್‌ಗಳು ಖಾಲಿ ಇವೆ. ಇಲ್ಲಿಗೆ ನೀರನ್ನು ಎಲ್ಲಿಂದ ತೆಗೆಯುತ್ತಿದ್ದಾರೆಂದರೆ, ಈಶ್ವರಪ್ಪನವರೆ, ಒಂದು ಅಪಾರ್ಟ್‌ಮೆಂಟ್‌ನಲ್ಲಿ 25 ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ. ನನ್ನ constituency ಪಕ್ಕದಲ್ಲಿ GKW Factory ಇತ್ತು ಅವರಿಗೆ ನೀರು ensure ಮಾಡುತ್ತೀರ? ಅವರು 2 ಕೋಟಿ, ಮೂರು ಕೋಟಿ ಕೊಟ್ಟು ಫ್ಲ್ಯಾಟ್‌ಗಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲಿಂದ ನೀರು ತೆಗೆಯುತ್ತಾರೆಂದರೆ ಬೋರ್‌ವೆಲ್‌ನಿಂದ ತೆಗೆಯುತ್ತಾರೆ. ಸವಿತಾ–ಸಂಪಿಗೆ ಟಾಕೀಸ್ ಪಕ್ಕದಲ್ಲಿ ಮಂತ್ರಿ ಅಪಾರ್ಟ್‌ಮೆಂಟ್‌ನಲ್ಲಿ 25 ಬೋರ್‌ವೆಲ್‌ಗಳನ್ನು ತೋಡಿದರು. ಅಲ್ಲಿ 1000 ದಿಂದ 1500 ಅಡಿಯವರೆಗೂ ಬೋರ್‌ವೆಲ್

ತೋಡಿದ್ದಾರೆ. ನಾನು ಅವತ್ತು ರಾಜಾಜಿನಗರದ ಶಾಸಕನಾಗಿದ್ದೆ. ಅವರು ಆ ರೀತಿ ಬೋರ್‌ವೆಲ್ ತೋಡಿದ್ದರಿಂದ ಶ್ರೀರಾಂಪುರ ಸುತ್ತಮುತ್ತ ಇರುವ ಬೋರ್‌ವೆಲ್‌ಗಳಲ್ಲಿ ನೀರು ಹೊರಟು ಹೋಯಿತು. ಇವತ್ತು ಅವೈಜ್ಞಾನಿಕವಾಗಿ ಜನರಿಗೋಸ್ಕರ ನಿರ್ಮಾಣ ಮಾಡಲು ಕೊಡತಕ್ಕಂಥ ಬಡಾವಣೆಗಳೂ ಕೂಡ ಸರಿಯಾಗಿಲ್ಲ. ಇವತ್ತು ಅವೈಜ್ಞಾನಿಕವಾದ ಮತ್ತು ದೂರದೃಷ್ಟಿಯಿಲ್ಲದ ನಮ್ಮ ರೂಪುರೇಷೆಗಳು ಅನಾಹುತಕ್ಕೆ ಕಾರಣವಾಗುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಬೆಂಗಳೂರಿನಲ್ಲಿರುವ ಬೋರ್‌ವೆಲ್‌ಗಳನ್ನು ರೀ-ಬೋರ್ ಮಾಡಿಸಬೇಕೆಂದು ನಾನು ಹಲವಾರು ಬಾರಿ ಹೇಳಿದ್ದೇನೆ. ಎರಡನೆಯ ಬಾರಿ ಶಾಸಕನಾಗಿ ನೊಂದು ಹೇಳುತ್ತಿದ್ದೇನೆ, ಒಂದು ಬೋರ್‌ವೆಲ್‌ನ್ನು ಕೂಡ ನಾನು ಕೇಳಿದ ಜಾಗದಲ್ಲಿ BWSSB ಯವರು ಕೊರೆಸಿಲ್ಲ. ಏಕೆ ಈ ರೀತಿ ತಾರತಮ್ಯ ಮಾಡುತ್ತಾರೆ? BWSSB ಯಿಂದ ಒಂದು ಕೊಳವೆ ಬಾವಿಯನ್ನು ತೆಗೆಸುವುದಕ್ಕೂ ಇದುವರೆಗೂ ನನ್ನ ಕೈಯಲ್ಲಿ ಆಗಿಲ್ಲ. ಎಂ.ಎಲ್.ಎ. ನಿಧಿಯಿಂದ ನಾನು ಕೊಳವೆ ಬಾವಿಯನ್ನು ತೆಗೆಸತಕ್ಕಂಥ ಸ್ಥಿತಿಗೆ ಬಂತು. ಅದರಲ್ಲಿಯೂ ಒಂದು ಬೋರ್‌ವೆಲ್ ತೆಗೆಸುವುದಕ್ಕೆ ಕೂಡ ನೂರೆಂಟು ವಿಘ್ನಗಳು. ಇವತ್ತು ಶಾಸಕರ ನೇತೃತ್ವದಲ್ಲಿ ಬೆಂಗಳೂರು ನಗರದಲ್ಲಿ ಯಾವುದಾದರೂ ಒಂದು ಕೆಲಸ ಮಾಡಬೇಕೆಂದರೆ ಬಹಳ ಕಷ್ಟವಿದೆ. ಆದಕಾರಣ ಸನ್ಮಾನ್ಯ ಸಭಾಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಪ್ರತಿ ಪಕ್ಷದ ಸದಸ್ಯರಾಗಿರುವುದೇ ಶಾಪವೆ ಎನ್ನುವ ನೋವನ್ನು ಈ ಸಂದರ್ಭದಲ್ಲಿ

ಹೇಳಬಯಸುತ್ತೇನೆ. ಇನ್ನು ಒಳನಾಡು ಮೀನುಗಾರರ ಬಗ್ಗೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಅತೀವ ಬರಗಾಲದಿಂದ ರಾಜ್ಯದಲ್ಲಿ ಆರ್ಥಿಕ ಸಂಕಷ್ಟದಲ್ಲಿ ನಮ್ಮ ಊರಿನ ಪಕ್ಕದಲ್ಲಿರುವ ಮೀನುಗಾರರು ಇದ್ದಾರೆ. ಇವತ್ತು ಬೆಳಿಗ್ಗೆ ಆ ಮೀನುಗಾರರು ನನ್ನ ಮನೆಗೆ ಬಂದು ಮನವಿಯನ್ನು ಕೊಟ್ಟರು. ಮೀನುಗಾರಿಕಾ ಸಚಿವರಾಗಿರತಕ್ಕಂಥ ಆಸ್ನೋಟಿಕರ್‌ರವರು ರಾಯಚೂರಿನಲ್ಲಿ ದಿನಾಂಕ 16-08-2012 ರಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ರಾಜ್ಯದಲ್ಲಿ ಈ ಬಾರಿ ಬರಗಾಲದ ಪರಿಸ್ಥಿತಿಯ ಹಿನ್ನಲೆಯಲ್ಲಿ ಒಳನಾಡು ಮೀನುಗಾರಿಕೆ ಗುತ್ತಿಗೆ ಅವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸಲಾಗಿದೆ. ಕೆರೆಯಲ್ಲಿ ನೀರಿಲ್ಲದೆ ಮೀನುಗಾರಿಕೆ ಸ್ಥಗಿತಗೊಂಡಿದೆ. ಹೀಗಾಗಿ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗಿದೆಯೆಂದು ಹೇಳಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಆಗ ಅವರಿಗೆ ಮೀನುಗಾರರು ಮನವಿಯನ್ನು ಕೊಟ್ಟಿದ್ದಾರೆ. ಮುಂದಿನ ವರ್ಷಕ್ಕೆ ವಿಸ್ತರಿಸುತ್ತೇವೆಂದು ಹೇಳಿದ್ದಾರೆ ಮತ್ತು ಇವತ್ತು 2 ಸಾವಿರ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶವಿದೆ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರು ಹೇಳಿರತಕ್ಕಂಥ ಹಿನ್ನೆಲೆಯಲ್ಲಿ ಇವತ್ತು ನೀರಿಲ್ಲದೆ ಆ ಒಳನಾಡು ಮೀನುಗಾರಿಕೆ ನಡೆಯದೆ ಆ ಕಸುಬನ್ನು ಮಾಡುವವರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ತುಮಕೂರಿನಲ್ಲಿ ತಿಗಳರ ಪಾಳ್ಯವೆಂದು ಇದೆ. ಅಲ್ಲಿರುವ ಕೆರೆಗಳಲ್ಲಿ ನೀರಿಲ್ಲದೆ ಇವತ್ತು ಮೀನು ಹಿಡಿಯುವುದಕ್ಕೆ ಆಗಿಲ್ಲ. ಇವತ್ತು ಆ ಮೀನುಗಾರರು ನನ್ನ ಮನೆಗೆ ಬೆಳಗ್ಗೆಯೇ ಬಂದು ಮನವಿ ಕೊಟ್ಟು ಈಗ ಬರದ ಬಗ್ಗೆ ಚರ್ಚೆಯಾಗುತ್ತಿರುವುದರಿಂದ ಸದನದಲ್ಲಿ ಸರ್ಕಾರದ ಜೊತೆ

ಮಾತನಾಡಿ ನಮ್ಮ ಸಮಸ್ಯೆಯನ್ನು ಪರಿಹರಿಸಿ ಎಂದು ಕೇಳಿಕೊಂಡರು. ಈ ಮನವಿಯನ್ನು ತಮ್ಮ ಮುಖೇನ ಸರ್ಕಾರದ ಗಮನಕ್ಕಾಗಿ ಕಳುಹಿಸುತ್ತೇನೆ. ಬೆಂಗಳೂರು ನಗರ ಒಂದು ರೀತಿಯಾಗಿ ನಮ್ಮ ಅವೈಜ್ಞಾನಿಕ ಪದ್ಧತಿಯಿಂದ ಹತಾಶ ಸ್ಥಿತಿಗೆ ತಲುಪತಕ್ಕಂಥ ಸ್ಥಿತಿಗೆ ಬಂದಿದೆ. ದಯವಿಟ್ಟು ರೀ-ಬೋರ್ ಮಾಡುವುದಕ್ಕೆ ಜಲ ಮಂಡಳಿ ಮುಂದೆ ಬರಲಿ. ಇದರ ಜೊತೆಗೆ ನೀರು ಸೋರಿಕೆ ಆಗುತ್ತಿರತಕ್ಕಂಥದ್ದನ್ನು ತಡೆಗಟ್ಟಬೇಕಾಗಿದೆ. ಕೊಳವೆಗಳನ್ನು ಬದಲಾಯಿಸುತ್ತೇವೆಂದು ಹೇಳಿದ್ದರು. ಹಲವಾರು ಜನ ಸಚಿವರುಗಳು ಬಂದು ಹೋದರು. ಯಾವ ಸಚಿವರು ಇರುತ್ತಾರೋ ಅವರ ಕಡೆಯಲ್ಲಿರತಕ್ಕಂಥ ಪೈಪ್‌ಗಳು ಬದಲಾವಣೆಯಾಗುತ್ತದೆ, ಆದರೆ ಬೇರೆ ಕಡೆಗಳಲ್ಲಿ ಹಾಗೆಯೇ ಹಳೆಯ ಪೈಪ್‌ಗಳೇ ಉಳಿದುಬಿಟ್ಟಿದೆ. ಹೀಗಾಗಿ ಸೋರಿಕೆ ಪಾಡಿಗೆ ಸೋರಿಕೆ ಆಗುತ್ತಲೇ ಇರುತ್ತದೆ. ದಯವಿಟ್ಟು ಇಂಥದ್ದಕ್ಕೆ ಅವಕಾಶ ಕೊಡಬೇಡಿ. ಈ ನಗರದಲ್ಲಿ ಇವತ್ತು ಕುಡಿಯುವ ನೀರಿನ ಹಾಹಾಕಾರ ದಿನೇದಿನೇ ಜಾಸ್ತಿಯಾಗುತ್ತಿದೆ. ಇದನ್ನು ದೇವರೇ ಕಾಪಾಡಬೇಕು ಎಂದು ಹೇಳಿ ಕುಳಿತುಕೊಳ್ಳುವುದು ಬೇಡ. ಮನುಷ್ಯ ಮನಸ್ಸು ಮಾಡಿ ಪ್ರಯತ್ನ ಮಾಡಿದರೆ ನೀರಿನ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿದೆ. ಮನುಷ್ಯ ಹೇಗೆ ಪ್ರಯತ್ನ ಮಾಡಬೇಕು ಎಂಬ ಬಗ್ಗೆ ದೂರದೃಷ್ಟಿಯನ್ನಿಟ್ಟುಕೊಂಡು ಚಿಂತನೆಯನ್ನು ಮಾಡಿ ಈ ನಿಟ್ಟಿನಲ್ಲಿ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುವುದಕ್ಕೆ ಸಾಧ್ಯತೆಯಿದೆ ಎನ್ನತಕ್ಕಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಒಂದು ಕಡೆ, ಇನ್ನೊಂದು ಕಡೆ ಬರವಿದೆ. ಈಗಾಗಲೇ ಸರ್ಕಾರ 176 ತಾಲ್ಲೂಕುಗಳಲ್ಲಿ ಬರವಿದೆಯೆಂದು ಡಿಕ್ಲೇರ್ ಮಾಡಿದೆ. ಕೇಂದ್ರದ ಕೃಷಿ ಸಚಿವರೂ ಕೂಡ ರಾಜ್ಯಸಭೆಯಲ್ಲಿ ಇವತ್ತು ಬರಗಾಲ ಇರತಕ್ಕಂಥ ರಾಜ್ಯಗಳಲ್ಲಿ ಕರ್ನಾಟವೇ ನಂಬರ್ ಒಂದರ ಸ್ಥಾನದಲ್ಲಿದೆಯೆಂದು ಹೇಳಿಕೆ ನೀಡಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಶಾಸಕರಿಗೆ ಒಂದು ಕೋಟಿಯನ್ನೋ ಅಥವಾ ಒಂದೂವರೆ ಕೋಟಿ ರೂ.ಗಳನ್ನೋ ಸರ್ಕಾರ ಕೊಟ್ಟಿರಬಹುದು. ಆದರೆ ಇವತ್ತು ನೀರಿನ ಸಮಸ್ಯೆ ಹೇಗಿದೆಯೆಂದರೆ, ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಕನಿಷ್ಠ 900 ಹಳ್ಳಿಗಳಿರಬಹುದು. ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 1500 ಹಳ್ಳಿಗಳು ಬರಬಹುದು. ನನ್ನ ಕ್ಷೇತ್ರದಲ್ಲಿ ನಾಲ್ಕು ಹೋಬಳಿಗಳು ಇವತ್ತು Dry area ಆಗಿವೆ. 800 ಅಡಿ, 900 ಅಡಿ, 1000 ಅಡಿಯವರೆಗೂ ಬೋರ್‌ವೆಲ್ ಕೊರೆಸಿದರೂ ನೀರು ಬರುತ್ತಿಲ್ಲ. ನೀರು ಬಂದರೂ ಇವತ್ತು ಬೋರ್‌ವೆಲ್ ತೆಗೆಸಿದರೆ ಇನ್ನೊಂದು ವಾರದಲ್ಲಿ ನೀರು ನಿಂತುಹೋಗುತ್ತದೆ. ಇದರ ಜೊತೆಗೆ ಕೆ.ಇ.ಬಿ. ಯವರದ್ದೂ ಕೂಡ ಒಂದು ರೀತಿ ಕಾಟವಿದೆ. ಒಂದು ಟಿ.ಸಿ. ಹಾಕಿದ ಮೇಲೆ ಬೋರ್ ಹಾಕಿದರೆ ಮತ್ತೆ ಇನ್ನೊಂದು ಕಡೆ ಸ್ವಲ್ಪ ದೂರದಲ್ಲಿ ಬೋರ್ ಹಾಕುತ್ತಾರೆ. ಆಗ ಅದಕ್ಕೆ ಟಿ.ಸಿ. ಕೊಡುವುದಿಲ್ಲ. ಹೀಗಾಗಿ ಒಂದೊಂದು ಹೋಬಳಿಯಲ್ಲಿ ಸುಮಾರು ಐವತ್ತರಿಂದ ಅರವತ್ತು ಕಡೆ ಇವತ್ತು ಬೋರ್ ಹಾಕಿದ್ದಾರೆ. ಆದರೆ ಟಿ.ಸಿ. ಹಾಕಿಲ್ಲ., ಕರೆಂಟ್ ಕೊಡುತ್ತಿಲ್ಲ.

ಆ ಪರಿಸ್ಥಿತಿ ಇವತ್ತು ಉಂಟಾಗಿದೆ. ಈಗಾಲೇ ಸರ್ಕಾರದಿಂದ ಸುಮಾರು ಮೂರು ಮೆಮೊರಾಂಡಮ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಒಂದು ಮೆಮೊರಾಂಡಮ್‌ನ್ನು 2011 ರ ಡಿಸೆಂಬರ್ ತಿಂಗಳಿನಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಜೊತೆಗೆ ಎರಡನೆಯ ಮೆಮೊರಾಂಡಮ್‌ನ್ನು 2012ರ ಮೇ ನಲ್ಲಿ ಕೇಂದ್ರ ಸರ್ಕಾರಕ್ಕೆ ಕೊಡಲಾಗಿದೆ. ಇದರ ಜೊತೆಗೆ ಮೂರನೆಯ ಮೆಮೊರಾಂಡಮ್‌ನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ 15–12–2011ರಲ್ಲಿ ಕೊಟ್ಟಿರುವ ಮೊದಲನೆಯ ಮೆಮೊರಾಂಡಮ್‌ನಲ್ಲಿ ಸುಮಾರು 2605 ಕೋಟಿ ರೂ.ಗಳನ್ನು ಕುಡಿಯುವ ನೀರಿಗೆ ಮತ್ತು ದನಕರುಗಳಿಗೆ ಮೇವಿಗೋಸ್ಕರ ಮತ್ತು ಇಂಧನ ಇಲಾಖೆಯದ್ದೆಲ್ಲವನ್ನೂ ಸೇರಿಸಿ ಕೊಡಬೇಕೆಂದು ಕೇಳಿದ್ದೀರಿ. ಅದೇ ರೀತಿ 2012 ಮೇ ತಿಂಗಳಿನಲ್ಲಿ 123 ತಾಲ್ಲೂಕುಗಳನ್ನು ಸೇರಿಸಿ ಕೊಟ್ಟಿರುವ ಎರಡನೆಯ ಮೆಮೊರಾಂಡಮ್‌ನಲ್ಲಿ ಸುಮಾರು 3600 ಕೋಟಿ ರೂ.ಗಳನ್ನು ಕೇಳಿದ್ದೀರಿ. ಅದೇ ರೀತಿ 2012 ರ ಆಗಸ್ಟ್‌ನಲ್ಲಿ ಕೊಟ್ಟಿರುವ ಮೆಮೊರಾಂಡಮ್‌ನಲ್ಲಿ ಒಟ್ಟಾರೆ ಎಲ್ಲವನ್ನೂ ಸೇರಿಸಿ 11469 ಕೋಟಿ ರೂ.ಗಳನ್ನು ಕೇಳಿದ್ದೀರಿ. ಇಲ್ಲಿಯವರೆಗೆ ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರವನ್ನು ಕೇಳಿರುವುದು 18 ಸಾವಿರ ಕೋಟಿ ರೂ.ಗಳನ್ನು ಎಂದು ನಾನು ಪೇಪರ್‌ನಲ್ಲಿ ಬಂದಿರುವುದನ್ನು ನೋಡಿದೆ. ಏಕೆಂದರೆ ತಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಮಾನ್ಯ ಅನಂತಕುಮಾರ್‌ರವರು ಈ ಬಗ್ಗೆ ಹೇಳಿಕೆಯನ್ನು ಕೊಟ್ಟು ಒಟ್ಟು ರಾಜ್ಯದಲ್ಲಿ 18200 ಕೋಟಿ ರೂ.ಗಳ

ಪ್ಯಾಕೇಜ್ ಕೊಡಬೇಕೆಂದು ಕೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗೇನಾಗಿದೆಯೆಂದರೆ, ನೀವು ಕೇಂದ್ರದ ಬಗ್ಗೆ ಹೇಳುತ್ತೀರಿ. ಅವರು ರಾಜ್ಯಕ್ಕೆ ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಹೀಗಾಗಿ ನಾವು ನಿಮ್ಮಗಳ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡು ಇವತ್ತು ದನಕರುಗಳಿಗೆ ಕುಡಿಯಲು ನೀರಿಲ್ಲವಾಗಿದೆ. ಪ್ರತಿ ಗ್ರಾಮದಲ್ಲಿಯೂ ದನಕರುಗಳಿಗೆ ಕುಡಿಯುವನೀರನ್ನು ಒದಗಿಸಲು ಒಂದು ಗ್ರಾಮಕ್ಕೆ ಕನಿಷ್ಠ 4 ದೊಡ್ಡ ತೊಟ್ಟಿಗಳನ್ನು ಕಟ್ಟಿಸಿ ಅದಕ್ಕೆ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡುವುದು ಸೂಕ್ತವಾಗಿದೆ. ತಾಲ್ಲೂಕು ಪಂಚಾಯತಿಗಳ ಇ.ಓ. ಇರಬಹುದು, ಜಿಲ್ಲಾ ಪಂಚಾಯಿತಿಯ ಇಂಜಿನಿಯರ್‌ಗಳಿಗೆ ತಾವು ಈ ಬಗ್ಗೆ ನಾಳೆಯೇ ಡೈರೆಕ್ಷನ್ ಕೊಡಬೇಕು. ಪ್ರತಿ ಗ್ರಾಮದಲ್ಲಿಯೂ ಈ ರೀತಿಯ ವ್ಯವಸ್ಥೆ ಆಗಬೇಕು. ಇವತ್ತು ತಾವೇನು ಮಾಡಿದ್ದೀರಿ? ಇವತ್ತು ತಾವು ನೋಡಿರಬಹುದು. ಈಗ ಇಲ್ಲಿ ಈಶ್ವರಪ್ಪನವರು ಕುಳಿತಿದ್ದಾರೆಂದು ನಾನು ಹೇಳುವುದಿಲ್ಲ. ಇವತ್ತು ಐ.ಎಂ.ಎಸ್. ನಲ್ಲಿ ಈಗಾಲೇ ಸುಮಾರು 1964 ಕೋಟಿ ರೂ.ಗಳಲ್ಲಿ ರಾಜ್ಯದಲ್ಲಿ ಸುಮಾರು 32 ಸಾವಿರ ಹಳ್ಳಿಗಳ ಬಗ್ಗೆ ತಾವು ಕ್ರಮ ತೆಗೆದುಕೊಂಡಿದ್ದೀರಿ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಹಾಕಿ I.M.S ನಲ್ಲಿ feed ಮಾಡಿ ಕೇಂದ್ರ ಸರ್ಕಾರದ ಅನುಮತಿಯನ್ನು ತೆಗೆದುಕೊಂಡಿದ್ದೀರಿ. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ನಾವು ಸುಮ್ಮನೆ ಕುಳಿತಿದ್ದೀರಿ ಎಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ

ತಾವು 32,712 ಹಳ್ಳಿಗಳಿಗೆ 1,857 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದುಕೊಂಡು ಅರ್ಧ ಸಮಸ್ಯೆಯನ್ನು solve ಮಾಡಿದ್ದೀರಿ. ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಪ್ರತಿ ಹಳ್ಳಿಯಲ್ಲಿ ದನಕರುಗಳಿಗೆ ಕುಡಿಯುವ ನೀರಿಗೆ ಎರಡು ಅಥವಾ ಮುರ್ನಾಲ್ಕು ತೊಟ್ಟಿಗಳನ್ನು ಕಟ್ಟಿಸಬೇಕು. ಕೆಲವು ಕಡೆ ಹಳ್ಳದಲ್ಲಿ ಗುಂಡಿ ತೆಗೆದರೆ ನೀರು ಬರುತ್ತದೆ. ಅಂತಹ ಕಡೆಗಳಲ್ಲಿ ಗುಂಡಿ ತೆಗೆದು ದನಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಅದಕ್ಕೆ ಇವತ್ತೇ ನೀವು ದಯಮಾಡಿ ಜಿಲ್ಲಾಧಿಕಾರಿಗಳಿಗೆ ಅಥವಾ ಮುಖ್ಯ ಕಾರ್ಯದರ್ಶಿಯವರಿಗೆ ಸೂಚನೆ ಕೊಡಬೇಕು. ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಇನ್ನೂ ಕಷ್ಟದ ಪರಿಸ್ಥಿತಿ ಬರುವ ದಿನಗಳಿವೆ. ಅದಲ್ಲದೆ ಈಗ ಮಾನ್ಯ ಮುಖ್ಯಮಂತ್ರಿಗಳವರೇ ಇಂಧನ ಖಾತೆಯನ್ನು ನಿರ್ವಹಿಸುತ್ತಿರುವುದರಿಂದ ಇಂಧನ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ direction ಕೊಡಬೇಕಾಗುತ್ತದೆ. ಅವರಿಗೆ direction ಕೊಟ್ಟು ನೀವು ಕಾಯಕೂಡದು, ಇವತ್ತು ಹಣ ಬರುತ್ತದೋ ಬಿಡುತ್ತದೋ ಗೊತ್ತಿಲ್ಲ. ನಿಮ್ಮ ಜಿಲ್ಲಾಪಂಚಾಯತ್ ಇಲಾಖೆಯಿಂದ ಒಂದು undertaking ತೆಗೆದುಕೊಂಡು, ಕೂಡಲೇ T.C. ಹಾಕುವುದಿರಬಹುದು, current suplly ಮಾಡುವುದಿರಬಹುದು, ಎಷ್ಟು ಬೋರ್‌ವೆಲ್ ಹಾಕಿದ್ದಾರೆ, ಅದಕ್ಕೆ ಹೊರಗಡೆ ದೂರದಲ್ಲಿ ಹಾಕಿದ್ದರೂ ಕೂಡ T.C. ಹಾಕಿಕೊಡುವಂತಹ

ಕೆಲಸವನ್ನು ಮಾಡಬೇಕಾಗುತ್ತದೆ. ಇಂಧನ ಇಲಾಖೆಯವರು ಒಂದೊಂದು ಟಿಸಿಗೆ ಒಂದು ಲಕ್ಷ ರೂಪಾಯಿ ಕಟ್ಟಿ ಎಂದರೆ ಎಲ್ಲಿಂದ ಕಟ್ಟುತ್ತಾರೆ? ನಾನು ಇಂಧನ ಮಂತ್ರಿಯಾಗಿದ್ದಾಗ undertaking ತೆಗೆದುಕೊಂಡು ದುಡ್ಡು ಬಂದಮೇಲೆ ಕೊಡುತ್ತಾರೆ ಎಂದು direction ಕೊಟ್ಟಿದ್ದೇನೆ. ಇಲ್ಲದಿದ್ದರೆ ಅಲ್ಲಿಯವರೆಗೂ ಕಾಯಬೇಕಾಗುತ್ತದೆ. ಇಂಧನ ಇಲಾಖೆ ಏನಾದರೂ ಪಾಪರ್ ಆಗಿದೆಯಾ? ಅವರ ಹತ್ತಿರ T.C. ತರುವುದಕ್ಕೆ ದುಡ್ಡು ಇಲ್ಲವೇ? ನಮಗೆ ಹಳ್ಳಿ ಕಡೆ ಹೋಗುವುದಕ್ಕೆ ಆಗುವುದಿಲ್ಲ. ಇವತ್ತು ಹಳ್ಳಿಗಳಲ್ಲಿ ಮೂರ್ನಾಲ್ಕು ತಿಂಗಳಾದರೂ T.C. ಗಳನ್ನು ಹಾಕಿಲ್ಲ, ಆ ಪರಿಸ್ಥಿತಿ ಇದೆ. ಇವತ್ತು ಕುಡಿಯುವ ನೀರಿನ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕಾಗುತ್ತದೆ. ತಾವು ಇಲ್ಲಿ ಒಂದು ಮಾಹಿತಿಯನ್ನು ಕೊಟ್ಟಿದ್ದು ಆ ಪ್ರಕಾರ ಕೇಂದ್ರ ಸರ್ಕಾರ ಹಣವನ್ನು ಕೊಡುವಾಗ ಬೇರೆ ರಾಜ್ಯಕ್ಕೆ ಕೊಟ್ಟಿದ್ದು, ನಮ್ಮ ರಾಜ್ಯಕ್ಕೆ ಕೊಟ್ಟಿಲ್ಲವೆನ್ನುವ ಭಾವನೆಯನ್ನು ತಾವು ವ್ಯಕ್ತಪಡಿಸಿದ್ದೀರಿ. ಇವತ್ತು ತಾವು ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿಗೆ ಏನು ಪರಿಸ್ಥಿತಿ ಇದೆ ಎಂದು ಮನವರಿಕೆ ಮಾಡಬೇಕು ಎಂದು ನಾನು ತಮಗೆ ಮನವಿ ಮಾಡುತ್ತಿದ್ದೇನೆ. ಇವತ್ತು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮಹಾರಾಷ್ಟ್ರದಲ್ಲಿ 122 ತಾಲ್ಲೂಕು ಇದೆ, ಅದಕ್ಕೆ ಕೇಂದ್ರ ಸರ್ಕಾರ 501 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಅದೇ ರೀತಿ ರಾಜಾಸ್ಥಾನದಲ್ಲಿ ಐದು ಜಿಲ್ಲೆಗೆ 424 ಕೋಟಿ ರೂಪಾಯಿ, ಗುಜರಾತ್‌ನಲ್ಲಿ 132 ತಾಲ್ಲೂಕಿಗೆ 320 ಕೋಟಿ ರೂಪಾಯಿ, ಕರ್ನಾಟದಲ್ಲಿ

142 ತಾಲ್ಲೂಕಿಗೆ 195 ಕೋಟಿ ರೂಪಾಯಿ ಎಂದು ಇದೆ. ಇದನ್ನು ನಾನು ಹೇಳುತ್ತಿಲ್ಲ. ಇಷ್ಟು ಹಣ ಕೊಟ್ಟಿದ್ದರೆ ಸಂತೋಷ, ನಾವು ಬೇಡ ಎನ್ನುವುದಿಲ್ಲ. ನಾನು ಪತ್ರಿಕೆಯಲ್ಲಿ ಬಂದಿರುವ ಮಾಹಿತಿಯನ್ನು ಹೇಳುತ್ತಿದ್ದೇನೆ, personal ಆಗಿ ಹೇಳುತ್ತಿಲ್ಲ. ನಾನು ಮಾಹಿತಿ ಇರುವುದನ್ನು ನಿಮಗೆ ಕೊಡುತ್ತಿದ್ದೇನೆ. ನೀವು 18,000 ಕೋಟಿ ರೂಪಾಯಿಗೆ ಮೂರು memorandum ಕೊಟ್ಟಿದ್ದೀರಿ. ಅದಕ್ಕೆ ನೀವು ಇಲ್ಲಿ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ. ನಿಮ್ಮ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದಲ್ಲಿ ಯಾರೂ ಕಾಯಕೂಡದು. ಕುಡಿಯುವ ನೀರಿನದು ಬಿಟು ಬಾಕಿ ಎಲ್ಲಾ ಕೆಲಸವನ್ನು ನಿಲ್ಲಿಸಿಬಿಡಲಿ. ಕೊನೇಪಕ್ಷ ದನಕರುಗಳಿಗೆ ಕುಡಿಯುವ ನೀರನ್ನು ಕೊಡಿ. ಇಲ್ಲಿ ಮಾನ್ಯ ಪಶುಸಂಗೋಪನಾ ಮಂತ್ರಿಗಳು ಇದ್ದಾರೆ. ನಿಮ್ಮ ಮಾಹಿತಿ ಪ್ರಕಾರ ಐದು ಕೋಟಿ ರೂಪಾಯಿ ದುಡ್ಡು ಕೊಟ್ಟುಬಿಟ್ಟು 24,000 ಟನ್ ಮೇವಿಗೆ ವ್ಯವಸ್ಥೆ ಮಾಡಿದ್ದೇವೆಂದು ತಾವು ಕೊಟ್ಟಿದ್ದೀರಿ. ಐದು ಕೋಟಿ ರೂಪಾಯಿಯಲ್ಲಿ ಎಷ್ಟು ಮೇವು ಕೊಡಬಹುದು ಸ್ವಾಮಿ? ದನಕರುಗಳಿಗೆ ಮೇವಿಗೆ ಸಂಬಂಧಪಟ್ಟಂತೆ ಪಶುಸಂಗೋಪನಾ ಇಲಾಖೆಗೆ, ತೋಟಗಾರಿಕೆ ಇಲಾಖೆಗೆ ಮತ್ತು ಕೃಷಿ ಇಲಾಖೆಗೆ ಕೊಡಿ. ನೀವು ಅವರಿಗೆ ವಹಿಸಿಕೊಟ್ಟರೆ ಆ ಇಲಾಖೆಯವರು ಮಾಡುವುದಕ್ಕೆ ತಯಾರು ಇಲ್ಲವೆ? ಅಥವಾ ಅರಣ್ಯ ಇಲಾಖೆಯವರಿಗೆ ಬೆಳೆಯುವುದಕ್ಕೆ ಏನಾದರೂ ಸಮಸ್ಯೆ ಇದೆಯೇ? ದಯಮಾಡಿ ತಾವು ಇದರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು. ನೀವು ಮಾಹಿತಿ ಕೊಟ್ಟಿರುವ ಪ್ರಕಾರ ನಾನು ನೋಡಿದೆ.

ಇವತ್ತು ಗೋಶಾಲೆಗಳಿಗೆ 5 ಕೋಟಿ ಅನುದಾನ ಬಿಡುಗಡೆ ಮಾಡಿದ್ದೇವೆ, 127 ತಾಲ್ಲೂಕಿನಲ್ಲಿ ಬರಗಾಲ ಎಂದು ತಾವು declare ಮಾಡಿದ್ದೀರಿ. ಐದು ಕೋಟಿ ರೂಪಾಯಿ ಕೊಟ್ಟು 24,000 ಟನ್ ಹಸಿರು ಮೇವಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಎಲ್ಲಿಗೆ ಕೊಟ್ಟಿದ್ದೀರಿ? ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಯಾವ ಊರಿಗೆ ಹಸಿರು ಮೇವು ಕೊಟ್ಟಿದ್ದೀರೆಂದು ಹೇಳಿ. ನೀವು ಏಳು ತಾಲ್ಲೂಕುಗಳನ್ನು ಬರಗಾಲ ಎಂದು declare ಮಾಡಿದ್ದೀರಿ 127 ತಾಲ್ಲೂಕುಗಳಲ್ಲಿ ಕೆಲವು ಕಡೆ ನೀವು 25 ಕೋಟಿ ರೂಪಾಯಿ ಕೊಡಿ. ಇವತ್ತು ಸಾವಿರಾರು ರೂಪಾಯಿಯ ಹೋರಿಗಳು ಅಥವಾ ಹಸುಗಳನ್ನು ಕೆಲವರಿಗೆ ಸಾಕುವುದಕ್ಕೆ ಆಗದೆ ಕೊಯ್ಯುವುದಕ್ಕೆ ಹೊಡೆಯುತ್ತಿದ್ದಾರೆ. 25–30 ಸಾವಿರ ರೂಪಾಯಿ ಬೆಲೆ ಬಾಳುವಂತಹ ಎತ್ತುಗಳನ್ನು 5–10 ಸಾವಿರ ರೂಪಾಯಿ ಮಾರುತ್ತಿದ್ದಾರೆ. ಆದುದರಿಂದ ತಾವು ಕೂಡಲೇ ದನಕರುಗಳ ಮೇವಿಗೆ ಎಂದು ಕನಿಷ್ಠ 25 ಕೋಟಿ ರೂಪಾಯಿಯನ್ನು realease ಮಾಡಬೇಕಾಗುತ್ತದೆ. ಒಂದು ಜಿಲ್ಲೆಗೆ ಕನಿಷ್ಠ ಒಂದು ಕೋಟಿ ರೂಪಾಯಿಯಂತೆ realease ಮಾಡಿ. ಈ ಕಾಲದಲ್ಲಿ ಕನಕರುಗಳಿಗೆ ಖಾಯಿಲೆ ಬರುವುದು ಜಾಸ್ತಿ. ಅವುಗಳಿಗೆ ತುರ್ತು ಚಿಕಿತ್ಸೆ ಮಾಡಿಸುವುದಕ್ಕೆ ಕನಿಷ್ಠ ಒಂದೊಂದು ಜಿಲ್ಲೆಗೆ ತಲಾ 50 ಲಕ್ಷ ರೂಪಾಯಿ ಕೊಡಿ. ಒಟ್ಟು 30 ಜಿಲ್ಲೆಗೆ 15 ಕೋಟಿ ರೂಪಾಯಿಯನ್ನು ನೀವು ಇಡಬೇಕಾಗುತ್ತದೆ. ಹಾಗಾಗಿ ನೀವು ಕೇಂದ್ರ ಸರ್ಕಾರದ ಹಣವನ್ನು ಕಾಯುವುದಕ್ಕೆ ಆಗುವುದಿಲ್ಲ. ರಾಜ್ಯ ಸರ್ಕಾರದವರೇ 500 ಕೋಟಿ ರೂಪಾಯಿ ಕೊಡಿ. ಈಗಾಗಲೇ 30 ಕೋಟಿ

ರೂಪಾಯಿಯನ್ನು ಕೊಟ್ಟಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಂತಹ ಉಪ ಮುಖ್ಯಮಂತ್ರಿಗಳು ಹೇಳಿದರು. ಆ 30 ಲಕ್ಷ ರೂಪಾಯಿ ಏತಕ್ಕೆ ಆಗುತ್ತದೆ ಸ್ವಾಮಿ? ಅದರಿಂದ 30 ಬೋರ್‌ವೆಲ್ ಹಾಕುವುದಕ್ಕೆ ಆಗುವುದಿಲ್ಲ. ಬೋರ್‌ವೆಲ್ ಹಾಕಿದಮೇಲೆ ಪೈಪ್‌ಲೈನ್ ಎಳೆಯಬೇಕು, ನಂತರ electricity connection ಗೆ ದುಡ್ಡು ಕಟ್ಟಬೇಕಲ್ಲ. ಇದೆಲ್ಲ ಲೆಕ್ಕ ಹಾಕಿದರೆ ನೀವು ಕನಿಷ್ಠ ಐದು ಕೋಟಿ ರೂಪಾಯಿ ಕೊಟ್ಟರೂ ಲಾಸ್ ಇಲ್ಲ. ಮಾನ್ಯ ಸಿದ್ಧರಾಮಯ್ಯನವರು ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿ ಕೊಡಿ ಎಂದು ಕೇಳಿದರು. ಬೇಕಾದರೆ ಬಾಕಿ ಕಾಮಗಾರಿಗಳನ್ನೆಲ್ಲ ನಿಲ್ಲಿಸಿಬಿಡಿ, ದನಕರುಗಳನ್ನು ಉಳಿಸಿ, ಜನಸಾಮನ್ಯರಿಗೆ ಕುಡಿಯುವ ನೀರನ್ನು ಕೊಡಿ. ಇನ್ನೊಂದು ವಿಚಾರ ಏನೆಂದರೆ ಗದ್ದೆಗಳಲ್ಲಿ ಭತ್ತ ಬೆಳೆದದ್ದೆಲ್ಲ ಕೇರಳ ರಾಜ್ಯಕ್ಕೆ ಹೋಗುತ್ತಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮತ್ತು ತಹಶೀಲ್ದಾರರಿಗೆ ನೀವು ಸೂಚನೆ ಕೊಟ್ಟು ಇವತ್ತು ಕೇರಳ ಇರಬಹುದು ಅಥವಾ ಬೇರೆ ರಾಜ್ಯಕ್ಕೆ ಹೋಗುವುದನ್ನು ತಡೆಹಿಡಿಯಬೇಕಾಗುತ್ತದೆ. ಸರ್ಕಾರದಿಂದ ಹುಲ್ಲು ಖರೀದಿ ಮಾಡಿ. ನಾನು ನೋಡಿದಂತೆ ಒಂದು ಟನ್ ಹುಲ್ಲು ಖರೀದಿ ಮಾಡುವುದಕ್ಕೆ 6,000 ರೂಪಾಯಿ fix ಮಾಡಿದ್ದೀರಿ. ನಾನು ನಮ್ಮ ಜಿಲ್ಲೆಯ ಜಿಲ್ಲಾದಿಕಾರಿಗಳನ್ನು ಕೇಳಿದರೆ ಹತ್ತು ಪೈಸೆ ದುಡ್ಡಿಲ್ಲವೆಂದು ಹೇಳುತ್ತಾರೆ. ಇವತ್ತು ಈ ಪರಿಸ್ಥಿತಿ ಇರುವುದರಿಂದ ದಯಮಾಡಿ ಒಂದೊಂದು ತಾಲ್ಲೂಕು ಕೇಂದ್ರದಲ್ಲಿ ಎರಡರಿಂದ ನಾಲ್ಕು

ಗೋಶಾಲೆಗಳನ್ನು ತೆರೆಯಬೇಕಾಗುತ್ತದೆ. ಈಗ ನಮಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಕೇಂದ್ರ ಸರ್ಕಾರ ವಿತರಣೆ ಮಾಡಿರುವಂತಹ ಅಕ್ಕಿ ಕೊಡಿ ಎಂದು ಕೇಳುತ್ತೇವೆ. ಆದರೆ ದನಕರುಗಳು ಯಾರನ್ನು ಕೇಳುವುದಕ್ಕೆ ಹೋಗುತ್ತವೆ ಸ್ವಾಮಿ? ಅದಕ್ಕೆ ನೀವು ಪ್ರತಿ ಟನ್ ಹುಲ್ಲಿಗೆ ಎಷ್ಟಾದರೂ ಕೊಡಿ, ಆದರೆ ಅದನ್ನು ಖರೀದಿ ಮಾಡಬೇಕು. ಅದರ ಜೊತೆಗೆ ಹೊರರಾಜ್ಯಕ್ಕೆ ಹೋಗುವಂತಹ ಹುಲ್ಲನ್ನು ನೀವು ತಡೆಹಿಡಿಯಬೇಕಾಗುತ್ತದೆ. 2011ರಲ್ಲಿ ರಾಜ್ಯ ಸರ್ಕಾರದ ಬೇಡಿಕೆ 2,600 ಕೋಟಿ ರೂಪಾಯಿ ಕೃಷಿ ಬೆಳೆ ಪರಿಹಾರಕ್ಕೆ ಕೇಳಿದ್ದೀರಿ ಎಂದು ಕೊಟ್ಟಿದ್ದೀರಿ. ಇವತ್ತು ರಾಜ್ಯದಲ್ಲಿ ನೂರಕ್ಕೆ 73% ಬೆಳೆ ಹಾಕಿದ್ದು ಸಂಪೂರ್ಣವಾಗಿ ನಾಶವಾಗಿದೆ. ಇದು ನಾನು ಹೇಳುತ್ತಿರುವುದಲ್ಲ, ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಶರದ್ ಪವಾರ್‌ರವರು ಇಡೀ ರಾಷ್ಟ್ರದಲ್ಲಿ ಕರ್ನಾಟಕ ಬರಗಾಲದ ಪರಿಸ್ಥಿತಿಯಲ್ಲಿ ನಂ.1 ಇದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಲಿ. ಅವರು ಕನಿಷ್ಠ ಐದು ಕೋಟಿ ರೂಪಾಯಿಯನ್ನಾದರೂ ಬಿಡುಗಡೆ ಮಾಡಬೇಕು. ದನಕರುಗಳಿಗೆ ಮೇವು ಖರೀದಿ ಮಾಡುವುದಕ್ಕೆ ಒಂದು ಜಿಲ್ಲಾ ಕೇಂದ್ರಕ್ಕೆ ಒಂದೊಂದು ಕೋಟಿ ರೂಪಾಯಿಯಂತೆ 30 ಕೋಟಿ ರೂಪಾಯಿ, ದನಕರುಗಳ ಚಿಕಿತ್ಸೆಗೆ 15 ಕೋಟಿ ರೂಪಾಯಿ ಹಣ ಕೊಡಬೇಕು.

ಇವತ್ತು ಬರಗಾಲ ಇದೆ, ಹೇಗೂ ನಾಳಿದ್ದು ಬಜೆಟ್ ಮಂಡನೆ ಮಾಡುತಿದ್ದೀರಿ, ಆಗ ರೈತರ entire ಸಾಲ ಮನ್ನಾ ಎಂದು ಮಾಡಿ. ನೀವು 8ನೇ ತಾರೀಖು ಬಜೆಟ್ ಮಂಡನೆ ಮಾಡುವುದಕ್ಕೆ ನಾವು

ಪಕ್ಷಾತೀತವಾಗಿ ಅವಕಾಶ ಮಾಡಿಕೊಟ್ಟಿದ್ದೇವೆ. ಇವತ್ತು ಕಷ್ಟದ ಪರಿಸ್ಥಿತಿ ಇದೆ, ರಾಜ್ಯ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದೆ. ಕೇಂದ್ರ ಸರ್ಕಾರವೇ ಘೋಷಣೆ ಮಾಡಿದೆ. ನೀವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ರಾಷ್ಟ್ರೀಯ ಬ್ಯಾಂಕ್ ಏನಿದೆ ಅದು ರೈತರ entire ಸಾಲವನ್ನು ಮನ್ನಾ ಮಾಡಬೇಕು.

ನಾನು ಇದನ್ನು ಹೇಳುತ್ತಿಲ್ಲ, ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ಹೇಳಿಕೆ ಕೊಟ್ಟಿರುವಂಥ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಆದ್ದರಿಂದ ಎಲ್ಲಾ nationalized bank ಗಳ ಸಾಲ ಏನು ಇದೆ, ತಾವು ಕೇಂದ್ರ ಸರ್ಕಾರಕ್ಕೆ entire ಸಾಲವನ್ನು ಮನ್ನಾ ಮಾಡುವ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ. ನೀವು ಇವತ್ತು ಘೋಷಣೆ ಮಾಡಿ ಅಥವಾ ನಾಳೆ ಬಜೆಟ್‌ನಲ್ಲಿ ಘೋಷಣೆ ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ. ನಮ್ಮಲ್ಲಿ ಇರುವಂಥ ಜಿಲ್ಲಾ ಬ್ಯಾಂಕ್‌ಗಳಿರಬಹುದು, VSSNL ಇದರಬಹು, ಗ್ರಾಮೀಣ ಬ್ಯಾಂಕ್‌ಗಳಿರಬಹುದು, ಸಹಕಾರಿ ರಂಗದಲ್ಲಿರುವಂಥ ಎಲ್ಲಾ ಬ್ಯಾಂಕ್‌ಗಳಲ್ಲಿ ಇರುವ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ. ತಾವು ಇವರೆಡನ್ನೂ ಬಜೆಟ್‌ನಲ್ಲಿ ಮಾಡಿ, ಇನ್ನುಳಿದ ಯಾವ ವಿಷಯವನ್ನಾದರೂ ಬಿಡಿ. ಇದು ಉತ್ತರ ಕರ್ನಾಟಕಕ್ಕೂ ಆಗುತ್ತದೆ, ಎಲ್ಲಾ ಭಾಗಗಳಿಗೂ ಆಗುತ್ತದೆ. ಮಾನ್ಯ ಕೃಷಿ ಸಚಿವರಾದ ಉಮೇಶ್ ಕತ್ತಿಯವರು ಹೇಳುತ್ತಿದ್ದರು. ಅವರಿಗೆ ಕೇಂದ್ರ ಕೃಷಿ ಸಚಿವರಾದ ಮಾನ್ಯ ಶರದ್‌ಪವಾರ್‌ರವರೊಂದಿಗೆ ನೇರ ಸಂಪರ್ಕವಿದೆ.

ದಯಮಾಡಿ ಅವರ ಬಳಗೆ ಕರೆದುಕೊಂಡು ಹೋಗಿ ಅವರಿಗೆ ಇವತ್ತು ರಾಜ್ಯ ಬರಗಾಲಕ್ಕೆ ತುತ್ತಾಗಿದೆಯೆಂಬುದನ್ನು ಮನವರಿಕೆ ಮಾಡಬೇಕು. ಇವತ್ತು 100ಕ್ಕೆ 80 ಭಾಗ entire ಬೆಳೆ ನಾಶವಾಗಿದೆ. ಅದಕ್ಕೆ nationalized bank ಗಳ ಸಾಲವನ್ನು entire ಮನ್ನಾ ಮಾಡಬೇಕು. at least 10 ಎಕರೆ ಒಳಗೆ ಇರುವಂಥ ರೈತರಿಗೆ entire ಸಾಲವನ್ನು ಮನ್ನಾ ಮಾಡುವ ಬಗ್ಗೆ ತಾವು ಒಂದು ನಿರ್ಣಯವನ್ನು ಮಾಡಬೇಕು. ಈ ಬಗ್ಗೆ ಪಕ್ಷಾತೀತವಾಗಿ ನಾವು ಕೇಂದ್ರ ಸರ್ಕಾರದ ಮುಂದೆ ಹೋರಾಟ ಮಾಡಬೇಕಾಗುತ್ತದೆ. ಅದು nationalized bank ಗಳ ಸಾಲವನ್ನು ಮನ್ನಾ ಮಾಡುವಂಥದ್ದು ಇರಬಹುದು, ಸ್ಟೇಟ್‌ನಲ್ಲಿರುವ ಸಹಕಾರಿ ಸಾಲವನ್ನು ಮನ್ನಾ ಮಾಡುವಂಥದ್ದು ಇರಬಹುದು. ತಾವು ಇದರ ಬಗ್ಗೆ ಘೋಷಣೆ ಮಾಡಿ, ನಾಳೆ ನಿಮಗೆ ಅನುಕೂಲವಾಗುತ್ತದೆ. ಕಾಂಗ್ರೆಸ್‌ನವರು 34 ಎಂದು ಹೇಳುತ್ತಾರೆ, 34 ಆಗುವುದಿಲ್ಲ, 134 ಆಗುವುದಿಲ್ಲ, ಏನೂ ಆಗುವುದಿಲ್ಲ. ತಾವು ನಿರ್ಣಯ ಮಾಡಿ, ಇಲ್ಲವೆಂದರೆ ತಾವೇ ಆ ಪರಿಸ್ಥಿತಿಯನ್ನು ತಂದೊಡ್ಡುವ ಕಾಲ ಬರುತ್ತದೆ, ಹಾಗೆ ಆಗುವುದು ಬೇಡ. ತಾವು ಈಗ ರಾಜ್ಯದ ಬಿ.ಜೆ.ಪಿ. ಅಧ್ಯಕ್ಷರು ಆಗಿದ್ದೀರಿ, ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಕಂದಾಯ ಇಲಾಖೆಗಳ ಸಚಿವರು ಆಗಿದ್ದೀರಿ. ತಮ್ಮ ಹತ್ತಿರ ಮೂರು ಖಾತೆಗಳು ಇವೆ. ತಾವು ಈ ವಿಷಯವಾಗಿ ಬೇಕಾದರೆ ಕಾನೂನು ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರ ಅಭಿಪ್ರಾಯವನ್ನು ತೆಗೆದುಕೊಳ್ಳಿ, ಅವರು ಯಾವ ರೀತಿ ಮಾಡಬೇಕೆಂಬುದನ್ನು ಹೇಳುತ್ತಾರೆ.

ತಾವು 8ನೇ ತಾರೀಖಿನಂದು ಬಜೆಟ್ ಅನ್ನು ಮಂಡನೆ ಮಾಡುವುದರಲ್ಲಿ ಎಲ್ಲಾ nationalized bank ಗಳ ಸಾಲವನ್ನು ಮನ್ನಾ ಮಾಡುವುದಕ್ಕೆ ಘೋಷಣೆ ಮಾಡಬೇಕು. ಕೇಂದ್ರಸರ್ಕಾರಕ್ಕೆ ಮನವಿ ಮಾಡಬೇಕು, ನಮ್ಮಲ್ಲಿರುವಂಥ VSSNL ಸಾಲವನ್ನು ಮತ್ತು ರೈತರ ಸಾಲವನ್ನು ಮನ್ನಾ ಮಾಡುವ ವಿಷಯವನ್ನು ಮುಂಗಡ ಪತ್ರದಲ್ಲಿ ಇಡಬೇಕೆಂದು ಮನವಿ ಮಾಡುತ್ತೇನೆ. ದನ-ಕರುಗಳಿಗೆ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕು, ಈ ಬಗ್ಗೆ ಜಿಲ್ಲಾ ಪಂಚಾಯತ್ ಇಂಜಿನಿಯರ್‌ಗಳಿಗೆ ನಿರ್ದೇಶನ ಕೊಡಬೇಕು. ತಾವು ಇಂಧನ ಇಲಾಖೆಯಿಂದ ಟಿ.ಸಿ.ಗಳಿಗೆ ಹಣವನ್ನು ಕೇಳುವುದಕ್ಕೆ ಹೋಗಬೇಡಿ. ತಾವು undertaking ತೆಗೆದುಕೊಂಡು ಜಿಲ್ಲಾ ಪಂಚಾಯತ್ ಇಂಜಿನಿಯರ್‌ಗಳು, ತಾವು ಸೇರಿ ಈ ಕೆಲಸವನ್ನು ಮಾಡಬೇಕೆಂದು ಮನವಿ ಮಾಡಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಚರ್ಚೆ ಮುಕ್ತಾಯವಾಗಿದೆ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ನೀಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

ಪ್ರಸ್ತುತ ಮಳೆ ಪರಿಸ್ಥಿತಿ

2012ರ ಜನವರಿ 1ರಿಂದ ಡಿಸೆಂಬರ್ 31ರ ಅವಧಿಗೆ ರಾಜ್ಯದ 14 ಜಿಲ್ಲೆಗಳಲ್ಲಿ ಮಳೆ ಕೊರತೆ ಶೇ. 43 ರಿಂದ 30ರ ವರೆಗೆ, 10 ಜಿಲ್ಲೆಗಳಲ್ಲಿ ಶೇ.

30 ರಿಂದ 20ರ ವರೆಗೆ, 5 ಜಿಲ್ಲೆಗಳಲ್ಲಿ ಶೇ. 20 ರಿಂದ 10ರ ವರೆಗೆ ಇರುತ್ತದೆ.

2012ರ ಜನವರಿ 1 ರಿಂದ ಡಿಸೆಂಬರ್ 31 ಅವಧಿಗೆ ಜಿಲ್ಲಾವಾರು, ತಾಲ್ಲೂಕುವಾರು, ಹೋಬಳಿವಾರು ಮಳೆ ಪರಿಸ್ಥಿತಿ

	ಜಿಲ್ಲಾವಾರು	ತಾಲ್ಲೂಕುವಾರು	ಹೋಬಳಿವಾರು
ಅಧಿಕ ಮಳೆ	0	1	14
ಮಾಮೂಲು ಮಳೆ	6	45	191
ಸಾಧಾರಣ ಮಳೆ ಕೊರತೆ	24	130	533
ತೀವ್ರ ಮಳೆ ಕೊರತೆ	0	0	9

ರಾಜ್ಯದಲ್ಲಿನ ಕೆರೆಗಳ ನೀರಿನ ಪ್ರಮಾಣ

ರಾಜ್ಯದ ಒಟ್ಟಾರೆ 3524 ಸಣ್ಣ ನೀರಾವಿ ಕೆರೆಗಳ ಪೈಕಿ 68% ಕೆರೆಗಳಲ್ಲಿ ನೀರು ಬಂದಿರುವುದಿಲ್ಲ, 24% ಕೆರೆಗಳಲ್ಲಿ ನೀರಿನ ಶೇಖರಣೆಯು ಶೇ. 30 ರಷ್ಟಿದೆ. 6% ಕೆರೆಗಳಲ್ಲಿ ನೀರಿನ ಶೇಖರಣೆಯು ಶೇ. 50 ರಷ್ಟಿದೆ. ಯಾವುದೇ ಕೆರೆ ಪೂರ್ತಿ ತುಂಬಿರುವುದಿಲ್ಲ.

<u>ಕೃಷಿ ಚಟುವಟಿಕೆ</u>

ಕೃಷಿ ಬೆಳೆಗಳ ಬಿತ್ತನೆ ಪ್ರಗತಿ:

ಮುಂಗಾರು: 2012ರ ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿ 74.70 ಲಕ್ಷ ಹೆಕ್ಟೇರ್ ಇದ್ದು, ದಿನಾಂಕ 30.09.2012ರವರೆಗೆ ವಿವಿಧ ಬೆಳೆಗಳು **62.88 ಲಕ್ಷ ಹೆಕ್ಟೇರ್** ವಿಸ್ತೀರ್ಣದಲ್ಲಿ ಬಿತ್ತನೆ ಆಗಿರುತ್ತದೆ (ಶೇ.84). ಮಳೆಯಾಶ್ರಿತ ಬೆಳೆಗಳು 16.21 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಮಳೆಯ ಅಭಾವದಿಂದ ಹಾನಿಗೊಳಪಟ್ಟಿರುತ್ತದೆ.

ಹಿಂಗಾರು: 2012ರ ಹಿಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿ 38.67 ಲಕ್ಷ ಹೆಕ್ಟೇರ್ ಇದ್ದು, ದಿನಾಂಕ 31.12.2012ರವರೆಗೆ ವಿವಿಧ ಬೆಳೆಗಳು **34.48 ಲಕ್ಷ ಹೆಕ್ಟೇರ್** ವಿಸ್ತೀರ್ಣದಲ್ಲಿ ಬಿತ್ತನೆ ಆಗಿರುತ್ತದೆ **(ಶೇ. 89%)**.

ಬೇಸಿಗೆ: 2012ರ ಬೇಸಿಗೆ ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿ 6.81 ಲಕ್ಷ ಹೆಕ್ಟೇರ್ ಇದ್ದು, ದಿನಾಂಕ 28.01.2013 ರವರೆಗೆ ವಿವಿಧ **ಬೆಳೆಗಳು3.28ಲಕ್ಷ ಹೆಕ್ಟೇರ್** ವಿಸ್ತರ್ಣದಲ್ಲಿ ಬಿತ್ತನೆ ಆಗಿರುತ್ತದೆ **(ಶೇ.48%)**. ಹಾಗೂ ಬಿತ್ತನೆ ಪ್ರಗತಿಯಲ್ಲಿದೆ. ಪ್ರಮುಖ ಜಲಾಶಯಗಳಲ್ಲಿ ನೀರಿನ ಅಭಾವದ ಹಿನ್ನಲೆಯಲ್ಲಿ ಬೇಸಿಗೆ ಭತ್ತದ ವಿಸ್ತೀರ್ಣ ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಬರ-ಪರಿಹಾರಕ್ಕೆ ಸಂಬಂಧಿಸಿದಂತೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಜರುಗಿಸಿದೆ

ಕೃಷಿ ಇಲಾಖೆ

- **ಕೃಷಿ ಪರಿಕರಗಳ ಸರಬರಾಜು:** ಹಿಂಗಾರು ಬೆಳೆಗಳ ಬಿತ್ತನೆಗಾಗಿ ಪ್ರಮುಖ ಕೃಷಿ ಸಾಮಾಗ್ರಿಗಳಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಸಮರ್ಪಕ ಹಂಚಿಕೆಗಾಗಿ ರೈತ ಸಂಪರ್ಕ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ.
- **ಬಿತ್ತನೆ ಬೀಜ:** ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ಬಿತ್ತನೆ ಬೀಜದ ಬೇಡಿಕೆ 8.30 ಲಕ್ಷ ಕ್ವಿಂಟಲ್ ಗಳಷ್ಟಿದ್ದು, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ 9.50 ಲಕ್ಷ ಕ್ವಿಂಟಾಲ್ ಪ್ರಮಾಣಿತ ಹಾಗೂ ಗುಣಮಟ್ಟದ ಬೀಜಗಳು ಲಭ್ಯವಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿವಿದ ಯೋಜನೆಗಳಡಿ ಶೇ. 50 ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ. ಮುಂಗಾರು ಹಂಗಾಮಿನಲ್ಲಿ 18.58 ಲಕ್ಷ ರೈತರಿಗೆ 4.85 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ವಿತರಿಸಲಾಗಿದೆ. ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ದಿನಾಂಕ 31.01.2013 ರವರೆಗೆ 4,19,720 ರೈತರಿಗೆ 1,43,603 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ.
- **ರಸಗೊಬ್ಬರ:** ಮುಂಗಾರು ಹಂಗಾಮಿನಲ್ಲಿ 24.45 ಲಕ್ಷ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, ದಿನಾಂಕ 30.09.2012 ವರೆಗೆ 14.74 ಲಕ್ಷ ಟನ್ ಸರಬರಾಜಾಗಿರುತ್ತದೆ. ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ದಿನಾಂಕ 31.01.2013ರ ವರೆಗೆ, 9,29,705 ಟನ್

ವಿವಿಧ ರಸಗೊಬ್ಬರಗಳ ಸರಬರಾಜು ಆಗಿರುತ್ತದೆ. 3.05 ಲಕ್ಷ ಟನ್‌ರಷ್ಟು ಕಾಪು ದಾಸ್ತಾನಿರುತ್ತದೆ. ಯವುದೇ ರಸಗೊಬ್ಬರಗಳ ಕೊರತೆ ಇರುವುದಿಲ್ಲ.

ಮೇವಿನ ಲಭ್ಯತೆ ಬಗ್ಗೆ

ಪಶು ಸಂಗೋಪನೆ ಇಲಾಖೆ

- ಮೇವನ್ನು ಖರೀದಿಸಲು ಜೋಳ, ಕಡಿಬಿ ಮತ್ತು ಬತ್ತದ ಹುಲ್ಲಿಗೆ ಪ್ರತಿ ಟನ್ನಿಗೆ ಗರಿಷ್ಠ ರೂ. 6000/- ಕ್ಕೆ ನಿಗದಿ ಪಡಿಸಲಾಗಿದೆ.
- ಇತರೆ ಮೂಲಗಳಿಂದ ಮೇವನ್ನು ಖರೀದಿಸಲು ತಗಲುವ ಮೇವು ಸಾಗಾಣಿಕಾ ದರವನ್ನು ಪ್ರತಿ ಕ್ವಿಂಟಾಲ್‌ಗೆ ಪ್ರತಿ ಕಿ.ಮೀ. ರೂ. 1.25 ರಿಂದ ರೂ. 1.50ಕ್ಕೆ ಹೆಚ್ಚಿಸಲಾಗಿದೆ.
- ಬರಗಾಲದಲ್ಲಿ ಜಾನುವಾರುಗಳಲ್ಲಿ ಪೋಷ್ಟಿಕಾಂಶದ ಕೊರತೆಯುಂಟಾಗುವ ಸಾಧ್ಯತೆ ಇರುವುದರಿಂದ ಗೋಶಾಲೆಗಳಲ್ಲಿರುವ ಪ್ರತಿ ರಾಸಿಗೆ ಪ್ರತಿ ದಿನಕ್ಕೆ 30 ಗ್ರಾಂನಂತೆ ಖನಿಜ ಮಿಶ್ರಣ ನೀಡುವುದು.
- ಎಸ್.ಡಿ.ಆರ್.ಎಫ್ ವತಿಯಿಂದ ಪಶು ಸಂಗೋಪನೆ ಇಲಾಖೆಗೆ ನೀಡಿರುವ ರೂ. 5.00 ಕೋಟಿ ಅನುದಾನದಲ್ಲಿ ಇಲಾಖೆ ವತಿಯಿಂದ 24,000 ಟನ್ ಹಸಿ ಮೇವು ಬೆಳೆಯಲಾಗಿದೆ. 1.00 ಲಕ್ಷ ಮೇವಿನ ಕಿರು ಪೊಟ್ಟಣ ವಿತರಿಸಿ

10,000 ಹೆಕ್ಟೇರ್ ಪ್ರದೇಶದಲ್ಲಿ 4.00 ಲಕ್ಷ ಟನ್ ಹಸಿರು ಮೇವು ಉತ್ಪಾದನೆ ಮಾಡಲಾಗಿದೆ.

- ಪ್ರಸ್ತುತ ಪ್ರತಿ ಜಾನುವಾರಿಗೆ ಪ್ರತಿ ದಿನ ಗೋಶಾಲೆಗಳಲ್ಲಿ ಈಗ ನೀಡುತ್ತಿರುವ 5 ಕೆಜಿ ಮೇವು ಬದಲಾಗಿ 8 ಕೆ.ಜಿ. ನೀಡಲು ತೀರ್ಮಾನಿಸಿದೆ.

ವಿಪತ್ತು ನಿರ್ವಹಣೆ (ಕಂದಾಯ ಇಲಾಖೆಯ) ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್ ನಿಧಿಯಿಂದ

- ಪ್ರಸಕ್ತ ಸಾಲಿನಲ್ಲಿ ಕುಡಿಯುವ ನೀರು ಹಾಗೂ ಜಾನುವಾರು ಸಂರಕ್ಷಣೆಗೆ ರೂ. 396.00 (ರೂ. 47.00 ಕೋಟಿಗಳನ್ನು ದಿನಾಂಕ: 30.01.2013 ರಂದು ಅನುದಾನ ಬಿಡುಗಡೆ ಮಾಡಲಾಗಿದೆ) ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇದರ ಪೈಕಿ ರೂ. 85.00 ಕೋಟಿ ಜಾನುವಾರು ಸಂರಕ್ಷಣೆಗೆ ಹಾಗೂ ರೂ. 28.00 ಕೋಟಿ ಕುಡಿಯುವ ನೀರಿನ ಕಾಮಗಾರಿಗಳಿಗೆ ಮತ್ತು ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲು ಈಗಾಗಲೇ ಖರ್ಚು ಮಾಡಲಾಗಿದೆ. ಇದರಿಂದ 17,662 ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ 762 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗಿದೆ. ಪ್ರಸ್ತುತ

199 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

- ಜಿಲ್ಲೆಯಲ್ಲಿ ಅವಶ್ಯಕತೆಯಿರುವ ಕಡೆ ಗೋಶಾಲೆಗಳನ್ನು ತೆರೆಯಲಾಗಿದೆ. ಇದಕ್ಕೆ ರೂ. 85.00 ಕೋಟಿ ಅನುದಾನ ವೆಚ್ಚ ಮಾಡಲಾಗಿದೆ. ಸೆಪ್ಟೆಂಬರ್ ಮಾಹೆಯಲ್ಲಿ ಅತಿ ಹೆಚ್ಚು ಅಂದರೆ 244 ಗೋಶಾಲೆಗಳನ್ನು ಸ್ಥಾಪಿಸಲಾಗಿತ್ತು ಇದರಲ್ಲಿ 1,81,709 ಜಾನುವಾರುಗಳನ್ನು ಸಂರಕ್ಷಿಸಲಾಗಿತ್ತು. ಪ್ರಸ್ತುತ 5 **ಗೋಶಾಲೆಗಳು** ನಡೆಯುತ್ತಿದೆ ಇದರಲ್ಲಿ **3055 ಜಾನುವಾರುಗಳನ್ನು** ಸಂರಕ್ಷಿಸಲಾಗಿದೆ ಹಾಗೂ **11 ಮೇವಿನ ಬ್ಯಾಂಕ್‌ಗಳನ್ನು** ಸ್ಥಾಪಿಸಲಾಗಿದೆ.

- 2010–11 ನೇ ಸಾಲಿನ ಬರ–ಪರಿಸ್ಥಿತಿಯಿಂದ ಕೃಷಿ ಬೆಳೆ ಹಾನಿಯಾದ ಪ್ರದೇಶಗಳಿಗೆ Input Subsidy ನೀಡಲು ರೂ. **232.00 ಕೋಟಿ** ಹಣ ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು 24.90 ಲಕ್ಷ ರೈತರಿಗೆ ಚೆಕ್ ಮುಖಾಂತರ ಪಾವತಿ ಮಾಡಲಾಗುತ್ತಿದೆ.

- 2012ನೇ ಸಾಲಿನ ಮುಂಗಾರು ಋತುವಿನಲ್ಲಿ ಕೇಂದ್ರ ಸರ್ಕಾರಕ್ಕೆ ರೂ. 11.489 ಕೋಟಿಗೆ ಮೆಮೊರಾಂಡಮ್ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರಿಂದ ದಿನಾಂಕ: 31–1–2013ರಂದು ರೂ. 397.19 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಕುಡಿಯುವ

ನೀರಿಗೆ ರೂ. 30.00 ಕೋಟಿ ಹಾಗೂ ಜಾನುವಾರು ಸಂರಕ್ಷಣೆಗೆ ರೂ. 38.00 ಕೋಟಿ ಸೇರಿ ಒಟ್ಟು ರೂ. 68.00 ಕೋಟಿ ಬಿಡುಗಡೆ ಮಾಡಿದೆ. ಹಾಗೂ ಉಳಿದ ರೂ. 327.00 ಕೋಟಿ ಅನುದಾನವನ್ನು Input Subsidy ನೀಡಲು ಮಂಜೂರಾತಿ ನೀಡಿದೆ.

- ಮುಂದುವರೆದು, ಜಿಲ್ಲಾಧಿಕಾರಿಗಳು ಮುಂದಿನ ಆರು ತಿಂಗಳಿಗಾಗಿ (2013ನೇ ಜನವರಿ 15 ರಿಂದ ಜೂನ್ 15) ನೀಡಿರುವ ತುರ್ತು ಕ್ರಿಯಾ ಯೋಜನೆಯನುಸಾರ ಗೋಶಾಲೆ (ಜಾನುವಾರು ಸಂರಕ್ಷಣೆಗೆ) ಹಾಗೂ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜಿಗಾಗಿ 2012–13 ಸಾಲಿನಲ್ಲಿ (ಮೂರು ತಿಂಗಳಿಗಾಗಿ) ರೂ. 100.00 ಕೋಟಿ ಹಾಗೂ 2013–14ನೇ ಸಾಲಿನಲ್ಲಿ ಮೂರು ತಿಂಗಳಿಗಾಗಿ (ಏಪ್ರಿಲ್, ಮೇ ಹಾಗೂ ಜೂನ್) ರೂ. 100.00 ಕೋಟಿ ಅನುದಾನದ ಬೇಕಾಗಿರುವುದನ್ನು ಸರ್ಕಾರ ಒಪ್ಪಿರುತ್ತದೆ. ಇದರಲ್ಲಿ ರೂ. 47.10 ಕೋಟಿ ಈಗಾಗಲೇ 30–1–2013 ರಂದು ಬಿಡುಗಡೆ ಮಾಡಲಾಗಿದೆ. ಉಳಿದ 53.00 ಕೋಟಿ ಸಧ್ಯದಲ್ಲಿ ಬಿಡುಗಡೆ ಮಾಡಲಾಗುವುದು.
- ರೂ. 100.00 ಕೋಟಿಯನ್ನು ಎಸ್.ಡಿ.ಆರ್.ಎಫ್.. ವತಿಯಿಂದ 2013–14 ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

- ಇದಲ್ಲದೇ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಜಿಲ್ಲಾ ಮಟ್ಟದ Task Force ನಲ್ಲಿ ಮಂಜೂರಾತಿ ಪಡೆದು, ಜಿಲ್ಲಾಧಿಕಾರಿಗಳ ಮೂಖಾಂತರ ಕೈಗೊಳ್ಳಲು ರೂ. 250.00 ಕೋಟಿ (ರೂ. 200.00 ಕೋಟಿ ಗ್ರಾಮೀಣ ಪ್ರದೇಶದಲ್ಲಿ ಹಾಗೂ ರೂ. 50.00 ಕೋಟಿ ನಗರ ಪ್ರದೇಶಕ್ಕೆ) ಕ್ರಿಯಾಯೋಜನೆಯನ್ನು ರೂಪಿಸಲಾಗಿದೆ. ಈ ಕ್ರಿಯಾ ಯೋಜನೆಗೆ ಬೇಕಾಗುವ ಅನುದಾನವನ್ನು ಪೂರ್ಣವಾಗಿ ರಾಜ್ಯ ಸರ್ಕಾರದ ಸಂಪನ್ಮೂಲದಿಂದ ಭರಿಸಲಾಗುವುದು. ಈ ಸಾಲಿನಲ್ಲಿ ರೂ. 125.00 ಕೋಟಿ ಹಾಗೂ ಮುಂದಿನ ಸಾಲಿನಲ್ಲಿ ರೂ. 125.00 ಕೋಟಿ ಖರ್ಚು ಮಾಡಲಾಗುವುದು. ಈ ಯೋಜನೆಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳಾದ ಹೊಸ ಬೋರ್‌ವೆಲ್ ಕೊರೆಸುವುದು, ಪೈಪ್ ಲೈನ್ ಹಾಕಿಸುವುದು. ಪಂಪು ಮೋಟಾರ್ ಖರೀದಿ ಇತ್ಯಾದಿ ಕಾಮಗಾರಿಗಳನ್ನು ಯಾವುದೇ ನಿರ್ಬಂಧವಿಲ್ಲದೆ ಕೈಗೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯನ್ನು ಜಿಲ್ಲಾ ಪಂಚಾಯಿತಿ ಹಾಗೂ ನಗರಾಭಿವೃದ್ಧಿ ಇಲಾಖೆಯ ವಿಶೇಷ ಅನುದಾನದಲ್ಲಿ ಜಿಲ್ಲಾಧಿಕಾರಿರವರ ಮೇಲುಸ್ತುವಾರಿಯಲ್ಲಿ Task Force ರವರು ತೀರ್ಮಾನಿಸಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

- ಒಟ್ಟಾಗಿ ಈ 6 ತಿಂಗಳಲ್ಲಿ ರೂ. 450.00 ಕೋಟಿ ರೂ.ಗಳನ್ನು ಕುಡಿಯುವ ನೀರು ಹಾಗೂ ಜಾನುವಾರು ಸಂರಕ್ಷಣೆಗಾಗಿ ಖರ್ಚು ಮಾಡಲಾಗುವುದು. ಇದರಲ್ಲಿ ರೂ. 250.00 ಕೋಟಿ ಪೂರ್ಣವಾಗಿ ರಾಜ್ಯ ಸರ್ಕಾರದ ಸ್ವಂತ ಸಂಪನ್ಮೂಲದಿಂದ ಭರಿಸಲಾಗುವುದು ಹಾಗೂ ರೂ. 200.00 ಕೋಟಿ ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್ ಮುಖಾಂತರ ಖರ್ಚು ಮಾಡಲಾಗುವುದು. ಇದರಲ್ಲಿ ರಾಜ್ಯ ನಿಧಿಯಿಂದ ರೂ. 57.00 ಕೋಟಿ ಭರಿಸಲಾಗುವುದು.
- ಕೇಂದ್ರ ಸರ್ಕಾರ ನೀಡಿರುವ ರೂ. 327.00 ಕೋಟಿಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನಿಯಮಗಳಂತೆ ಬರ–ಪರಿಸ್ಥಿತಿಯಿಂದ 50% ಕ್ಕಿಂತ ಹೆಚ್ಚು ಬೆಳೆ ಹಾನಿಯಾಗಿರುವ ಪ್ರದೇಶದಲ್ಲಿ Input Subsidy ವಿತರಣೆ ಮಾಡಲು ಸಚಿವ ಸಂಪುಟದ ಉಪ ಸಮಿತಿಯ ತೀರ್ಮಾನ ತೆಗೆದುಕೊಂಡಿದೆ. ತಕ್ಷಣ ಬಿಡುಗಡೆಯಾಗಲಿದೆ.

ಗ್ರಾ.ಅ. ಮತ್ತು ಪಂ. ಇಲಾಖೆಯಿಂದ ಕುಡಿಯುವ ನೀರಿಗಾಗಿ ಹಾಗೂ ಉದ್ಯೋಗ ಸೃಜನೆಗಾಗಿ ತೆಗೆದುಕೊಂಡ ಕ್ರಮಗಳು

- **NRDWP**ಯಡಿ 2012–13 ನೇ ಸಾಲಿಗೆ ರೂ. **1964.00** ಕೋಟಿ ವೆಚ್ಚದಲ್ಲಿ **32,000** ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

- ಬರ–ಪರಿಸ್ಥಿತಿಯಿಂದಾಗಿ ಹೆಚ್ಚುವರಿಯಾಗಿ ರೂ. **402.00** ಕೋಟಿ ಅನುದಾನದಲ್ಲಿ **13,000** ಕಾಮಗಾರಿಗಳು ಅನುಮೋದನೆ ಆಗಿರುತ್ತವೆ. ಈ ದಿಕ್ಕಿನಲ್ಲಿ ಡಿಸೆಂಬರ್–12 ರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೂ ಮಾರ್ಚ್–**2013**ರೊಳಗೆ ಕಾಮಗಾರಿಗಳು ಮುಕ್ತಾಯವಾಗಲಿವೆ. ಇದರಲ್ಲಿ **9803** ಪುನಶ್ಚೇತನ ಕಾಮಗಾರಿಗಳು ಹಾಗೂ **3157** ಹೊಸ ಕೊಳವೆಬಾವಿ ಕಾಮಕಾರಿಗಳು ಸೇರಿರುತ್ತವೆ.
- ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 2.45 ಕೋಟಿ ಮಾನವ ದಿನಗಳನ್ನು ಸೃಜಿಸಿ ರೂ. 1151.18 ಕೋಟಿ ಖರ್ಚು ಮಾಡಲಾಗಿದೆ.
- ಸದರಿ ಯೋಜನೆಯಡಿಯಲ್ಲಿ 2.78 ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- ಲಭ್ಯವಿರುವ ಅನುದಾನದ 82% ಖರ್ಚು ಮಾಡಿ ಕೇಂದ್ರ ಸರ್ಕಾರಕ್ಕೆ ಡಿಸೆಂಬರ್ ಮಾಹೆಯಲ್ಲಿ ಎರಡನೇ ಕಂತಿನ ರೂ. 2116..00 ಕೋಟಿ ಬಿಡುಗಡೆ ಮಾಡಲು ಪ್ರಸ್ತಾಪಿಸಲಾಗಿತ್ತು. ಆರು ನೆನಪೋಲೆಗಳನ್ನು ಹಾಗೂ ಪತ್ರಗಳನ್ನು ಕಳುಹಿಸಲಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಂದಲೂ ಸಹ ದಿನಾಂಕ: 15–1–2013ರಂದು ಮಾನ್ಯ ಕೇಂದ್ರ ಸರ್ಕಾರದ ಸಚಿವರಿಗೆ ಪತ್ರ ಬರೆಯಲಾಗಿದೆ. ಕೇಂದ್ರದಿಂದ ಅನುದಾನದ ನಿರೀಕ್ಷೆಯಲ್ಲಿದ್ದೇವೆ.

ಆದುದರಿಂದ, ರಾಜ್ಯ ಸರ್ಕಾರವು ಎಲ್ಲಾ ಚುನಾಯಿತಿ ಪ್ರತಿನಿಧಿಗಳ ನೆರವಿನಿಂದ ಹಾಗೂ ಜಿಲ್ಲಾಡಳಿತ ಮುಖಾಂತರ ಬರ-ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಿದೆ. ಮುಂದಿನ ಬೇಸಿಗೆಯಲ್ಲಿ ಬರುತ್ತಿರುವ ಸಮಸ್ಯೆಗಳನ್ನು ಈಗಲೇ ಮನಗೊಂಡು ಸಮರ್ಥವಾದ ಯೋಜನೆಗಳನ್ನು ರೂಪಿಸಿ ಈ ಪರಿಸ್ಥಿತಿಯನ್ನು ನಿಭಾಯಿಸಲು ಕಟಿಬಿದ್ದಿದೆ. ಮುಂದಿನ ದಿನಗಳಲ್ಲಿ ಹಿಂದಿನಂತೆ ಬರ-ಪರಿಸ್ಥಿತಿಯನ್ನು ನಿಭಾಯಿಸಲು ಜನರ ಹಾಗೂ ಜನ ಪ್ರತಿನಿಧಿಗಳ ಮತ್ತು ಕೇಂದ್ರ ಸರ್ಕಾರದ ನೆರವು ಅಪೇಕ್ಷಿಸಿದೆ.

ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಭೀಕರ ಬರಗಾಲವನ್ನು ಅನುಭವಿಸುತ್ತಿರುವಂಥ ಅಂಶ ಇಡೀ ನಾಡಿಗೆ ಗೊತ್ತಿದೆ. ಈಗಾಗಲೇ ಜನತಾದಳದ ನಾಯಕರಾದ ಶ್ರೀ ಹೆಚ್.ಡಿ. ರೇವಣ್ಣನವರು ಪ್ರಸ್ತಾಪ ಮಾಡಿದಂತೆ, ಪಾರ್ಲಿಮೆಂಟ್‌ನಲ್ಲೂ ಕೂಡ ಕೇಂದ್ರ ಸರ್ಕಾರದ ಕೃಷಿ ಸಚಿವಾರದ ಶ್ರೀ ಶರದ್ ಪವಾರ್‌ರವರು ಸಹ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಬರಗಾಲದಲ್ಲಿ ಮೊದಲನೆ ಸ್ಥಾನದಲ್ಲಿದೆಯೆಂಬ ಅಂಶವನ್ನು ವ್ಯಕ್ತಪಡಿಸಿದ್ದಾರೆ. ತಮಗೆಲ್ಲಾ ಗೊತ್ತಿರುವಂತೆ ಕಳೆದ ವರ್ಷ ರಾಜ್ಯದ ಎಲ್ಲಾ ಶಾಸಕರ ಸಹಕಾರದಿಂದ ಸರ್ಕಾರ ಶಕ್ತಿ ಮೀರಿ ಬರಗಾಲದ ಪರಿಸ್ಥಿತಿಯನ್ನು ಎದುರಿಸುವ ದಿಕ್ಕಿನಲ್ಲಿ ನಾವು ಯಶಸ್ವಿಯಾದೆವು. ಆಯಾ ಜಿಲ್ಲೆಗಳಿಗೆ ಹೋದಂಥ ಸಂದರ್ಭಗಳಲ್ಲಿ ಶಾಸಕರುಗಳ ಮತ್ತು ಅಧಿಕಾರಿಗಳ ಜೊತೆಗೆ ಕುಳಿತು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಕುಡಿಯುವ ನೀರಿನ

ಸಮಸ್ಯೆಯನ್ನು ಪರಿಹಾರ ಮಾಡುವ ದಿಕ್ಕಿನಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿರುವಂಥದ್ದನ್ನು ಗಮನಿಸಿದ್ದೀರಿ. ಇದರ ಜೊತೆಗೆ ಕಳೆದ ವರ್ಷವೂ ಕೂಡ ಮೇವಿನ ಸಮಸ್ಯೆ ಬಂದಂಥ ಸಂದರ್ಭದಲ್ಲಿ ಬೇರೆ ಬೇರೆ ರಾಜ್ಯಗಳಿಂದಲೂ ಕೂಡ ಮೇವನ್ನು ಖರೀದಿ ಮಾಡುವ ದಿಕ್ಕಿನಲ್ಲಿ ಸಾಕಷ್ಟು ಪ್ರಯತ್ನಗಳನ್ನು ಕೂಡ ಮಾಡಿದ್ದು, ಇದರ ಜೊತೆಗೆ ಗೋಶಾಲೆಗಳನ್ನು ಕೂಡ ಶಾಸಕರ ಅಪೇಕ್ಷೆಗೆ ತಕ್ಕಂತೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ತೆರೆದು, ಮೇವನ್ನು 5 ಕೆ.ಜಿ.ಗೆ ಬದಲಾಗಿ 8 ಕೆ.ಜಿ.ಯಂತೆ ಕೊಡುವುದಕ್ಕೆ ಎಲ್ಲಾ ಗೋಶಾಲೆಗಳಲ್ಲೂ ವ್ಯವಸ್ಥೆ ಮಾಡಿರುವಂಥದ್ದು ಇಡೀ ರಾಜ್ಯಕ್ಕೆ ಗೊತ್ತಿದೆ. ಇದರ ಜೊತೆ ಜೊತೆಗೆ ಕಳೆದ ಬಾರಿ ಬಿತ್ತನೆ ಬೀಜದ ಸಮಸ್ಯೆ ಬಗ್ಗೆಯೂ ಕೂಡ ಪರಿಹಾರ ಮಾಡಿರುವುದನ್ನು ತಾವೆಲ್ಲರೂ ಗಮನಿಸಿದ್ದೀರಿ. ಈಗಾಗಲೇ ಫೆಬ್ರವರಿ ತಿಂಗಳಲ್ಲೆ ಬರಗಾಲ ಬಂದಿರುವುದಂಥ ಅಂಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ, ಮೇವಿನ ಬಗ್ಗೆ, ವಿದ್ಯುತ್ ಬಗ್ಗೆ, ಎಲ್ಲಾ ಶಾಸಕರು ನಿಜಕ್ಕೂ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿ, ಸರ್ಕಾರವು ಈ ಬರಗಾಲವನ್ನು ಎದುರಿಸುವ ದಿಕ್ಕಿನಲ್ಲಿ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಸ್ವಾಗತ ಮಾಡುತ್ತಾ, ಆ ಸಲಹೆಗಳನ್ನು ಜಾರಿಗೆ ತರುವ ದಿಕ್ಕಿನಲ್ಲಿ ಖಂಡಿತವಾಗಿಯೂ ರಾಜ್ಯ ಸರ್ಕಾರ ಪೂರ್ಣ ಗಮನ ಕೊಡುತ್ತದೆಂಬ ಅಂಶವನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಏಕೆಂದರೆ, ಈ ಜನವರಿ 1ನೇ ತಾರೀಖಿನಿಂದ ಡಿಸೆಂಬರ್ 31ನೇ ತಾರೀಖಿನವರೆಗೂ ರಾಜ್ಯದ 14 ಜಿಲ್ಲೆಗಳಲ್ಲಿ ಮಳೆ

ಕೊರತೆ ಶೇ. 43 ರಿಂದ 30% ರವರೆಗೂ ಆಗಿದೆ. ಇನ್ನೂ 10 ಜಿಲ್ಲೆಗಳಲ್ಲಿ ಶೇ. 30 ರಿಂದ ಶೇ. 20ರವರೆಗೆ ಇದೆ, ಇನ್ನು 5 ಜಿಲ್ಲೆಗಳಲ್ಲಿ ಶೇ. 20 ರಿಂದ ಶೇ. 10 ರವರೆಗೆ ಕೊರತೆ ಇರುವುದನ್ನು ಈ ಸದನಸ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಇನ್ನು 14 ಹೋಬಳಿಗಳಲ್ಲಿ ಅಧಿಕ ಮಳೆ ಇದ್ದರೆ, ಮಾಮೂಲು ಮಳೆ 191 ಹೋಬಳಿಗಳಲ್ಲಿ ಇದೆ, ಸಾಧಾರಣ ಮಳೆ ಕೊರತೆ 533 ಹೋಬಳಿಗಳಲ್ಲಿ ಇದೆ, ತೀವ್ರ ಮಳೆ ಕೊರತೆ 9 ಹೋಬಳಿಗಳಲ್ಲಿ ಇರುವುದನ್ನು ಈ ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದೇ ರೀತಿಯಲ್ಲಿ ರಾಜ್ಯದಲ್ಲಿ ಕೆರೆಗಳ ವಿಷಯವಾಗಿ ಹೇಳುವುದಾದರೆ, 3,524 ಸಣ್ಣ ನೀರಾವರಿ ಕೆರೆಗಳ ಪೈಕಿ ಶೆ. 68 ರಷ್ಟು ಕೆರೆಗಳಲ್ಲಿ ನೀರು ಬಂದಿಲ್ಲ. ಶೆ. 24 ರಷ್ಟು ಕೆರೆಗಳಲ್ಲಿ ಶೇ. 30 ರಷ್ಟು ನೀರು ಇದೆ, ಶೇ. 6ರಷ್ಟು ಕೆರೆಗಳಲ್ಲಿ ಶೇ. 50 ರಷ್ಟಿದೆ. ಈ ರೀತಿ ಯಾವುದೇ ಕೆರೆಗಳು ತುಂಬಿಲ್ಲದೇ ಇರುವಂಥ ಸಂದರ್ಭವನ್ನು ಕಾಣುತ್ತಿದ್ದೇವೆ. ಇನ್ನು ಕೃಷಿ ಬೆಳೆಗಳ ಬಗ್ಗೆಯೂ ಗಮನಿಸಿದಾಗ 74.70 ಲಕ್ಷ ಹೆಕ್ಟೇರ್ ಇದ್ದು, ಇದರಲ್ಲಿ ದಿನಾಂಕ: 30.09.2012 ರವರೆಗೆ ವಿವಿದ ಬೆಳೆಗಳು 62.88 ಲಕ್ಷ ಹೆಕ್ಟೇರ್‌ನಷ್ಟು ಬಿತ್ತನೆ ಆಗಿದೆ. ಇಂಥ ಸಂದರ್ಭದಲ್ಲಿ ನಾವು ಸದನದಲ್ಲಿ ಇದನ್ನು ಯಾವ ರೀತಿ ಪರಿಹಾರ ಮಾಡಬೇಕೆನ್ನುವ ಅಂಶಗಳವನ್ನು ಗಮನಿಸುತ್ತಿರುವಂಥ ಸಂದರ್ಭದಲ್ಲಿ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಏನೇನು ಕ್ರಮಗಳನ್ನು ಜರುಗಿಸುತ್ತಿದೆಯೆಂಬ ಅಂಶವನ್ನು ನಾನು ಈ ಸಂದರ್ಭದಲ್ಲಿ ಸದನದ ಮುಖಾಂತರ ರಾಜ್ಯದ ಜನರಿಗೆ ಹೇಳಲಿಚ್ಛಿಸುತ್ತಿದ್ದೇನೆ. ಬಿತ್ತನೆ ಬೀಜ, ಮುಂಗಾರು ಹಂಗಾಮಿನ

ವಿವಿಧ ಬೆಳೆಗಳ ಬಿತ್ತನೆ ಬೀಜ 8.30 ಲಕ್ಷ ಕ್ವಿಂಟಾಲ್ ಬೇಕಾಗಿದ್ದು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ 9.50 ಲಕ್ಷ ಕ್ವಿಂಟಾಲ್ ಗುಣಮಟ್ಟದ ಬೀಜಗಳನ್ನು ಈಗಾಗಲೇ ನಾವು ಇಟ್ಟುಕೊಂಡಿದ್ದೇವೆ. ಹಾಗಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿವಿಧ ಯೋಜನೆಗಳಲ್ಲಿ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಕೆ ಮಾಡುತ್ತಿದ್ದೇವೆ. ಮುಂಗಾರು ಹಂಗಾಮಿನಲ್ಲಿ 18.58 ಲಕ್ಷ ರೈತರಿಗೆ 4.85 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಹಿಂಗಾರು/ಬೇಸಿಗೆ ಹಂಗಾಮಿ ದಿನಾಂಕ: 31.01.2013ರವರೆಗೆ 4,19,720 ರೈತರಿಗೆ 1,43,603 ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಈಗಾಗಲೇ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಕೆ ಮಾಡಿದ್ದೇವೆ. ಅದೇ ರೀತಿಯಲ್ಲಿ ಮುಂಗಾರು ಹಂಗಾಮಿನಲ್ಲಿ 24.45 ಲಕ್ಷ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, ದಿನಾಂಕ: 30.09.2012ವರೆಗೆ 14.74 ಲಕ್ಷ ಟನ್ ಸರಬರಾಜು ಆಗಿರುತ್ತದೆ, ಮತ್ತೆ ಹಿಂಗಾರು/ಬೇಸಿಗೆ ಹಂಗಾಮಿನಲ್ಲಿ ದಿನಾಂಕ:31.01.2013ರವರೆಗೆ 9,29,705 ಟನ್ ವಿವಿಧ ರಸಗೊಬ್ಬರ ಗಳ ಸರಬರಾಜು ಅಗಿದೆ. ಇನ್ನು 3.05 ಲಕ್ಷ ಟನ್‌ನಷ್ಟು ದಾಸ್ತಾನು ಇದೆ. ಹಾಗಾಗಿ ಯಾವುದೇ ರಸಗೊಬ್ಬರದ ಕೊರತೆ ಇಲ್ಲದೇ ಇರುವ ಹಾಗೆ ಗಮನಿಸುತ್ತಿದ್ದೇವೆ. ಇನ್ನು ಮೇವು ಖರೀದಿ ವಿಚಾರದಲ್ಲಿ ಜೋಳ ಮತ್ತು ಭತ್ತದ ಹುಲ್ಲಿಗೆ ಪ್ರತಿ ಟನ್‌ಗೆ ತಮಗೂ ಗೊತ್ತಿರುವ ಹಾಗೆ 6,000 ರೂ.ಗಳನ್ನು ನಿಗದಿ ಮಾಡಿದ್ದೇವೆ. ಅದೇ ರೀತಿ ಮೇವನ್ನು ಖರೀದಿ ಮಾಡುವ ವಿಚಾರದಲ್ಲಿ

ಸಾಗಾಣಿಕೆ ದರವನ್ನು ಕೂಡ ಪ್ರತಿ ಕ್ವಿಂಟಾಲ್‌ಗೆ ಕಿ.ಮೀ.ಗೆ ರೂ. 1.25 ರಿಂದ ರೂ. 1.50 ರವರೆಗೆ ಹೆಚ್ಚು ಮಾಡಿದ್ದೇವೆ. ಈಗ ಪಶುಸಂಗೋಪನೆ ಇಲಾಖೆಗೆ 5 ಕೋಟಿ ರೂ. ಗಳ ಅನುದಾನವನ್ನು ಹಸಿ ಮೇವು ಬೆಳೆಯುವುದಕ್ಕೆ ನೀಡಿದ್ದು, ಈಗಾಗಲೇ 24,000 ಟನ್‌ನಷ್ಟು ಬೆಳೆ ಆಗಿದೆ.

ಇನ್ನೂ ಒಂದು ಲಕ್ಷ ಮೇವಿನ ಕಿರು ಪೊಟ್ಟಣ ವಿತರಿಸಿ 10.000 ಹೆಕ್ಟೇರ್ ಪ್ರದೇಶದಲ್ಲಿ 4 ಲಕ್ಷ ಟನ್ ಹಸಿರು ಮೇವು ಉತ್ಪಾದನೆ ಮಾಡುವುದಕ್ಕಾಗುತ್ತಿದೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದ ಹಾಗೆ, ಪ್ರಸ್ತುತ ಪ್ರತಿ ಜಾನುವಾರಿಗೆ ಪ್ರತಿ ದಿನ ಗೋಶಾಲೆಗಳಲ್ಲಿ ಕಳೆದ ಬಾರಿ 5 ಕೆ.ಜಿ. ಮೇವು ಇದ್ದುದನ್ನು 8 ಕೆ.ಜಿ. ಮಾಡಿದ್ದೇವೆ. ತಮ್ಮಿಂದ ಸಲಹೆ ಬಂದ ಪ್ರಕಾರ, ಮೇವನ್ನು ಹೊರ ರಾಜ್ಯಗಳಿಗೆ ಸಾಗಾಣಿಕೆ ಮಾಡುವುದನ್ನು ನಾವು ಈಗಾಗಲೇ ನಿಬರ್ಂಧ ಮಾಡಿದ್ದೇವೆ. ಮಹಾರಾಷ್ಟ್ರ ಮತ್ತು ಕೇರಳಕ್ಕೆ ಮೇವು ಹೋಗುತ್ತಿತ್ತು. ಅದನ್ನು ನಾವು ಈಗಾಗಲೇ ನಿರ್ಬಂಧ ಮಾಡಿದ್ದೇವೆ. ಕುಡಿಯುವ ನೀರಿನ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಗಳಾಗಿದೆ.. ಈಗಾಗಲೇ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 30 ಲಕ್ಷ ರೂಪಾಯಿ ನೀಡಿರುವುದನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಇದನ್ನು ಟ್ಯಾಂಕರುಗಳ ಮೂಲಕವೇ ನೀರು ಸರಬರಾಜು ಮಾಡಲು ಉಪಯೋಗಿಸಬೇಕು ಎನ್ನುವ ಅಂಶವಿರುವ ಬಗ್ಗೆ ಎಲ್ಲ ಶಾಸಕರು ಇಲ್ಲಿ ಪ್ರಸ್ತಾಪ ಮಾಡಿರುವುದನ್ನು ನಾನು ಗಮನಿಸಿದ್ದೇನೆ. ಕುಡಿಯುವ ನೀರು ಹಾಗೂ ಜಾನುವಾರು ಸಂರಕ್ಷಣೆಗೆ 396 ಕೋಟಿ

ರೂಪಾಯಿಗಳ ಅನುದಾನಕ್ಕೆ ನಾವು ಈಗಾಗಲೇ ಯೋಚನೆ ಮಾಡಿದ್ದೇವೆ. ಇದರಲ್ಲಿ 85 ಕೋಟಿ ಜಾನುವಾರು ಸಂರಕ್ಷಣೆಗೆ ಹಾಗೂ 280 ಕೋಟಿ ಕುಡಿಯುವ ನೀರಿನ ಕಾಮಗಾರಿಗಳಿಗೆ ಮತ್ತು ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲು ಈಗಾಗಲೇ ಯೋಚನೆ ಮಾಡಿದ್ದೇವೆ. 17,662 ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. 762 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಈಗಾಗಲೇ ಗಮನ ಕೊಟ್ಟಿದ್ದೇವೆ. ಹಾಗೂ 199 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಒಟ್ಟು 30 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. 199 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಉತ್ತರವನ್ನು ಕೊಡುತ್ತಿದ್ದೀರಿ. ಇವತ್ತು ನಾವು ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಬಹುತೇಕ ಎಲ್ಲರ ಮಾತನ್ನು ನಾನೂ ಕೂಡ ಕೇಳುತ್ತಿದ್ದೆ. ಪ್ರತಿಯೊಬ್ಬರೂ ಕೂಡ ತಾವು ಮಾತನಾಡುವಂಥ ಸಂದರ್ಭದಲ್ಲಿ ತಮ್ಮ ಜಿಲ್ಲೆಯಲ್ಲಿ 5 ಕೋಟಿ, 6 ಕೋಟಿ, 10 ಕೋಟಿ, 13 ಕೋಟಿ 15 ಕೋಟಿ ರೂಪಾಯಿಗಳ ಡ್ಯೂಸ್ ಇದೆ ಎಂದು ಹೇಳಿದರು. ಡಿಪ್ಯುಟಿ ಕಮೀಷನರ್‌ರವರು ದುಡ್ಡಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲೂ ಸಹ ಇವತ್ತು 13 ಕೋಟಿ ರೂಪಾಯಿಗಳ shortage ಇದೆ. ಈ 13 ಕೋಟಿ ರೂಪಾಯಿಗಳನ್ನು

ಕೊಡುವವರೆಗೆ ಯಾವ ಕಾಮಗಾರಿಯನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಹಿಂದೆ scarcity ಯಲ್ಲಿ ಮಾಡಿದಂಥ ಕಾಮಗಾರಿಗಳ ಒಂದು ಬಿಲ್‌ಅನ್ನೂ ಇಲ್ಲಿಯವರೆಗೆ ಕ್ಲಿಯರ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ಕ್ಲಿಯರ್ ಮಾಡಲು ನಮ್ಮ ಜಿಲ್ಲೆಯಲ್ಲಿ 13 ಕೋಟಿ ರೂಪಾಯಿಗಳು ಬೇಕು. ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಧುಡ್ಡು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿ. ಜನವರಿಯಲ್ಲಿ ಕೇಂದ್ರದಿಂದ 397 ಕೋಟಿ ರೂಪಾಯಿ ದುಡ್ಡು ಬಂದಿದೆ, ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಈಗ ಅವರಲ್ಲಿ ಎಷ್ಟೆಷ್ಟು ಹಣ ಲಭ್ಯವಿದೆ ಎನ್ನುವ ಮಾಹಿತಿಯನ್ನು ತಾವು ಕೊಟ್ಟರೆ ಎಲ್ಲರಿಗೂ ಕೂಡ ಸಮಾಧಾನವಾಗುತ್ತದೆ. ಈಗ ಪ್ರಶ್ನೆ ಬಂದಿರುವುದು ಇಷ್ಟೇ. ಗೋಶಾಲೆಗಳ ಬಗ್ಗೆ ಯಾರೂ ಕೇಳುತ್ತಿಲ್ಲ. ಹೋದ ವರ್ಷ ಮಾಡಿರುವಂಥ ಗೋಶಾಲೆಗಳಿಗೇ ಇನ್ನೂ ದುಡ್ಡು ಕೊಡುವುದಕ್ಕೆ ಆಗಿಲ್ಲ, ಹೋದವರ್ಷ ಬೋರ್‌ವೆಲ್‌ಗಳನ್ನು ಕೊರೆದಿರುವುದಕ್ಕೆ ಇನ್ನೂ ದುಡ್ಡು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದು ಬಹಳ ಮುಖ್ಯವಾಗಿರುವಂಥ ಪ್ರಶ್ನೆ. ಈಗ overduesಏನಿದೆ ಅದನ್ನು ಕ್ಲಿಯರ್ ಮಾಡಿ. ಇವತ್ತು ಯಾವ ಡಿಪ್ಯುಟಿ ಕಮೀಷನರ್‌ರವರ ಹತ್ತಿರವೂ ಹಣವಿಲ್ಲ. ಇನ್ನೊಂದು ಬಹಳ ಮುಖ್ಯವಾದುದೆಂದರೆ, ಇವತ್ತು ಎಲ್ಲ

ಕಡೆಯೂ ಬೋರ್‌ವೆಲ್ ಕೊರೆಯುವಂಥ ಅನಿವಾರ್ಯತೆ ಬಂದಿದೆ. ಆದರೆ ಟ್ಯಾಂಕರುಗಳ ಮೂಲಕ ಮಾತ್ರ ನೀರನ್ನು ಸಪ್ಲೈ ಮಾಡಿ ಎಂದು ಡಿಪ್ಯುಟಿ ಕಮೀಷನ್‌ರವರು ಹೇಳುತ್ತಾರೆ. ಹೋದ ವರ್ಷ ಟ್ಯಾಂಕರುಗಳ ಮೂಲಕ ಸಪ್ಲೈ ಮಾಡಿರುವುದಕ್ಕೆ ನೀವು ಇದುವರೆಗೂ ದುಡ್ಡು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈಗ ನೀರು ಕೊಡಿ ಎಂದರೆ ಯಾರೂ ಕೂಡ ಕೊಡುವುದಕ್ಕೂ ತಯಾರಿಲ್ಲ. ನೀರಿಗೆ ಇಷ್ಟು ಕಷ್ಟವಾಗಿರುವ ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಟಾಸ್ಕ್‌ಫೋರ್ಸ್‌ಗಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಬೋರ್‌ವೆಲ್ ಕೊರೆಯುವುದನ್ನು ಅನಿವಾರ್ಯವಾಗಿ ಮಾಡಲೇಬೇಕಾಗುತ್ತದೆ. ದಯಮಾಡಿ ಎಷ್ಟು ಹಣ ಕೊಡುತ್ತಿದ್ದೀರಿ, ಎಷ್ಟು ಬಿಡುಗಡೆ ಮಾಡುತ್ತಿದ್ದೀರಿ ಎನ್ನುವ ಬಗ್ಗೆ ಕೇಂದ್ರೀಕೃತವಾದರೆ ಪ್ರಯೋಜನವಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ತುಮಕೂರು ಮತ್ತು ಕೊಪ್ಪಳ ಈ ಎರಡು ಜಿಲ್ಲೆಗಳಲ್ಲಿ ಮಾತ್ರ ಕಳೆದ ವರ್ಷದ ಕುಡಿಯುವ ನೀರಿನ ಬಗ್ಗೆ ಬಾಕಿ ಇರುವುದು ಬಿಟ್ಟರೆ, ಉಳಿದೆಲ್ಲ ಜಿಲ್ಲೆಗಳಲ್ಲಿಯೂ ನಾವು ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಬಾಕಿ ಇಟ್ಟುಕೊಂಡಿಲ್ಲ. ತುಮಕೂರು ಮತ್ತು ಕೊಪ್ಪಳಗಳಲ್ಲಿ ಏಕೆ ಈ ಸಮಸ್ಯೆ ಇದೆ ಎಂದರೆ, ನಿಮಗೆ ಗೊತ್ತಿರುವ ಪ್ರಕಾರ, ನಾನು ನಿಮ್ಮ ಜಿಲ್ಲೆಗೆ ಬಂದಾಗ ನೀವೂ ಕೂಡ ಅದನ್ನು ಗಮನಿಸಿದಿರಿ, ಅವರು ಕ್ರಿಯಾ ಯೋಜನೆಯನ್ನು ಮಾಡುವಂಥ ಸಂದರ್ಭದಲ್ಲೇ ಸಿಕ್ಕಾಪಟ್ಟೆ ಮಾಡಿದ್ದಾರೆ, ನಮ್ಮ ನಿರೀಕ್ಷೆ ಮೀರಿ ಮಾಡಿದ್ದಾರೆ. ಆ ಕ್ರಿಯಾ ಯೋಜನೆಗೆ ನಾವು ಅಪ್ರೂವಲ್ ಸಹ

ಕೊಟ್ಟಿಲ್ಲ. ಆದರೂ ಕೂಡ ನಾವು ಇವತ್ತು ತುಮಕೂರಿಗೆ 3 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ, ಕೊಪ್ಪಳಕ್ಕೆ 2 ಕೋಟಿ 14 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಕುಡಿಯುವ ನೀರಿನ ಬಗ್ಗೆ ಕಳೆದ ಬಾರಿಯ ಬಾಕಿ ಇನ್ನು ಯಾವ ಜಿಲ್ಲೆಯಲ್ಲೂ ಇಲ್ಲ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಕ್ರಿಯಾ ಯೋಜನೆ ಮಾಡುವಂಥ ಸಂದರ್ಭದಲ್ಲಿ ಇಲ್ಲಿಂದ ಏನು instructions ಬಂದಿರುತ್ತದೆ ಅದರ ಪ್ರಕಾರವೇ ಕ್ರಿಯಾ ಯೋಜನೆಗಳು ಬಂದರೆ ಈ ರೀತಿಯ ಸಮಸ್ಯೆಗಳಾಗುವುದಿಲ್ಲ. ಕ್ರಿಯಾ ಯೋಜನೆಯನ್ನು ಜಾಸ್ತಿ ಮಾಡಿ ಹಣ ಕೊಡಿ ಎಂದರೆ ಎಲ್ಲಿಂದ ಕೊಡುವುದಕ್ಕೆ ಆಗುತ್ತದೆ. ನೀವು ಮಂತ್ರಿಗಳಾಗಿದ್ದವರು, ನಿಮಗೂ ಗೊತ್ತಿದೆ. ಅದಕ್ಕೋಸ್ಕರ ನಾನು ನಿಮಗೆ ಪ್ರಾರ್ಥನೆ ಮಾಡುತ್ತೇನೆ, ಕ್ರಿಯಾ ಯೋಜನೆ ಮಾಡುವಂಥ ಸಂದರ್ಭದಲ್ಲೇ ನಿಮಗೆ ಏನು instructions ಬಂದಿರುತ್ತದೆ, ದಯವಿಟ್ಟು ಆ ಪ್ರಕಾರ ಮಾಡಿಸಿ. ನಾವು ಕುಡಿಯುವ ನೀರಿಗೆ ಎಷ್ಟು ಹಣ ಬಿಡುಗಡೆ ಮಾಡುತ್ತೇವೆ ಎನ್ನುವ ಬಗ್ಗೆ ತಾವು ಎರಡನೆಯ ಅಂಶವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಈಗಾಗಲೇ ಮಾತನಾಡಿರುವ ಎಲ್ಲರೂ ಟ್ಯಾಂಕರ್ ಮೂಲಕವೇ ಸಪ್ಲೈ ಮಾಡಬೇಕೆಂದರೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಇದು ಸತ್ಯ. ನಾವು ಈಗಾಗಲೇ 100 ಕೋಟಿ ರೂಪಾಯಿ ಹಣವನ್ನು ಈಗಾಗಲೇ ತೆಗೆದಿಟ್ಟುಕೊಂಡು, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ

ಮಾಡಿದ್ದೇವೆ. ಅದರ ಪ್ರಕಾರ 47.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಟ್ಯಾಂಕರ್ ಮುಖಾಂತರವೇ ಮಾಡಬೇಕೆಂದು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಇರುವುದಕ್ಕಾಗಿ ನಾವು ಆ ಪ್ರಕಾರ ಮಾಡುತ್ತಿದ್ದೇವೆ. ಈಗ ನಾವು ಆದಷ್ಟು ಬೇಗ, 100 ಕೋಟಿ ರೂಪಾಯಿಗಳಲ್ಲಿ ಉಳಿದಿರುವಂಥ 52.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. ಅದಕ್ಕೆ ಈಗಾಗಲೇ ನಾವು Finance Department ನಿಂದ ಅಪ್ರೂವಲ್ ಕೂಡ ತೆಗೆದು ಕೊಂಡಿದ್ದೇವೆ. ಉಳಿದಿರುವ 52.5 ಕೋಟಿಗೆ ಈಗ ಬಿಡುಗಡೆ ಮಾಡುವುದಕ್ಕೆ ಈ ರೀತಿಯ ಕಂಡೀಷನ್ ಹಾಕುವುದಿಲ್ಲ. ಇದಲ್ಲದೇ, ಮತ್ತೂ ನೂರು ಕೋಟಿ ರೂಪಾಯಿಗಳನ್ನು ನಾವು ಇನ್ನೊಂದು ವಾರ ಅಥವಾ 15 ದಿವಸಗಳಲ್ಲಿ ಬಿಡುಗಡೆ ಮಾಡುತ್ತೇವೆ. ಅದಕ್ಕೂ ಯಾವ ಕಂಡೀಷನ್ ಅನ್ನೂ ಹಾಕುವುದಿಲ್ಲ. ಅದಲ್ಲದೇ, ಮುಂದಿನ ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನ ಸಂದರ್ಭಕ್ಕೆ ಮತ್ತೂ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. Next year ಒಳಗೆ ಏನು ಬಿಡುಗಡೆ ಮಾಡಬೇಕೆಂದು ಇದೆ, ಅದನ್ನೂ ಏಪ್ರಿಲ್ ಒಳಗೆ ನಾವು ಬಿಡುಗಡೆ ಮಾಡುವುದರಿಂದ ಏನಾಗುತ್ತದೆ ಎಂದರೆ, ಈ ಬರಗಾಲದ ಹಾಹಾಕಾರವನ್ನು ತಗ್ಗಿಸಬಹುದು. ಇದನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಿ, ಒಟ್ಟಾರೆ ಮಾರ್ಚ್–ಏಪ್ರಿಲ್ ಹೊತ್ತಿಗೆ ಒಟ್ಟು 450 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿಯೇ

ಬಿಡುಗಡೆ ಮಾಡಬೇಕೆಂದು ನಾವು ತೀರ್ಮಾನವನ್ನು ಮಾಡಿದ್ದೇವೆ ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಮಾನ್ಯ ರೇವಣ್ಣನವರು ಪ್ರಸ್ತಾಪ ಮಾಡಿದರು, ಕೇಂದ್ರ ಸರ್ಕಾರಕ್ಕೆ ನಾವು ಮೂರು ಸಾರಿ ಪ್ರಸ್ತಾವನೆಯನ್ನು ಕಳುಹಿಸಿದೆವು, 11,000 ಕೋಟಿ ರೂಪಾಯಿಗೆ ನಾವು memorandum ಅನ್ನು ಕಳುಹಿಸಿದೆವು. ಆದರೆ ನಮಗೆ ಬಂದಿದ್ದು 397 ಕೋಟಿ. ತಾವೂ ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದಿರಿ. ಶರದ್ ಪವಾರ್‌ರವರು ರಾಜ್ಯಕ್ಕೆ ಬಂದಂಥ ಸಂದರ್ಭದಲ್ಲಿ, ಎಲ್ಲ ಶಾಸಕರ ಮತ್ತು ಅಧಿಕಾರಿಗಳ ವಿಶೇಷ ಸಭೆ ನಡೆದಂಥ ಸಂದರ್ಭದಲ್ಲಿ ಅವರು ಕರ್ನಾಟಕ ರಾಜ್ಯದಲ್ಲಿ ಭೀಕರ ಬರಗಾಲವಿದೆ, ಇದಕ್ಕೆ ನಾನು ಅತಿ ಹೆಚ್ಚು ಪ್ರಯತ್ನವನ್ನು ಮಾಡುತ್ತೇನೆ ಎಂದು ಹೇಳಿದರು. ನಾವು 11,000 ಕೋಟಿ ರೂಪಾಯಿ ಕೇಳಿದರೆ ಅದರಲ್ಲಿ ನಮಗೆ ಬಂದದ್ದು 397 ಕೋಟಿ ರೂಪಾಯಿ. ಅದರಲ್ಲಿ ನಾವು ಏನು ಮಾಡಬಹುದು ಎಂದು ದಯವಿಟ್ಟು ನೀವು ಯೋಚನೆ ಮಾಡಿ? ಆದರೂ ಕೂಡ ಈ ವಿಚಾರದಲ್ಲಿ ನಮ್ಮ ಕರ್ತವ್ಯವಿದೆ. ಏಕೆಂದರೆ ನಾವು ಕೇವಲ ಕೇಂದ್ರ ಸರ್ಕಾರವನ್ನೇ ತೋರಿಸಿಕೊಂಡು ಕುಳಿತುಕೊಳ್ಳಲು ಆಗುವುದಿಲ್ಲ. ಅದಕ್ಕೋಸ್ಕರವೇ ಒಟ್ಟು 450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ನಾನು ಹೇಳಿದೆ. ತಾವೆಲ್ಲರೂ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ 2 ಕೋಟಿ ಕೊಡಿ ಎಂದು ಹೇಳಿದಿರಿ. ಆದರೆ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಒಂದೊಂದು

ವಿಧಾನಸಭಾ ಕ್ಷೇತ್ರಕ್ಕೆ ಬರಲು ಅವಕಾಶವಿದೆ. ಈ ದಿಕ್ಕಿನಲ್ಲೂ ಕೂಡ ನಾವು ಪ್ರಯತ್ನವನ್ನು ನಡೆಸುತ್ತಿದ್ದೇವೆ. ಇದಲ್ಲದೇ ಎಲ್ಲೆಲ್ಲಿ ಗೋಶಾಲೆಗಳು ಬೇಕು ಎಂದೆನಿಸುತ್ತದೆ, ಕಳೆದ ಬಾರಿ ಎಲ್ಲಾ ಜಿಲ್ಲಾ ಪ್ರಮುಖರ ಜೊತೆ ಕುಳಿತು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಗೋಶಾಲೆಗಳು ಬೇಕು ಎಂದು ಹೇಳಿದರೋ, ಆ ಎಲ್ಲ ಕಡೆ ಗೋಶಾಲೆಗಳನ್ನು ತೆಗೆದಿದ್ದಕ್ಕೆ ನೀವು ಒಪ್ಪಿದ್ದೀರಿ ಎಂದು ನಾನಾದರೂ ಭಾವಿಸುತ್ತೇನೆ. ಇಂಥ ಕಡೆ ಗೋಶಾಲೆ ಬೇಕು ಎಂದಾಗ ಎಲ್ಲಿಯೂ ನಾವು ಗೋಶಾಲೆಗಳನ್ನು ಮಾಡಲಿಲ್ಲ ಎನ್ನುವ ಪ್ರಶ್ನೆ ಬರಲಿಲ್ಲ. ಇಡೀ ರಾಜ್ಯದಲ್ಲಿ ಎಲ್ಲ ಭಾಗಗಳಲ್ಲಿಯೂ ಗೋಶಾಲೆಗಳನ್ನು ಮಾಡಿದೆವು. ಜಾನುವಾರುಗಳಿಗೆ 5 ಕೆ.ಜಿ. ಮೇವು ಸಾಕಾಗುವುದಿಲ್ಲ ಎಂದು ಹೇಳಿರುವುದಕ್ಕೆ ಅದನ್ನು 8 ಕೆ.ಜಿ. ಮಾಡಿರುವುದಕ್ಕೆ ನೀವೆಲ್ಲರೂ ಸಹಕಾರ ಕೊಟ್ಟಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ: ಖಂಡಿತ ಅದನ್ನು ಮಾಡಿದ್ದೀರಿ. ನನ್ನ ಜೊತೆಯಲ್ಲಿ ನನ್ನ ಕ್ಷೇತ್ರಕ್ಕೂ ಬಂದಿದ್ದೀರಿ. ಆದರೆ ಪ್ರಶ್ನೆ ಬಂದಿರುವುದು ಏನೆಂದರೆ, ಆವತ್ತು ಏನು expendicure ಆಗಿತ್ತು ಅದಕ್ಕೆ ಇವತ್ತಿನವರೆಗೆ ದುಡ್ಡು ಕೊಟಿಲ್ಲ, ಮೇವು ಸಪ್ಲೈ ಮಾಡಿದವರಿಗೆ ದುಡ್ಡು ಕೊಟ್ಟಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಮತ್ತೆ ಅದನ್ನೇ ಹೇಳುತ್ತೇನೆ. ನಾನು ಈ ಸಭೆಯಲ್ಲಿ ಹೇಳುತ್ತಿದ್ದೇನೆ, ತುಮಕೂರು ಮತ್ತು ಕೊಪ್ಪಳ ಈ ಎರಡು

ಜಿಲ್ಲೆಗಳನ್ನು ಬಿಟ್ಟರೆ, ಇನ್ಯಾವುದಾದರೂ ಜಿಲ್ಲೆಯದು ಬಾಕಿ ಇದೆ ಎಂದು ಹೇಳಿದರೆ ನಾನು ನಾಳೆಯೇ ಅದನ್ನು ಕ್ಲಿಯರ್ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ತುಮಕೂರು ಜಿಲ್ಲೆಯಲ್ಲಿ ಏಕೆ ಈ ಪ್ರಾಬ್ಲಂ ಆಯಿತು?

ಶ್ರೀ ಕೆ.ಎಸ್. ಈಶ್ವರಪ್ಪ: ಕ್ರಿಯಾ ಯೋಜನೆಯದನ್ನು ಜಾಸ್ತಿ ಮಾಡಿದಿರಿ. ಅದೊಂದೇ ಕಾರಣ.

ಶ್ರೀ ಟಿ.ಬಿ. ಜಯಚಂದ್ರ: Excess plan ಮಾಡಿದ್ದೀರಿ ಎನ್ನುವ ಪ್ರಶ್ನೆಯಲ್ಲ. ಶಾಸಕರ ಒತ್ತಾಯದ ಮೇಲೆ ಅಲ್ಲಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಡೆಪ್ಯುಟಿ ಕಮೀಷನರ್‌ಗಳೂ ಕೂಡ ಅನಿವಾರ್ಯವಾಗಿ ಕಾರ್ಯಕ್ರಮಗಳನ್ನು ಹಾಕಬೇಕಾಗಿ ಬಂತು. ಹಾಗಾಗಿ ಇವತ್ತು ಆ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಅವುಗಳಿಗೆ ಇನ್ನೂ ಅಪ್ರೂವಲ್ ಕೊಟ್ಟಿಲ್ಲ ಎಂದು ಹೇಳಿದಿರಿ. ಡಿಪ್ಯುಟಿ ಕಮೀಷನರ್‌ರವರು ಅನಿವಾರ್ಯವಾಗಿ ಅಪ್ರೋವಲ್ ಕೊಡಲೇಬೇಕಾಗಿ ಬಂತು.

ಎಲ್ಲಾ ಶಾಸಕರೂ ಹಟ ಮಾಡಿ ಅಷ್ಟು ದುಡ್ಡು ತೆಗೆದುಕೊಂಡು ಹೋಗಿ ಇವತ್ತು ಕೆಲಸಗಳನ್ನು ಮಾಡಿಸಿದ್ದಾರೆ. ಆದರೆ, ಯಾರಿಗೂ payment ಆಗುತ್ತಿಲ್ಲ. ಎರಡನೆಯದು ಬಹಳ ಮುಖ್ಯವಾದುದು ಎಂದರೆ, ನೀವು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು. ವಿದ್ಯುಚ್ಛಕ್ತಿಯ ಕೊರತೆ ಇರುವುದು ಒಂದು ಕಡೆಯಾದರೆ,

ಇಲ್ಲಿಯವರೆಗೆ ಎಷ್ಟು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಅದು NRDWP ಇರಬಹುದು, ಮತ್ತೊಂದು ಇರಬಹುದು, ಮಾಡಿರತಕ್ಕಂಥ ಕೆಲಸಗಳಿಗೆ ಒಂದಕ್ಕೂ ಕೂಡ service ಕೊಡುತ್ತಿಲ್ಲ. ಒಬ್ಬರ ಹತ್ತಿರವೂ ಬೋರ್ Transformers ಇಲ್ಲ. Wires ಇಲ್ಲ. ದಯಮಾಡಿ, ಅದಕ್ಕೆ materials ಕೊಡುವ ಕಡೆ ಗಮನಕೊಡಿ. ನಾನು ತಮಗೆ ಇಷ್ಟೇ ಹೇಳುತ್ತೇನೆ. ಈ ಸಮಸ್ಯೆಯನ್ನು ಯಾವುದೇ ಸರ್ಕಾರವಿದ್ದರೂ ನಿಭಾಯಿಸತಕ್ಕಂಥದ್ದು ಕಷ್ಟವಿದೆ ಎಂಬುದನ್ನು ಒಪ್ಪುತ್ತೇನೆ. ಆದರೆ, ಈಗ ನೀವು ಅವರ electrification ಗೆ ಬೇಕಾದಂಥ ಎಲ್ಲಾ ಸೌಕರ್ಯಗಳನ್ನು ಕೊಟ್ಟು electrify ಮಾಡಿಸಿ, ಈಗ execute ಆಗಿರತಕ್ಕಂಥ projects ಗಳನ್ನು complete ಮಾಡಿಸಿ ನೀರು ಕೊಡಿಸುವ ಕೆಲಸ ಮಾಡಿದರೆ 60% problem ಬಗೆಹರಿಯುತ್ತದೆ. ಎಲ್ಲ ಕೆಲಸವೂ ಆಗುತ್ತದೆ. Physical ಆಗಿ ಕೆಲಸವೂ ಆಗುತ್ತದೆ. ಆದರೆ, electricity connection ಸಿಗುವುದಿಲ್ಲ, ಅದರಿಂದ problem ಆಗಿದೆ. ಅದರ ಕಡೆ ಗಮನ ಕೊಡಬೇಕು. ಏಕೆಂದರೆ, ಈಗ ನಮ್ಮಲ್ಲಿ 6 phase ಎಂದರೆ 3 phase ನಲ್ಲಿ 6 ಗಂಟೆ ಕರೆಂಟ್ ಕೊಡುತ್ತೇವೆ ಎನ್ನುತ್ತೀರಿ. ನಿಜವಾಗಿಯೂ ಕೂಡ interruption ಎಷ್ಟು ಜಾಸ್ತಿಯಾಗಿದೆ, load shedding ಎಷ್ಟಾಗಿದೆ ಎಂದರೆ, ಕನಿಷ್ಠ ಎಂದರೆ 5–10 ಸಾರಿ load shedding ಆಗುತ್ತದೆ. ದಿನಕ್ಕೆ 3 ಗಂಟೆ ಮೇಲೆ ಕರೆಂಟ್ ಸಿಗುವುದಕ್ಕೆ ಸಾಧ್ಯವೇ ಇಲ್ಲ. 3 ಗಂಟೆಯಲ್ಲಿ ಯಾವ

ರೀತಿಯಾಗಿ ನೀರು ತುಂಬಿಸಿಕೊಳ್ಳುತ್ತಾರೆ? ನೀರನ್ನು ಎತ್ತಿಸುತ್ತಾರೆ? ಅದನ್ನೂ ಕೂಡ ರಾತ್ರಿ ಅರ್ಧ ಹೊತ್ತಿನಲ್ಲಿ ಕೊಡುತ್ತಾರೆ. ಈ ರೀತಿಯ ಪ್ರಶ್ನೆ ಇದೆ. ದಯಮಾಡಿ, ಇದರ ಬಗ್ಗೆ ಏನಾದರೂ ತೀರ್ಮಾನ ಮಾಡತಕ್ಕಂಥ ರೀತಿಯಲ್ಲಿ, ಸಮನ್ವಯ ಮಾಡತಕ್ಕಂಥ ಕೆಲಸ ಮಾಡಿದರೆ ಪ್ರಯೋಜನವಾಗುತ್ತದೆ. ಇಲ್ಲವೆಂದರೆ, ಬಹಳ ಕಷ್ಟವಾಗುತ್ತದೆ. ಕೇವಲ ಹಣ ಬಿಡುಗಡೆ ಮಾಡಿದಾಕ್ಷಣಕ್ಕೇ ಕೆಲಸ ಆಗುತ್ತದೆ ಎನ್ನತಕ್ಕಂಥ ಪ್ರಶ್ನೆಯಲ್ಲ.

ಶ್ರೀ ಸಿದ್ದರಾಮಯ್ಯ: ಈಶ್ವರಪ್ಪನವರೆ, ಬಿಡುಗಡೆ ಮಾಡಿರುವುದು ಕೇವಲ 30 ಲಕ್ಷ ರೂಪಾಯಿ. ಆ 30 ಲಕ್ಷ ರೂಪಾಯಿಗಳಲ್ಲಿ ಗೋಶಾಲೆಗಳಿಗೆ ಮೇವು ತೆಗೆದುಕೊಳ್ಳಲಿಕ್ಕೆ ಹಣ ಕೊಡಬೇಕೆಂದು ಹೇಳಿದ್ದೀರಿ. Tankers ಮೂಲಕ ನೀರು ಕೊಡಬೇಕೆಂದು ಹೇಳಿದ್ದೀರಿ. ನಾನು ಅದನ್ನು ಓದಿದೆ. ನೀವು ಸದನದಲ್ಲಿ ಇದ್ದಿರೋ, ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಮೈಸೂರು ಡಿ.ಸಿ.ಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಶ್ನೆ ಇರತಕ್ಕಂಥದ್ದು ಇಷ್ಟು. ಅನೇಕ ಕಡೆಗಳಲ್ಲಿ ಬೋರ್‌ವೆಲ್‌ಗಳೆಲ್ಲ ಬತ್ತಿ ಹೋಗಿವೆ. ಹೊಸ ಬೋರ್‌ವೆಲ್ ತೋಡಿಸಬೇಕು. ಅಲ್ಲೇನು ಮಾಡಬೇಕು? ಅದಕ್ಕೆ ಹಣ ಕೊಟ್ಟಿಲ್ಲವೆನ್ನುವುದು ಪ್ರಶ್ನೆ ಇದೆ. ಕೆರೆಗಳೆಲ್ಲ ಬತ್ತಿಹೋಗಿವೆ. ನೀವೇ ಅಂಕಿ–ಅಂಶ ಕೊಟ್ಟಿರುವ ಪ್ರಕಾರ 3524 ಕೆರೆಗಳಲ್ಲಿ ಸುಮಾರು 2300 ಕೆರೆಗಳು ಬತ್ತಿ ಹೋಗಿವೆ. ಇನ್ನಷ್ಟು ಕೆರೆಗಳಲ್ಲಿ 30–40% ನೀರು ಏನಿದೆ ಅದೂ ಹೋಗಿಬಿಡುತ್ತದೆ.

ಇಲ್ಲಿಯವರೆಗೆ ಮಳೆ ಬಂದ ನೀರು ಇತ್ತು. ಇನ್ನು ಮೇಲೆ ಏನೂ ಇರುವುದಿಲ್ಲ. ಮಳೆ ನೀರೇ ಇರುವುದಿಲ್ಲ. ಆ ತರಹ ಪರಿಸ್ಥಿತಿಯಾಗುತ್ತದೆ. ದನಕರುಗಳಿಗೆ ಕುಡಿಯುವುದಕ್ಕೂ ನೀರು ಇರುವುದಿಲ್ಲ. ಇಂಥ ಪರಿಸ್ಥಿತಿ ಬಂದಾಗ, ಅದಕ್ಕೋಸ್ಕರ ನಾನು ಹೇಳುವುದು. ನೀವು ಕೊಟ್ಟಿರತಕ್ಕಂಥ 30 ಲಕ್ಷ ರೂಪಾಯಿ tanker ಗಳ ಮೂಲಕ ನೀರು ಕೊಡುವುದಕ್ಕೆ, ಮೇವು ಕೊಡಲಿಕ್ಕೆ ಆಯಿತು. ಹೊಸದಾಗಿ ನೀರು ಕೊಡಬೇಕಾದರೆ ಏನು ಮಾಡಬೇಕು? ಅದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು): ಕೇಂದ್ರ ಸರ್ಕಾರದಿಂದ ಏನು ಫಂಡ್ ಬಂದಿತ್ತು, ಅದರಲ್ಲಿ ಆ condition ಹಾಕಿಯೇ release ಮಾಡಿದ್ದಾರೆ. ನಾವು ಈಗಾಗಲೇ 30 ಲಕ್ಷ ರೂಫಾಯಿಗಳನ್ನು ಏನು releaseಮಾಡಿದ್ದೇವೆ, ಅದಕ್ಕೆ ಈ condition ಹಾಕಿ ಮಾಡಿದ್ದೇವೆ. ಇನ್ನೊಂದು ವಾರದಲ್ಲಿ ಮತ್ತೆ 30 ಲಕ್ಷ ರೂಪಾಯಿಗಳನ್ನು release ಮಾಡುತ್ತೇವೆ. ನಮ್ಮ ಹತ್ತಿರ ಇರುವ ಒಟ್ಟು ನೂರು ಕೋಟಿ ರೂಫಾಯಿಗಳಲ್ಲಿ ಮತ್ತೆ 30 ಲಕ್ಷ ರೂಪಾಯಿಗಳನ್ನು release ಮಾಡುತ್ತಿದ್ದೇವೆ. ಅದಕ್ಕೆ ಯಾವುದೇ condition ಇರುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಒಂದು constituency ಗೆ ಕೋಟಿ ರೂಪಾಯಿ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ಇಷ್ಟು ಜನ ಶಾಸಕರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಬಾರಿ ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಬಂದಂಥ ಸಂದರ್ಭದಲ್ಲಿ ನೀವು ಹೇಳಿದಷ್ಟು ಕೊಡಲು ನಾವು ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ.

ಈಗಾಗಲೇ ನಾವು ಮತ್ತೆ 100 ಕೋಟಿ ರೂಪಾಯಿಗಳನ್ನು ಇನ್ನು ವಾರ, 15 ದಿವಸಗಳಲ್ಲಿ release ಮಾಡುವ ತೀರ್ಮಾನ ತೆಗೆದುಕೊಂಡಿದ್ದೇವೆ. ಈಗ ಏನು 30 ಲಕ್ಷ ರೂಪಾಯಿಗಳನ್ನು release ಮಾಡಿದ್ದೇವೆ ಇದಲ್ಲದೆ...

ಶ್ರೀ ಸಿದ್ದರಾಮಯ್ಯ: ನೀವು ಕೊಟ್ಟಿರುವ 30 ಲಕ್ಷ ರೂಪಾಯಿಗಳಲ್ಲಿ ಹೊಸದಾಗಿ ಮಾಡುವುದಕ್ಕೆ ಒಂದೇ ಒಂದು ರೂಪಾಯಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ. Guidelines specific ಆಗಿದೆ. ಅದಕ್ಕೇ ನಾನು ಹೇಳುವುದು. ನಿಮ್ಮ ಉತ್ತರ ಆದ ತಕ್ಷಣವೇ Chief Minister ಹತ್ತಿರ ಕುಳಿತುಕೊಂಡು ಹಣ ಬಿಡುಗಡೆ ಮಾಡಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ: ನಾವೇನು ಮಾಡಿದ್ದೇವೆಂಬುದನ್ನು ಕೇಳಿ. ಆಮೇಲೆ ನೀವು ಮತ್ತೆ ಕೇಳಿ. ನಾನು ಖಂಡಿತ ನಿಮ್ಮ ಮಾತನ್ನು ಕೇಳುತ್ತೇನೆ. ಈಗೇನು 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. Central Government Guidelines ಪ್ರಕಾರ ಕೊಟ್ಟಿದ್ದೇವೆ. ಈಗ 47 ಕೋಟಿ ರೂಪಾಯಿ ಆಗಿದೆ. ಇನ್ನು 53 ಕೋಟಿ ರೂಪಾಯಿಗಳನ್ನು ನಾವು ನಾಳೆ, ನಾಡಿದ್ದರಲ್ಲಿ release ಮಾಡುತ್ತೇವೆ. ಅದಕ್ಕೆ

ಯಾವುದೂ condition ಹಾಕುವುದಿಲ್ಲ. ನಾವು 100 ಕೋಟಿ ರೂಪಾಯಿಗಳನ್ನು ಮುಂದಿನ ವಾರ ಮತ್ತೆ ರಾಜ್ಯ ಸರ್ಕಾರದ ಹಣವನ್ನು release ಮಾಡುತ್ತಿದ್ದೇವೆ. ಇನ್ನು 8-10 ದಿವಸಗಳಲ್ಲಿಯೇ ಇನ್ನೂ 100 ಕೋಟಿ ರೂಪಾಯಿಗಳನ್ನು ಯಾವುದೇ conditions ಇಲ್ಲದೇ ಮತ್ತೆ release ಮಾಡುತ್ತೇವೆ, ಇದಲ್ಲದೆ, ಮತ್ತೆ 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ತೀರ್ಮಾನವನ್ನು ಈಗಾಗಲೇ ನಾವು ತೆಗೆದುಕೊಂಡಿದ್ದೇವೆ. ಈ ವರ್ಷ ಮುಗಿಯುತ್ತಾ ಬಂದಿರುವ ಸಂದರ್ಭದಲ್ಲಿ ಮಾರ್ಚ್, ಏಪ್ರಿಲ್‌ಗೆ ಮತ್ತೆ 250 ಕೋಟಿ ರೂಪಾಯಿಗಳನ್ನು release ಮಾಡಬೇಕೆಂಬ ತೀರ್ಮಾನ ಮಾಡಿದ್ದೇವೆ. ಮಾರ್ಚ್, ಏಪ್ರಿಲ್‌ಗೆ 2 ಕಂತುಗಳಲ್ಲಿ 125 ಕೋಟಿ ರೂಪಾಯಿ, 125 ಕೋಟಿ ರೂಪಾಯಿಗಳಂತೆ ಬಿಡುಗಡೆ ಮಾಡುತ್ತೇವೆ. ಅಂದರೆ ನೀವು ಒಂದು ವಿಧಾನಸಭಾ ಕ್ಷೇತ್ರಕ್ಕೆ 2 ಕೋಟಿ ರೂಪಾಯಿ ಎಂದು ಹೇಳಿದಿರಲ್ಲ, ಅದಕ್ಕಿಂತಲೂ ಸ್ವಲ್ಪ ಜಾಸ್ತಿಯಾಗುತ್ತದೆ. 3 ಕೋಟಿ ರೂಪಾಯಿ ಹತ್ತಿರಕ್ಕೆ ಬರುತ್ತದೆ. ಈ ದಿಕ್ಕಿನಲ್ಲಿ ನಾವು ಈ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಜೊತೆಗೆ, ಮೇವಿನ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮೇವು ಸಾಗಾಣಿಕೆ ನಿರ್ಬಂಧವನ್ನು ಕೂಡ ಬೇರೆ ಬೇರೆ ರಾಜ್ಯಗಳಿಗೆ ಹೋಗದಂತೆ ನಾವು ಈಗಾಗಲೇ ಹಾಕಿದ್ದೇವೆ. ಇವತ್ತು ಎಲ್ಲೆಲ್ಲಿ ಮೇವು ಬೆಳೆಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಮೇವು ಕೂಡ ಬೆಳೆಸಲಾಗುತ್ತಿದೆ. ಯಾವುದು ಎಷ್ಟು

ಎನ್ನುವ ಬಗ್ಗೆ ನಾನು ಪ್ರಸ್ತಾಪ ಮಾಡಿದೆ. ಇಡೀ ರಾಜ್ಯದಲ್ಲಿ ಎಲ್ಲಿಯೂ ಮೇವು ಕೊರತೆಯಾಗದ ಹಾಗೆ ನಾವು ನೋಡಿಕೊಳ್ಳುತ್ತಿದೇವೆ. ಈ ವಿದ್ಯುತ್ ಸಮಸ್ಯೆ ಬಗೆಹರಿಸುವುದು ಹೇಗೆ ಎಂಬ ಬಗ್ಗೆ ನನಗೂ ಗಾಬರಿ! ಕಳೆದ ಬಾರಿ ನಿಮ್ಮ ನಿಮ್ಮ ಜಿಲ್ಲೆಗಳಿಗೆ ಬಂದಂಥ ಸಂದರ್ಭದಲ್ಲಿ ಬರಗಾಲವಿರುವಂಥ ಜಾಗಗಳಲ್ಲಿ ವಿಶೇಷವಾಗಿ ಏನು ಬೋರ್‌ವೆಲ್ ಕೊರೆಸಿದಿರಿ, ಜನರಲ್ ಬೋರ್‌ವೆಲ್ ಅಲ್ಲ, ಬರಗಾಲಕ್ಕೋಸ್ಕರವೇ, ಕುಡಿಯುವ ನೀರಿಗೋಸ್ಕರವೇ ಬೋರ್‌ವೆಲ್ ಕೊರೆಸಿದ್ದೀರಿ, ಅದಕ್ಕೆ ತುರ್ತಾಗಿ ನಾವು TC ಹಾಕಿಸಿ, ಕಳೆದ ಬಾರಿ ಪವರ್ ಕೊಟ್ಟಿದ್ದೇವೆ. ಈಗ ಇರುವ ವಿದ್ಯುತ್ ಹಾಹಾಕಾರದ ಬಗ್ಗೆ ಏನು ಮಾಡಬೇಕೆನ್ನುವ ಬಗ್ಗೆ ನಾನು ಮುಖ್ಯಮಂತ್ರಿಯವರ ಹತ್ತಿರ ಮಾತನಾಡುವುದಿದೆ.

ಶ್ರೀ ಸಿದ್ದರಾಮಯ್ಯ: ಒಂದು direction ಏನು ಹೇಳಿದಿರಿ ಎಂದರೆ, ವಿದ್ಯುಚ್ಛಕ್ತಿಗೆ ತೊಂದರೆಯಾದ ಸಂದರ್ಭದಲ್ಲಿ diesel generator ಗಳನ್ನು ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ, ನನಗೆ ಗೊತ್ತಿರುವ ಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಎಲ್ಲೂ ಕೂಡ ಇಲ್ಲ. Diesel generator ಗಳನ್ನು ಇಟ್ಟುಕೊಂಡು ಅದನ್ನು ಉಪಯೋಗಿಸಿಕೊಂಡು ಕುಡಿಯುವ ನೀರಿಗೆ ಬಳಸಿಕೊಳ್ಳಬೇಕೆಂದು ಹೇಳಿದ್ದೀರಿ. ಅದನ್ನು ಮಾಡಿದ್ದೀರಾ? ಅದು ಯಾವ ಜಿಲ್ಲೆಯಲ್ಲೂ ಇಲ್ಲ. ಒಂದು ರೂಪಾಯಿಯೂ ಇಲ್ಲ. ನಿಮ್ಮ ಅಧಿಕಾರಿಗಳಿಗೆ, ಅಲ್ಲಿನ

ಜಿಲ್ಲಾಧಿಕಾರಿಗಳಿಗೆ ಹಣ ಕೊಟ್ಟು ಬಹಳ ಸ್ಪಷ್ಟವಾಗಿ ಇದನ್ನು ಹೇಳಬೇಕು. ಎಲ್ಲಿ ಕರೆಂಟ್‌ಗೆ ತೊಂದರೆಯಾಗುತ್ತದೆ ಅದರ ಬಗ್ಗೆ ನೀವೇ ಈಗಾಗಲೇ ಹೇಳಿದ್ದೀರಿ. ಅದು ನನಗೆ ಕೊಟ್ಟಿರುವ ನಿಮ್ಮ ಉತ್ತರದಲ್ಲಿದೆ. ಅಂಥ ಕಡೆ diesel generator ಇಟ್ಟುಕೊಂಡು ನೀರು ತೆಗೆದುಕೊಳ್ಳಲು ಅವಕಾಶ ಮಾಡಬೇಕು. ಕರೆಂಟ್ ಉತ್ಪಾದನೆ ಮಾಡಿಕೊಂಡು ಮಾಡಬೇಕೆಂದು ಹೇಳಿದ್ದಾರೆ. ಆದರೆ, ಅದನ್ನು ಎಲ್ಲಿಯೂ implement ಮಾಡುತ್ತಿಲ್ಲ. ಆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅವರ ಕೈಗೆ ಹಣ ಕೊಟ್ಟು strict ಆಗಿ ಇದನ್ನು ಮಾಡಲೇಬೇಕೆಂದು ಹೇಳಬೇಕು. ಇಲ್ಲದೇ ಹೋದರೆ, ಕರೆಂಟ್ improve ಆಗುತ್ತದೆ ಎಂದು ನನಗೇನೂ ಈಗ ಅನಿಸುವುದಿಲ್ಲ. ಈಶ್ವರಪ್ಪನವರೆ, ಈಗ 2 ಗಂಟೆ ಕೂಡ ಕರೆಂಟ್ ಸಿಗುವುದಿಲ್ಲ. ಇನ್ನು, ಕುಡಿಯುವ ನೀರಿಗೆ ಹೇಗೆ ಆಗುತ್ತದೆ? ಮಾಡುವುದನ್ನು ಕೂಡಲೇ ಮಾಡಬೇಕು. ಅದಕ್ಕೇ ನಾನು ಹೇಳುವುದು, ಇವೆಲ್ಲಕ್ಕೂ ಕೂಡ ಉಪಯೋಗವಾಗಲಿಕ್ಕೆ ಹೆಚ್ಚು ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿ. ಅಧಿಕಾರಿಗಳ ಮಾತನ್ನೇ ನೀವು ಕೇಳುವುದಕ್ಕೆ ಹೋಗಬೇಡಿ. ಜಿಲ್ಲಾಧಿಕಾರಿಗಳಿಗೆ ಹೆಚ್ಚು ಹಣ ಕೊಟ್ಟು ಇದನ್ನು ಮಾಡಬೇಕು ಎಂದು ಹೇಳಬೇಕು. ಅಧಿವೇಶನ ಮುಗಿದ ಮೇಲೆ ಎಲ್ಲಾ ಕಡೆ ಒಂದು round ಹೋಗಿ, ಜಿಲ್ಲಾಧಿಕಾರಿಗಳಿಗೆ ಈ ತರಹ ಮಾಡಿ ಎಂದು ಹೇಳಿ. MLA ಗಳು Task-force ನಲ್ಲೇನು ತೀರ್ಮಾನ ಮಾಡುತ್ತಾರೆ ಅದರಂತೆ

ಮಾಡಬೇಕು. MLA ಗಳು ಕುಡಿಯುವ ನೀರಿಗೆಂದು ಇರುವುದನ್ನು ಏನೂ ಮಾಡಿಕೊಳ್ಳಲಾಗುವುದಿಲ್ಲ.

ಶ್ರೀ ಮಾಲಿಕಯ್ಯ ಎ. ಗುತ್ತೇದಾರ್: ಇಲ್ಲಿ ಜಿಲ್ಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ Task-force ಎಂದು ಇದೆ.

ಶ್ರೀ ಸಿದ್ದರಾಮಯ್ಯ: ಇಲ್ಲ. MLA ಗಳೇ ಅದಕ್ಕೆ ಅಧ್ಯಕ್ಷರಿರುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಅದು ತಪ್ಪು ಇದೆ.

ಶ್ರೀ ಮಾಲಿಕಯ್ಯ ಎ. ಗುತ್ತೇದಾರ್: ಅದು ತಪ್ಪಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇದರ ಬಗ್ಗೆ ನಾನು ಬೆಳಗ್ಗೆ ಪ್ರಸ್ತಾಪ ಮಾಡಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಅದಕ್ಕೆ MLA ಗಳು ಅಧ್ಯಕ್ಷರಿರುತ್ತಾರೆ.

(ಗೊಂದಲ)

ಅಧ್ಯಕ್ಷರು: ಆಯಿತು, ಸರಿ ಮಾಡುತ್ತೇನೆಂದು ಹೇಳಿದ್ದಾರಲ್ಲ?

(ಗೊಂದಲ)

ಅಧ್ಯಕ್ಷರು: ಹೇಳಿದ್ದಾರಲ್ಲ?

ಶ್ರೀ ಸಿದ್ದರಾಮಯ್ಯ: ಸ್ವಲ್ಪ clarify ಮಾಡಿ. ಅದಕ್ಕೆ MLA ಗಳೇ ಅಧ್ಯಕ್ಷರು.

(ಗೊಂದಲ)

ಅಧ್ಯಕ್ಷರು: ಆಯಿತು, ಸರಿ ಮಾಡುತ್ತೇನೆಂದು ಹೇಳಿದ್ದಾರಲ್ಲ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು): ನಾನು ಸ್ಪಷ್ಟವಾಗಿ ಹೇಳುತ್ತೇನೆ, MLA ಗಳ ಅಧ್ಯಕ್ಷತೆಯಲ್ಲಿಯೇ Task-force Committee ಇದೆ. ಇದರಲ್ಲಿ ಪ್ರಶ್ನೆಯೇ ಇಲ್ಲ.

ಶ್ರೀ ಸಿದ್ದರಾಮಯ್ಯ: ಅದು ತಪ್ಪಿರಬೇಕು ನೋಡಿ.

ಅಧ್ಯಕ್ಷರು: ಆಯಿತು ತಪ್ಪನ್ನು ಸರಿ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: Orders ಆಗಿದೆಯೇ? ತಪ್ಪಾಗಿದೆ ಎಂದು ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಅದರಲ್ಲಿ typing mistake ಆಗಿದೆ.

(ಗೊಂದಲ)

ಅಧ್ಯಕ್ಷರು: Printing ತಪ್ಪಾಗಿದೆ ಎಂದು ಹೇಳಿದ್ದಾರಲ್ಲ.?

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಹೇಳಿದ್ದು ಸರಿ. ವಿರೋಧ ಪಕ್ಷದ ನಾಯಕರು, ತಾವೆಲ್ಲರೂ ಪ್ರಸ್ತಾಪ ಮಾಡುತ್ತಿರುವುದು ವಿದ್ಯುತ್ ಅಭಾವ ಬಗ್ಗೆ. ಖಂಡಿತ ವಿದ್ಯುತ್ ಅಭಾವವಾಗಿದೆ. ವಿದ್ಯುತ್ ಸಮಸ್ಯೆಯನ್ನು ಯಾವ ರೀತಿಯಾಗಿ ಪರಿಹಾರ ಮಾಡಬೇಕೆನ್ನುವುದಕ್ಕೋಸ್ಕರ ನಾಳೆ KPTCL ಅಧಿಕಾರಿಗಳ ಜೊತೆಗೆ ಒಂದು ವಿಶೇಷ ಸಭೆಯನ್ನು ಈಗಾಗಲೇ ನಾನು ನಿಶ್ಚಯ ಮಾಡಿದ್ದೇನೆ. ಅದಕ್ಕೇನು ಮಾಡಬೇಕು, diesel generator ಗೆ

ಸಂಬಂಧಿಸಿದಂತೆ ಏನು ಮಾಡಬೇಕು, ವಿದ್ಯುತ್ ಖರೀದಿ ಎಷ್ಟೆಷ್ಟು ಮಾಡಬೇಕು ಇದೆಲ್ಲವನ್ನೂ ಕೂಡ ಚರ್ಚೆ ಮಾಡಿಕೊಂಡು ಅದಕ್ಕೆ ಎಷ್ಟು ಹಣ ಬೇಕೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಚರ್ಚೆ ಮಾಡಿಕಳೆದ ಬಾರಿ ಯಾವ ರೀತಿ ಬರದ ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆಯೋ ಅದೇ ರೀತಿ ಈ ಬಾರಿಯೂ ಕೂಡ ಪ್ರಯತ್ನ ನಡೆಸುತ್ತೇವೆ. ಇದರಲ್ಲಿ ಖಂಡಿತ ನಾನು ರಾಜಕಾರಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ, ತಮಗೂ ಗೊತ್ತಿದೆ. ಕೇಂದ್ರ್ರದ ನಮ್ಮ ಕೃಷಿ ಸಚಿವರೂ ಕೂಡ ಕರ್ನಾಟಕದಲ್ಲಿ ಭೀಕರ ಬರಗಾಲವಿದೆ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವೆಲ್ಲರೂ ಮತ್ತೊಮ್ಮೆ ಅವರಿಗೂ ಮನವಿ ಮಾಡಿಕೊಳ್ಳೋಣ. ಈಗ ಕರ್ನಾಟಕ ರಾಜ್ಯಕ್ಕೆ ನಾವು ಕೇಳಿದ್ದು 11000 ಕೋಟಿ ರೂಪಾಯಿ. ಆದರೆ, ಬಂದಿದ್ದು 387 ಕೋಟಿ ರೂಪಾಯಿ. ಅದಕ್ಕೋಸ್ಕರ, ಕೇಂದ್ರವೂ ಕೂಡ ಇಂಥ ಸಂದರ್ಭದಲ್ಲಿ ಅತಿ ಹೆಚ್ಚು ನೆರವನ್ನು ಕೊಡುವ ದಿಕ್ಕಿನಲ್ಲಿ, ತರುವ ದಿಕ್ಕಿನಲ್ಲಿ ಒಟ್ಟಿಗೆ ಎಲ್ಲ ಪ್ರಯತ್ನ ನಡೆಸೋಣ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಕುಡಿಯುವ ನೀರಿನ ಸಮಸ್ಯೆಗೆ ನಾವು ಒಟ್ಟು 450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. ಎರಡನೆಯದಾಗಿ, ಮೇವು ಸಮಸ್ಯೆ ಇಲ್ಲದ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ಬಂಡೆಪ್ಪ ಖಾಶೆಂಪೂರ್: ಮೇವಿಗೆ subsidy ಕೊಡಿ. Transport subsidy ಯಿಂದ ಏನೂ ಉಪಯೋಗವಾಗುವುದಿಲ್ಲ. ನಿನ್ನೆ ಇದರ ಬಗ್ಗೆ

ಬಹಳಷ್ಟು ಚರ್ಚೆಯಾಗಿದೆ. ಕೆ.ಜಿ. ಮೇವಿಗೆ 6 ರೂಪಾಯಿ ಆದರೆ 3 ರೂಪಾಯಿಗಳ ಸಬ್ಸಿಡಿ ಕೊಡಿ. ಕಳೆದ ವರ್ಷ ಎಲ್ಲಿ ನೀವು ಮೇವು ಬ್ಯಾಂಕ್ ಓಪನ್ ಮಾಡಿದ್ದಿರಿ ಅಲ್ಲಿ ಯಾರೂ ತೆಗೆದುಕೊಂಡಿಲ್ಲ. ಅದಕ್ಕೆ ಕೇವಲ 8–10 ಕೋಟಿ ರೂಪಾಯಿ ಜಾಸ್ತಿಯಾಗುತ್ತದಷ್ಟೇ. ಅಷ್ಟಕ್ಕೇಕೆ ಜಿಪುಣತನ ಮಾಡುತ್ತಿದ್ದೀರಿ? ಅದನ್ನು ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಸಲಹೆ ಕೊಟ್ಟಿದ್ದೀರಿ. ಅದನ್ನು ಗಮನಿಸುತ್ತೇನೆ.

ಶ್ರೀ ಬಂಡೆಪ್ಪ ಖಾಶೆಂಪೂರ್: ಗಮನಿಸುವುದಲ್ಲ. ಇವತ್ತು ನೀವು ಹೇಳಿಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಬಿತ್ತನೆ ಬೀಜದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಬಿತ್ತನೆ ಬೀಜದ ಸಮಸ್ಯೆ ಇಲ್ಲದ ಹಾಗೆ ನಾವು ನೋಡಿಕೊಳ್ಳುತ್ತಿದ್ದೇವೆ. ರಸಗೊಬ್ಬರದ ಸಮಸ್ಯೆಯೂ ಇಲ್ಲದ ಹಾಗೆ ನಾವು ನೋಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು: ಅವರು ಉತ್ತರ ಹೇಳಲಿ.

ಶ್ರೀ ಸಿದ್ದರಾಮಯ್ಯ: ಉತ್ತರ ಕೊಡುವುದಕ್ಕೆ ಆಮೇಲೆ ಕಷ್ಟವಾಗುತ್ತದೆ. ನಾನು ಈಗ ಬಹಳ ಮುಖ್ಯವಾಗಿ ಪ್ರಸ್ತಾಪ ಮಾಡಿರತಕ್ಕಂಥದ್ದು ಏನೆಂದರೆ, ಕುಡಿಯುವ ನೀರಿನ ಸಮಸ್ಯೆ. ಬೀಜ, ಗೊಬ್ಬರದ ಬಗ್ಗೆ ಆಮೇಲೆ ನೋಡೋಣ. ಮಳೆ ಬಿದ್ದಮೇಲೆ ಅವೆಲ್ಲವನ್ನೂ ಮಾಡಿಕೊಳ್ಳೋಣ. ಈಗ ಬಹಳ ಮುಖ್ಯವಾಗಿ ಕುಡಿಯುವ ನೀರಿಗೆ, ದನಕರುಗಳಿಗೆ ಮೇವು ಬೇಕಾಗಿದೆ. ಇವೆರಡನ್ನೂ ಬಹಳ ಮುಖ್ಯವಾಗಿ ಮಾಡಬೇಕಾಗಿದೆ.

ಉದ್ಯೋಗ ಕೊಡಲಿಕ್ಕೆ NREGS ಇದೆ. Additional action plan ಗಳನ್ನು ಮಾಡಿಕೊಂಡು ಎಲ್ಲೆಲ್ಲಿ ಕೆಲಸ ಕೇಳುತ್ತಾರೆ, ಅಲ್ಲಿ ಕೊಡಬೇಕು. ಅದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅವತ್ತು ಬಂದಿದ್ದಾಗ ಶರದ್ ಪವಾರ್‌ರವರೂ ಒಪ್ಪಿಕೊಂಡಿದ್ದಾರೆ. ಜೈರಾಂ ರಮೇಶ್‌ರವರೂ ಒಪ್ಪಿಕೊಂಡಿದ್ದಾರೆ. ಅದಕ್ಕೆ ಬೇಕಾದರೆ ನೀವು ಹೋಗಿ ಒತ್ತಾಯ ಮಾಡಿ, ಇನ್ನೂ NREGSನಲ್ಲಿ ಹಣ ಕೊಡುತ್ತಾರೆ. ನಮಗೆ ಇವತ್ತು ಬಹಳ ಮುಖ್ಯವಾಗಿರತಕ್ಕಂಥದ್ದು, ಇವತ್ತು ಎಲ್ಲಾ ಕಡೆ acute drinking water problem ಇದೆ. ಇದರಲ್ಲಿ ಮಾತ್ರ ಯಾವುದೇ ಮೀನ ಮೇಷ ಎಣಿಸುವುದಕ್ಕೆ ಹೋಗಬಾರದು. Election ಬೇರೆ ಬರುತ್ತಿದೆ. ಇದು ನಿಮಗೂ, ನಮಗೂ ಇಬ್ಬರಿಗೂ ತೊಂದರೆ. MLA ಗಳು ಹಳ್ಳಿಗಳಿಗೆ ಹೋಗಿ ಹೋಗಿ ಮುಖ ತೋರಿಸುವುದಕ್ಕಾಗುವುದಿಲ್ಲ. ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ. ಆ ಪರಿಸ್ಥಿತಿ ಇದೆ. ಅದಕ್ಕೋಸ್ಕರವಾಗಿ ನೀವು ಸ್ವಲ್ಪ ಧಾರಾಳವಾಗಿ, ಉದಾರವಾಗಿ ಹಣ ಬಿಡುಗಡೆ ಮಾಡಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ" ನಾನು ಈ ಸದನಕ್ಕೆ ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ, ಇದು ಜಾನುವಾರುಗಳಿಗೆ, ಮನುಷ್ಯರಿಗೆ ಕುಡಿಯುವ ನೀರಿನ ಅವಶ್ಯಕತೆ ಎಷ್ಟಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಈಗಾಗಲೇ ಜಿಲ್ಲಾಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಏನು ಸಮಸ್ಯೆ ಇದೆ ಎಂಬ ಬಗ್ಗೆ ಅವರ ಮುಖಾಂತರ ಕೂಡ demand

ತರಿಸಿಕೊಂಡಿದ್ದೇವೆ. ಮಾರ್ಚ್, ಏಪ್ರಿಲ್ ಒಳಗಾಗಿಯೇ ಒಟ್ಟು 450 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಏನು ಯೋಚನೆ ಮಾಡಿದ್ದೇವೆ, ಇದರ ಮುಖಾಂತರ ಖಂಡಿತ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ತೀರ್ಮಾನ ಮಾಡಿ ಆ ದಿಕ್ಕಿನಲ್ಲಿ ಹಣವನ್ನು ಕೂಡ ಬಿಡುಗಡೆ ಮಾಡುತ್ತೇವೆ. ಇನ್ನು, ವಿದ್ಯುತ್ ಬಗ್ಗೆ ಸುಮ್ಮನೆ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾಳೆ ನಾನು ಸಭೆ ನಡೆಸಿ, ಮಾನ್ಯ ಮುಖ್ಯಮಂತ್ರಿಯವರ ಹತ್ತಿರವೂ ಚರ್ಚೆ ಮಾಡಿ ಈ ವಿದ್ಯುತ್ ಬಗ್ಗೆ, generatior ಬಗ್ಗೆ ಇರಬಹುದು, ವಿದ್ಯುತ್ ಖರೀದಿ ಬಗ್ಗೆ ಇರಬಹುದು, ಇನ್ನೂ ಅಧಿವೇಶನ ಸಾಕಷ್ಟು ದಿನ ನಡೆಯುವುದರಿಂದ ಆ ಸಮಸ್ಯೆಯನ್ನೂ ಕೂಡ ಯಾವ ರೀತಿಯಿಂದ ಪರಿಹಾರ ಮಾಡಬಹುದು ಎನ್ನುವ ಬಗ್ಗೆ ನಿಮ್ಮ ಸಲಹೆಯನ್ನೂ ತೆಗೆದುಕೊಂಡು ಆ ಕಡೆಗೂ ನಾನು ಗಮನ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಈ ಅಧಿವೇಶನ ಈ ತಿಂಗಳ 15ಕ್ಕೆ ಮುಗಿಯುತ್ತದೆ. ಬಹುಶಃ ಇನ್ನು 15–20 ದಿವಸಗಳಲ್ಲಿ code of conduct issue ಆಗುತ್ತದೆ. Code of conduct ಬಂದ ಮೇಲೆ ನೀವೂ control ಮಾಡುವುದಕ್ಕಾಗುವುದಿಲ್ಲ, ಅಧಿಕಾರಿಗಳು ಯಾರ ಮಾತೂ ಕೇಳುವುದಿಲ್ಲ. ದಯಮಾಡಿ, ನೀವು ಏನೇ ಮಾಡುವುದಾದರೂ ಕೂಡ action plan ಅನ್ನು ಈ month end ಒಳಗೆ finish ಮಾಡಿ ಅವರ ಕೈಗೆ ಕೊಟ್ಟು ದುಡ್ಡಿನ ವ್ಯವಸ್ಥೆ ಮಾಡಿದರೆ ಏನಾದರೂ ಕೆಲಸ ಮಾಡುತ್ತಾರೆ. ಇಲ್ಲವೆಂದರೆ

ಖಂಡಿತವಾಗಿಯೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ. ಮಾಡದೇ ಇದ್ದರೆ ಖಂಡಿತವಾಗಿಯೂ ಕಷ್ಟವಾಗುತ್ತದೆ. ಆಮೇಲೆ, ನಿರಂತರ ಜ್ಯೋತಿಗೆ ನೀವು ಸರ್ವಿಸ್ ಮಾಡುವ ಕೆಲಸ ಮಾಡಿದರೆ ಬಹುಶಃ ಆ ಹಳ್ಳಿಗಳ ಸಮಸ್ಯೆಯಾದರೂ ಬಗೆಹರಿಯುತ್ತದೆ 90% ಕೆಲಸ ಮುಗಿದಿದೆ, ಇನ್ನು 10% ಕೆಲಸ ಉಳಿದಿದೆ. ನಿರಂತರ ಜ್ಯೋತಿಯ ಕೆಲಸಗಳು ಒಂದು ಕಡೆಯೂ ಮುಗಿದಿಲ್ಲ. ನನ್ನ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ, 16 feeders ಇವೆ. ಅದರಲ್ಲಿ ಚಾಲೂ ಆಗಿರುವುದು 6 ಮಾತ್ರ, ಇನ್ನು 10ರದ್ದು 90% ಕೆಲಸವಾಗಿ ಅಲ್ಲಿಗೇ ನಿಂತಿದೆ. ಅದನ್ನಾದರೂ ಚಾಲನೆ ಮಾಡಿದರೆ ಕುಡಿಯುವ ನೀರಿನ ಸಮಸ್ಯೆಯೇ ಬಗೆಹರಿಯುತ್ತದೆ. ವಿದ್ಯುಚ್ಛಕ್ತಿಯಿಂದಾಗಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಜಯಚಂದ್ರರವರೆ, ಅದಕ್ಕೆ ನಾನು ಹೇಳಿದೆ. ಕುಡಿಯುವ ನೀರಿನ ಬಗ್ಗೆ, ಮೇವಿನ ಬಗ್ಗೆ, ರಸಗೊಬ್ಬರದ ಬಗ್ಗೆ, ಉಳಿದೆಲ್ಲದರ ಬಗ್ಗೆ ನಾನು ಸ್ಪಷ್ಟ ಮಾಡಿದ್ದೇನೆ. KPTCL ಅಧಿಕಾರಿಗಳ ಜೊತೆ ಚರ್ಚೆ ಮಾಡದೆ ಇಲ್ಲಿ ಸುಮ್ಮನೆ ನಾನು ಆಶ್ವಾಸನೆ ಕೊಡುವುದಿಲ್ಲ. ನಾನು ನಾಳೆ ವಿಶೇಷ ಸಭೆ ಮಾಡುತ್ತೇನೆ. ಈ ಸದನ ಮುಗಿಯುವುದರೊಳಗೆ ನಾವೇನು ಮಾಡುತ್ತೇವೆಂಬುದನ್ನು ಖಂಡಿತ ನಾನು clear ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಇಲ್ಲಿ ಚರ್ಚೆ ಮಾಡಿದ ಮೇಲೆ ಒಂದು statement ಅನ್ನು release ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಖಂಡಿತ.

ಶ್ರೀ ಟಿ.ಬಿ. ಜಯಚಂದ್ರ: ಆಗ ನಾವು ಹಳ್ಳಿಗಳಿಗೆ ಹೋದಾಗ ಇಂಥ ಸಮಸ್ಯೆ ಆಗಿತ್ತು ಹೀಗಾಗಿದೆ ಎಂದು ಹೇಳವುದಕ್ಕಾದರೂ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಖಂಡಿತ, ಮಾನ್ಯ ಸಭಾಧ್ಯಕ್ಷರೆ, ಈ ಸದನ ಮುಗಿಯುವುದರೊಳಗಾಗಿಯೇ ವಿದ್ಯುತ್‌ನ ಬಗ್ಗೆ ನಾವು ಯಾವ ರೀತಿಯಾಗಿ ಮಾಡಲು ಯೋಚನೆ ಮಾಡಿದ್ದೇವೆ ಎಂಬುದರ ಬಗ್ಗೆ ಈ ಸದನದ ಮುಂದೆ ಸ್ಪಷ್ಟ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: ನಮಗೆ ಇನ್ಯಾವುದೂ ಸಮಸ್ಯೆ ಇಲ್ಲ. ಕುಡಿಯುವ ನೀರಿನದೇ ಸಮಸ್ಯೆ.

ಶ್ರೀ ಕೆ.ಎಸ್. ಈಶ್ವರಪ್ಪ: ತಾವು ವಿರೋಧ ಪಕ್ಷದ ನಾಯಕರೂ ಸೇರಿ ಈ ಸದನ ಮೆಚ್ಚುತ್ತದೆಂದು ನಾನು ಭಾವಿಸುತ್ತೇನೆ. ಕಳೆದ ಬಾರಿ ನಾವೇನೇನು ಪ್ರಯತ್ನ ಮಾಡಿ ಬರದ ಸಮಸ್ಯೆ ಪರಿಹಾರ ಮಾಡಿದ್ದೇವೆಯೋ, ನೀರಿನ ಬಗ್ಗೆ, ವಿದ್ಯುತ್ ಬಗ್ಗೆ, ಮೇವಿನ ಬಗ್ಗೆ, ರಸಗೊಬ್ಬರದ ಬಗ್ಗೆ ಅದೇ ರೀತಿ ಈ ಬಾರಿಯೂ ಮಾಡುತ್ತೇವೆ. ನಮಗೊಂದು ಸವಾಲಿದು. ಇದರಲ್ಲೇನೂ ಅನುಮಾನವಿಲ್ಲ. ಜೊತೆಗೆ, ನೀವೆಲ್ಲಾ ಕಳೆದ ಬಾರಿ ಯಾವ ರೀತಿ ಸಹಕಾರ ಕೊಟ್ಟಿದ್ದೀರೋ,. ಅದೇ ರೀತಿಯ ಸಹಕಾರವನ್ನು ಈಗಲೂ ತೆಗೆದುಕೊಳ್ಳುತ್ತೇವೆ. ತಾವು ವಿದ್ಯುತ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅದು ಸರಿ ಇದೆ. ನಾಳೆ ವಿಶೇಷ ಸಭೆಯನ್ನು ಕರೆದು ಮಾನ್ಯ ಮುಖ್ಯಮಂತ್ರಿಯವರ ಹತ್ತಿರವೂ ಚರ್ಚೆ ಮಾಡಿ ಹಣ ಎಷ್ಟು ತರಬೇಕು, ಏನೇನು ಪ್ಲ್ಯಾನ್ ಮಾಡಿದ್ದೇವೆ, action plan ಏನು, ಯಾವ ರೀತಿಯಾಗಿ ಈ

ಬರಗಾಲವನ್ನು ಎದುರಿಸುತ್ತೇವೆ ಎನ್ನುವ ಬಗ್ಗೆ ಈ ಸದನ ಮುಗಿಯುವುದರೊಳಗೆ ನಿಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಸಿದ್ದರಾಮಯ್ಯ: ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಂದು ಕೋಟಿ ರೂಪಾಯಿ deposit ಇಟ್ಟಿದ್ದೇವೆಂದು ಹೇಳಿದ್ದೀರಿ. ಆ ಒಂದು ಕೋಟಿ ರೂಪಾಯಿ deposit ಇದೆಯೋ, ಇಲ್ಲವೋ ಎನ್ನುವುದನ್ನು ಖಾತ್ರಿ ಮಾಡಿಕೊಳ್ಳಬೇಕು. ಜಿಲ್ಲಾಧಿಕಾರಿಗಳಿಗೆ ಒಂದೊಂದು ಕೋಟಿ ರೂಪಾಯಿ ಕೊಡುವ ಬಗ್ಗೆ, ಪವರ್ ಬಗ್ಗೆ ಗಮನ ಕೊಡಬೇಕು. Diesel ಅಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಪವರ್‌ಗೆ ಕಳೆದ ಸಾರಿ ಕೂಡ ಅವರಿಗೆ ಸ್ವಲ್ಪ advance ಕೊಡಬೇಕಾಗಿತ್ತು. ಇಲ್ಲವೆಂದರೆ ಸಮಸ್ಯೆಯಾಗುತ್ತದೆಂದು ಇದ್ದರು. ಕಳೆದ ಬಾರಿ ನಾವು ಎಲ್ಲ ಜಿಲ್ಲಾಧಿಕಾರಿಗಳೂ ಒಂದು ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆ. ಈ ಬಾರಿಯೂ ಕೂಡ ಮಾಡಿಯೇ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಅದು ಮಾಡಬೇಕು. ಇದು ಫೆಬ್ರವರಿ ತಿಂಗಳು. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಬಹಳ severe ಆಗಿ ಆಗುತ್ತದೆ. ಫೆಬ್ರವರಿ ತಿಂಗಳಿಗೆ, ಮಾರ್ಚ್ ತಿಂಗಳಿಗೆ, ಏಪ್ರಿಲ್ ತಿಂಗಳಿಗೆ ಈ 3 ತಿಂಗಳಿಗೂ ಕೂಡ ಒಂದು contingency action plan ಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಮಾಡಿಕೊಂಡರೇ ಜನರಿಗೆ ಕುಡಿಯುವ ನೀರು ಕೊಡುವುದಕ್ಕಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಆ ಬಗ್ಗೆ ಅಧಿಕಾರಿಗಳ

ಜೊತೆ ಕುಳಿತು ಚರ್ಚೆ ಮಾಡಿ code of conduct ಬರುವುದಕ್ಕಿಂತ ಮುಂಚಿತವಾಗಿ ಇವನ್ನೆಲ್ಲ ಮಾಡಬೇಕು.

ಶ್ರೀ ಎಂ.ಬಿ. ಪಾಟೀಲ್: ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸಿದರೆ ಮಾತ್ರ ನಮ್ಮ ಚಿಕ್ಕಪಡಸಲಗಿ ಬ್ಯಾರೇಜ್, ಚಿಕ್ಕ ಗಲಗಲಿ ಬ್ಯಾರೇಜ್ ಇನ್ನಿತರ ನೂರಾರು villages ಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಮಹಾರಾಷ್ಟ್ರದ ಜೊತೆ ಮಾತನಾಡಿ ಕೊಯ್ನಾದಿಂದ ನಮಗೆ ನೀರು ಕೊಡಿಸುವಂಥ ವ್ಯವಸ್ಥೆಯಾಗಬೇಕು.

ಶ್ರೀ ಶ್ರೀಕಾಂತ ಕುಲಕರ್ಣಿ ಸುಬ್ಬರಾವ್: ನಾನು ನಿಯಮ 69ರ ಕೆಳಗೆ ಕೃಷ್ಣಾ ನದಿಗೆ ನೀರು ಬಿಡುವ ಸಲುವಾಗಿ ಒಂದು ಸೂಚನೆ ಕೊಟ್ಟಿದ್ದೆ, ದಯವಿಟ್ಟು ನಾಳೆ ನಮಗೆ ಅವಕಾಶಕೊಡಿ ಮಾತನಾಡುತ್ತೇವೆ.

ಅಧ್ಯಕ್ಷರು: ಚರ್ಚೆಯೇ ಮುಗಿದಿಲ್ಲ. ನೀವು 69ರ ಕೆಳಗೆ ಸೂಚನೆ ಕೊಟ್ಟಿದ್ದೆ ಎಂದರೆ ಹೇಗೆ?Please.

ಶ್ರೀ ಕೆ.ಎಸ್.ಈಶ್ವರಪ್ಪ: ಕೃಷ್ಣಾ ನದಿಯ ಪಾತ್ರದ ಅಡಿಯಲ್ಲಿ ಬರುವ ಎಲ್ಲಾ ಶಾಸಕ ಮಿತ್ರರನ್ನು ಕರೆದು ಸಭೆ ಮಾಡಿ ಈ ಸಮಸ್ಯೆ ಪರಿಹರಿಸುತ್ತೇವೆ.

ಶ್ರೀ ಎಂ.ಬಿ. ಪಾಟೀಲ್: ಮಹಾರಾಷ್ಟ್ರದಿಂದ ನೀರು ಬಿಡಿಸಿದರೆ ನಮ್ಮ Problem solve ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದಾಗ ನಿಮಗೆ ನೀರು ಬಿಡಿಸಿರಲಿಲ್ಲವೆ?

ಶ್ರೀ ಎಂ.ಬಿ. ಪಾಟೀಲ್: ಕಳೆದ ಸಾರಿ ಬಿಡಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ: ಕಳೆದ ಸಾರಿಯೂ ಬಿಟ್ಟಿದ್ದರೂ ಈ ಸಾರಿ ನೀರು ಬಿಡಿಸುತ್ತೇವೆ.

ಶ್ರೀ ಎಂ.ಬಿ. ಪಾಟೀಲ್: ಅದಕ್ಕೆ ತಾವು ಸ್ವಲ್ಪ ಸೀರಿಯಸ್ ಆಗಿ ಬಿಡಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಐದು ವರ್ಷಗಳಿಂದ ಬಿಡಿಸಿ ಈ ವರ್ಷ ಬಿಡಿಸದೇ ಇರುತ್ತೇವೆಯೇ? ಈ ಸಾರಿಯೂ ಬಿಡಿಸುತ್ತೇವೆ.

ಡಾ: ಎಂ.ಸಿ. ಸುಧಾಕರ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರೇನು ಈಗ ವಿಧಾನ ಸಭಾ ಕ್ಷೇತ್ರಗಳಿಗೆ ಅನುದಾನ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಬಹುಶಃ ನಮ್ಮ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಪರಿಸ್ಥಿತಿ ಬಹಳ ವಿಭಿನ್ನವಾಗಿದೆ. ಅಲ್ಲಿರುವ ಸಮಸ್ಯೆ ಬಹಳ ಭೀಕರವಾಗಿದೆ. ಕುಡಿಯುವ ನೀರಿಗೆ ಪ್ರತಿ ದಿವಸ ನಮಗೆ ತೊಂದರೆಯಿದೆ. ಸಮಸ್ಯೆ ಎಲ್ಲಿ ಹೆಚ್ಚು ಇದೆ ಅಲ್ಲಿ ಜಿಲ್ಲಾಧಿಕಾರಿಗಳಿಂದ ತಾವು ಮಾಹಿತಿಯನ್ನು ತರಿಸಿಕೊಂಡು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹೆಚ್ಚು ಅನುದಾನ ಕೊಡುವುದು ಒಂದು ವಿಚಾರ. ಮೇವಿನ ಬಗ್ಗೆ ಮಾತನಾಡಿದರು. ನಮ್ಮ ಕಡೆ ಹಾಲು ಕರೆಯುವ ಹಸುಗಳು ಹೆಚ್ಚಾಗಿದ್ದು ಹೈನುಗಾರಿಕೆಯ ಮೇಲೆ ಹೆಚ್ಚು ಅವಲಂಭಿತರಾಗಿದ್ದಾರೆ. ಸನ್ಮಾನ್ಯ ಸಚಿವರೆ ದಯವಿಟ್ಟು ಆ ಹಸುಗಳ್ಯಾವುವೂ ಗೋಶಾಲೆಗಳಿಗೆ ಹೋಗುವುದಿಲ್ಲ. ಬೆಳಿಗ್ಗೆ ಮತ್ತು ಸಂಜೆ ಹಾಲು ಕರೆಯಬೇಕು. ಅವುಗಳಿಗೆ ದಯವಿಟ್ಟು ಕೆಎಂಎಫ್ ಮುಖಾಂತರ ಮೇವು ಕೊಡುವಂಥ ವ್ಯವಸ್ಥೆ ಮಾಡಬೇಕು. ಏಕೆಂದರೆ, ಗೋಶಾಲೆಗಳಿಗೆ

ಹೋಗುವಂಥ ಹಸುಗಳೇ ಬೇರೆ ಇರುತ್ತವೆ. ಇದೊಂದು ಬಹಳ ಗಂಭೀರವಾದಂಥ ವಿಚಾರ, ಈ ಹಿಂದೆಯೂ ಕೂಡ ಇದರ ಬಗ್ಗೆ ಹಲವಾರು ಬಾರಿ ಪ್ರಸ್ತಾಪಿಸಿದ್ದೆ. ದಯವಿಟ್ಟು ಈ ಸಮಸ್ಯೆ ಪರಿಹರಿಸಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಸಚಿವರೆ, ಬಹುಗ್ರಾಮ ಯೋಜನೆಗಳು ಎಲ್ಲೆಲ್ಲಿ ಇವೆ ಅವುಗಳಿಗೆ ಜನರೇಟರ್ ಮತ್ತು ಡೀಸೆಲ್ ಕೊಟ್ಟರೆ ಎಷ್ಟೋ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ವಿಶೇಷವಾಗಿ ಬಹುಗ್ರಾಮ ಯೋಜನೆ ಎಲ್ಲಿ ಇದೆ ಅಲ್ಲಿಗೆ ಕೊಡಿ. ನಮ್ಮ ಚಿಕ್ಕೋಡಿ ತಾಲ್ಲೂಕಿನ 14 ಗ್ರಾಮ ಪಂಚಾಯಿತಿ ಕೂಡಿ ಒಂದು ಬಹುಗ್ರಾಮ ಯೋಜನೆ ಮಾಡಿದ್ದಾರೆ. ಇಂಥ ಕಡೆ ಜನರೇಟರ್ ಮತ್ತು ಡೀಸೆಲ್ ಕೊಡುವಂಥ ವ್ಯವಸ್ಥೆಯಾಗಬೇಕು.

ಶ್ರೀ ಸುರೇಶ್‌ಗೌಡ: ಎಲ್ಲಾ ಕಡೆನೂ ಕುಡಿಯುವ ನೀರಿಗೆ ಬಹಳ ಕಷ್ಟವಿದೆ, ಹೆಚ್ಚಿನ ಅನುದಾನ ಕೊಟ್ಟು ಈ ಸಮಸ್ಯೆ ಪರಿಹರಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಕಳೆದ ಬಾರಿಯೂ ಈ ಬಾರಿಯಾಗಲಿ ತಾವು ಹೇಳಿದಷ್ಟು ಕೊಟ್ಟಿದ್ದೇವೆ ತೃಪ್ತಿಯಾಗಿದೆ ತಾನೆ, ಆಗಿದ್ದರೆ ಆಗಿದೆ ಎಂದು ಹೇಳಿ ಇಲ್ಲದಿದ್ದರೆ ಇಲ್ಲವೆಂದು ಹೇಳಿ.

ಶ್ರೀ ಸುರೇಶ್‌ಗೌಡ: ಕೊಟ್ಟಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ: ಕೊಟ್ಟಿದ್ದೇವೆ ಮತ್ತೆ ಇನ್ನೇನು ಬೇಕು? ಮತ್ತೆ ಕೊಡುತ್ತೇವೆ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ. ರೇವಣ್ಣನವರು ತಾವು ಗಮನ ಸೆಳೆಯಿರಿ.

6. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಕಾವೇರಿ ಬೇಸಿನ್‌ನಲ್ಲಿ ಅನುದಾನ ಕೊಡದೆ. ಕಾಮಗಾರಿಗಳ ಕೆಲಸ ಆಗದಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ: ಕಾವೇರಿ ಬೇಸಿನ್‌ನಲ್ಲಿ ಇವತ್ತು ಹೆಚ್ಚಿನ ಅನುದಾನ ಕೊಡದೇ ಕಾಮಗಾರಿಗಳ ಕೆಲಸ ಆಗಿದಿರುವ ಬಗ್ಗೆ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಮಂತ್ರಿಗಳು ಇಲ್ಲ.

ಅಧ್ಯಕ್ಷರು: ಉತ್ತರ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮೊದಲನೆಯದಾಗಿ ಈಗಾಗಲೇ 7–15 ಆಯಿತು.

ಶ್ರೀ ಹೆಚ್.ಡಿ. ರೇವಣ್ಣ: ಕಳೆದ ಸಾರಿಯೂ ಆಗಿಲ್ಲ.

ಅಧ್ಯಕ್ಷರು: ಎರಡು ದಿವಸಗಳಿಂದ ಪೆಂಡಿಂಗ್ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಸ್ವಲ್ಪ ಕೇಳಿ, ನಿಮಗೆ ಸುಮ್ಮನೆ ಎಂಥದೋ ಒಂದು ಉತ್ತರ ಬೇಕೋ?

ಶ್ರೀ ಹೆಚ್.ಡಿ. ರೇವಣ್ಣ: ನಿಮ್ಮದು ಒಪ್ಪಿಕೊಂಡಾಯಿತಲ್ಲ ಬಿಡಿ. ನಾವು ನಿಮ್ಮನ್ನು ಏನಾದರೂ ಪ್ರಶ್ನೆ ಮಾಡುತ್ತಿದ್ದೇವೆಯೇ? ನಾವು ಗ್ರಾಮೀಣಾಭಿವೃದ್ಧಿ ಸಚಿವರನ್ನು ಪ್ರಶ್ನೆ ಮಾಡುತ್ತಿಲ್ಲ. ಕಾವೇರಿ ಬೇಸಿನ್ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾ ಮರಣಶಾಸನ ಎಂದು ಹೇಳಿದರು. ದುಡ್ಡು ಕೊಡಬೇಕೆಂದು ಕೇಳುತ್ತಿದ್ದೇವೆ.